SRI D. DEVARAJ URS.—If he does not want to cut down the names in his list, then let the time be allotted to both the sides. It is left to the Speaker to allot the time. We have got 4 hours. The Speaker can allot time to each member and put the limit on the time.

SRI B. B. SAYANAK.—We will stick to the timelimit.

MR. SPEAKER.—Both the Whips can discuss amongst themselves and arrive at an agreed formula so far as timing is concerned.

BUDGET ESTIMATES FOR 1979-80

Demands for Grants Demand No. 4, 6, 23, 24, 31, 32, 35 to 41, 46, 47, and 62

(*Debate Continued*)

೨.೦೦ ಪಿ. ಎಂ.

† ಶ್ರೀ ಗಟ್ಟಿ ಚಂದ್ರಶೇಖರ್ (ಗುಬ್ಬಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರುವ ಹದಿನಾರು ಬೇಡಿಕೆಗಳು ಹಾಗೂ ಮಾನ್ಯ ಚಂದ್ರೇಗೌಡರು ಮಂಡಿಸಿರುವ ಒಂದು ಬೇಡಿಕೆಯನ್ನು ಸಮರ್ಥನೆ ಮಾಡುತ್ತೇನೆ. ಈ ಸಭೆ ಇವತ್ತು ''ವಿಧಾನ ಸಭೆ'' ಕಂಡ ಹಾಗೆ ಕಾಣುತ್ತಿದೆ. ಎಂದಿಗಿಂತ ಇಂದು ಹೆಚ್ಚಿನ ಸದಸ್ಯರು ಸಭೆಯಲ್ಲಿದ್ದಾರೆ. ಆರು ಜನ ಮಂತ್ರಿಗಳಿದ್ದಾರೆ. ಆದರೆ, ಮಹಿಳಾ ಸದಸ್ಯರೊಬ್ಬರೂ ಇಲ್ಲ. ಇಂದು ಇಲ್ಲಿ ಹೆಚ್ಚು ಸದಸ್ಯರಿರುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿರುವುದೇ ಕಾರಣ. ಅವರೊಂದು ಆಕರ್ಷಣೆ. ಬಾಕಿ ದಿವಸ ಬೇಡಿಕೆಗೆ ಸಂಬಂಧಿಸಿದ ಮಂತ್ರಿಗಳು ಮಾತ್ರ ಇರುತ್ತಿದ್ದರು. ಮದುವೆಯಾದ ಮೇಲೆ ಹೆಣ್ಣು-ಗಂಡುಗಳು ಮಧುಚಂದ್ರಕ್ಕೆ ಹೊರಟು ಹೋಗುವ ಹಾಗೆ, ಮಂತ್ರಿಗಳೂ ಸಹ ತಮ್ಮ ಬೇಡಿಕೆ ಮುಗಿದ ಮೇಲೆ ಮದುವೆಯಾಯಿತೆಂದು ತಿಳಿದು ಮಧುಚಂದ್ರಕ್ಕೆ ಹೊರಟು ಹೋಗಿದ್ದಾರೆ !

ಶ್ರೀ ಮುಳ್ಳೂರು ಆನಂದರಾವ್.—ಯಾರನ್ನಾದರೂ ಕರೆದುಕೊಂಡು ಹೋಗಿರುವರೆ !

ಶ್ರೀ ಗಟ್ಟಿ ಚಂದ್ರಶೇಖರ್.— ನನಗೇನು ಗೊತ್ತು ? ಅದಕ್ಕೆಲ್ಲ ನೀವು ಮಾಡ್ಕೊಂಡಿದ್ದೀರಲ್ಲ. ಮೈಸೂರಿನ ಅರಮನೆಯಲ್ಲಿ ಒಬ್ಬ ದೊಡ್ಡ ಸಂಗೀತಗಾರರಿದ್ದರು. ಮಹಾರಾಜರು ಬಂದು ಸಿಂಹಾಸನದಲ್ಲಿ ಕುಳಿತುಕೊಂಡ ತಕ್ಷಣ ಅವರು ಸಂಗೀತ ಪ್ರಾರಂಭ ಮಾಡಬೇಕಾಗಿತ್ತು. ಪಾಪ ! ಆ ಸಂಗೀತಗಾರ ಹುಟ್ಟು ಕುರುಡ; ಮಹಾರಾಜರು ಬಂದದ್ದು, ಸಿಂಹಾಸನ ಏರಿದ್ದು ಗೊತ್ತಾಗುತ್ತಿರಲಿಲ್ಲ. ಆದುದರಿಂದ, ಅದು ಅವನಿಗೆ ಗೊತ್ತಾಗಲೆಂದು ಚಿವುಟಿದಾಗ ಆತ ಸಂಗೀತ ಪ್ರಾರಂಭ ಮಾಡುತ್ತಿದ್ದ ! ಹಾಗೆಯೇ ವಿರೋಧ ಪಕ್ಷದವರಿದ್ದರೆ ನನಗೂ ಮಾತನಾಡಲಿಕ್ಕೆ ಚೆನ್ನಾಗಿರುತ್ತಿತ್ತು. ಆದರೆ, ಅದೇಕೋ ಸ್ಮಶಾನ ಸದೃಶವಾಗಿದೆ. ಕೆಲವರು ದೆಹಲಿಗೆ ಹೋಗಿದ್ದಾರೆ, ಮತ್ತೆ ಇಲ್ಲಿರುವವರು ಚಿಂತಾಕ್ರಾಂತರಾಗಿದ್ದಾರೆ. ಅದಕ್ಕಾಗಿ ನಾನು ವಿಷಾದಪಡುತ್ತೇನೆ. ಈ ಅಧಿವೇಶನದಲ್ಲಿ ನಾನು ಮೊದಲಬಾರಿಗೆ ಮಾತನಾಡುತ್ತಿರುವುದರಿಂದ ಮಾನ್ಯ ಮುಖ್ಯ ಮಂತ್ರಿಗಳನ್ನು ಬಹಳ ಹೆಮ್ಮೆಯಿಂದ ಅಭಿನಂದಿಸುತ್ತೇನೆ. ಗ್ರೋವರ್ ಆಯೋಗದ ವರದಿಯ ಅಗ್ನಿಪರೀಕ್ಷೆಯಲ್ಲಿ ತೇರ್ಗಡೆಯಾಗಿ ಪುಟವಿಟ್ಟ ಚಿನ್ನದಂತೆ ತೇಜೋಪುಂಜರಾಗಿ ಅವರು ಹೊರಬಂದಿದ್ದಾರೆ. ಅದಕ್ಕಾಗಿ ನಾವೆಲ್ಲರೂ ಸಂತೋಷಪಡೋಣ.

ಶ್ರೀ ಮುಳ್ಳೂರು ಆನಂದರಾವ್.—ಇನ್ನೂ ಬಂದಿಲ್ಲ, ವರದಿ ಮಾತ್ರ ಹೊರಗೆ ಬಂದಿದೆ. ಅಪಾದನೆಗಳು ಮಾತ್ರ ಹಾಗೆ ಇವೆ.

ಶ್ರೀ ಗಟ್ಟಿ ಚಂದ್ರಶೇಖರ್.— ಯಮಧರ್ಮರಾಯ ಬಂದಾಗಲೇ ನಿಮಗೆ ಗೊತ್ತಾಗುವುದು ! ಚಾಮುಂಡಿ ಬೆಟ್ಟದ ಮೇಲಿರುವವರು ನೀವು. ಭ್ರಷ್ಟಾಚಾರ ಆರೋಪದಿಂದ ಅವರು ಮುಕ್ತರಾಗಿದ್ದಾರೆ, ಅಗ್ನಿಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ.

ಶ್ರೀ ಮಳ್ಳೂರು ಆನಂದರಾವ್.—ಬಹುಶಃ ತಾವು ಪತ್ರಿಕೆಗಳನ್ನು ಓದುತ್ತೀರೆಂದು ತಿಳಿದು ಕೊಂಡಿದ್ದೇನೆ.

ಶ್ರೀ ಗಟ್ಟಿ ಚಂದ್ರಶೇಖರ್. ಓದುತ್ತೇನೆ ದುಡ್ಡು ಕೊಟ್ಟು ತರಿಸಿ ಓದುವುದಿಲ್ಲ ಇಲ್ಲಿಗೆ ಬಂದು ಓದುತ್ತೇನೆ! ಪಕ್ಷಪಾತವಂತೆ, ಸ್ವಜನ ಪಕ್ಷಪಾತವಂತೆ ‘‘ಫೆವರಿಟಿಸಂ’’ ಎಂದರೆ ಏನೆಂಬುದನ್ನು ನಿಘಂಟು ತೆಗೆದು ನೋಡಿ. ನಿಮ್ಮನ್ನು ನೋಡಿ ನಕ್ಕರೆ ಫೇವರಿಟಿಸಂ. ಕಾಫಿ ಕುಡಿಸಿದರೆ ಫೆವರಿಟಿಸಂ! ಎಲ್ಲಕ್ಕಿಂತಲೂ ಮುಖ್ಯವಾಗಿ ಭ್ರಷ್ಟಾಚಾರದ ಆರೋಪ ಇಲ್ಲವೆನ್ನುವುದು, ಚುನಾವಣೆಗೆ ಮುಂಚಿತವಾಗಿ ನಿಮ್ಮ ನಾಯಕರನ್ನು ಹಿಡಿದುಹಾಕ್ತೀವಿ ಅಂತ ಹೇಳಿದರು. ಆಗ ನಮಗೂ ಭಯವಾಗಿತ್ತು, ಆ ವೇಳೆ ನಾವು ಎಲ್ಲಿಗಪ್ಪ ಹೋಗೋದು ಅಂತ. ಆ ದೃಷ್ಟಿಯಿಂದಲೇ ಅಲ್ಲವೆ ನೀವು ಮೀಸೆ ಕೂದಲು ಬಿಟ್ಟಿದ್ದು ? ಆದರೆ, ಅದು ವಿಫಲವಾಯಿತು.

ಶ್ರೀ ಮಳ್ಳೂರು ಆನಂದರಾವ್.—ಈಗೇನು ಮಾಡಲಿ ?

ಶ್ರೀ ಗಟ್ಟಿ ಚಂದ್ರಶೇಖರ್.—ತುಂಡು ಮಾಡಿಸಿಬಿಡಿ ! ನೆಪೋಟಿಸಂ ಎಂಬ ಆರೋಪವಿದೆ ಎಂದು ಯಾರಾದರೂ ಮಂತ್ರಿ ರಾಜೀನಾಮೆ ಕೊಡುವುದಾದರೆ, ಕೇಂದ್ರ ಸರ್ಕಾರದಲ್ಲಿ ಒಬ್ಬ ಮಂತ್ರಿಯೂ ಇರುವುದಿಲ್ಲ. ‘‘Great minds discuss ideas; average minds discuss events; small minds discuss persons’’ ಇದನ್ನು ಸ್ವಲ್ಪ ಅರ್ಥ ಮಾಡಿಕೊಂಡು ನಡೆಯಬೇಕು. ನಾವಾಗಲೀ, ನೀವಾಗಲೀ, ಯಾರೇ ಆಗಲಿ ಮಾನ್ಯ ದೇವರಾಜ ಅರಸರ ಮೇಲೆ ಕೈ ಮಾಡಿದರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ ಎನ್ನುವುದನ್ನು ಏಳು ವರ್ಷಗಳಿಂದ ನೋಡುತ್ತಾ ಬಂದಿದ್ದೇವೆ. ಅವರಿಗೆ ದೈವಬಲವಿದೆ, ಆತ್ಮಬಲವಿದೆ. ತಾವು ಮಾನ್ಯ ಮುಖ್ಯ ಮಂತ್ರಿಗಳನ್ನು ಅಭಿನಂದಿಸದೆ ಸುಮ್ಮನೆ ಇದ್ದರೂ ಮನಸಾರೆ ಅಭಿನಂದಿಸಿರುವಿರಿ ಎಂದು ತಿಳಿದುಕೊಂಡು ಬಹಳ ಸಂತೋಷಪಡುತ್ತೇನೆ. ಕಳೆದ ವರ್ಷ ಇದೇ ಬೇಡಿಕೆ ಮೇಲೆ ಮಾತನಾಡುವಾಗ ಆಗ ಐ ಜಿ ಪಿ. ಆಗಿದ್ದ ಆಲ್ಬರ್ಟ್ ಮನೋರಾಜ್ ಅವರ ಸೇವಾವಧಿಯನ್ನು ವಿಸ್ತರಿಸಿದ್ದಕ್ಕಾಗಿ ನಾನು ಮಾನ್ಯ ಮುಖ್ಯ ಮಂತ್ರಿಗಳನ್ನು ಅಭಿನಂದಿಸಿದ್ದೆ. ಕೇಂದ್ರ ಸರ್ಕಾರದಲ್ಲಿ ಸೇವೆ ಸಲ್ಲಿಸಿದ ಮತ್ತು ರಾಷ್ಟ್ರಾಧ್ಯಕ್ಷರ ಪೋಲೀಸ್ ಪದಕವನ್ನು ಪಡೆದುಕೊಂಡಿರುವ ಶ್ರೀ ವೀರಭದ್ರಯ್ಯನವರನ್ನು ರಾಜ್ಯದ ಐ.ಜಿ.ಪಿ. ಯನ್ನಾಗಿ ಮಾಡಿರುವುದಕ್ಕಾಗಿ ಈಗಲೂ ಮಾನ್ಯ ಮುಖ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಇದಕ್ಕೆ ಕಾರಣ : ನೀರಿಗಿಂತಲೂ ರಕ್ತ ಮಂದ! ನಮ್ಮ ಸಮಾಜದವರೊಬ್ಬರು ಕೀರ್ತಿ ಪಡೆದು ಇಂತಹ ಸ್ಥಾನದಲ್ಲಿದ್ದಾರೆಂದು ಹೇಳಿಕೊಳ್ಳುವುದಕ್ಕೆ ನನಗೆ ಹೆಮ್ಮೆ.

ಶ್ರೀ ಪಿ. ರಾಮದೇವ್.— ತಮ್ಮ ಮೈಯಲ್ಲಿ ರಕ್ತವಿದೆಯೆ ? ನೀರಿಗಿಂತಲೂ ರಕ್ತ ಮಂದ ಎಂದರೇನು ?

ಶ್ರೀ ಗಟ್ಟಿ ಚಂದ್ರಶೇಖರ್.—ಬ್ರಹ್ಮಚಾರಿಗಳಿಗೆ ಯಾವುದೂ ಅರ್ಥವಾಗುವುದಿಲ್ಲ ರಕ್ತದ ಸಂಪರ್ಕವಿದ್ದರಲ್ಲವೆ ನಿಮಗೆ ಇದೆಲ್ಲಾ ಅರ್ಥವಾಗುವುದು ! ಈ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಹೇಳಬೇಕಾಗಿದೆ. ಈ ಸರ್ಕಾರದ ಬಗ್ಗೆ ತಪ್ಪು ತಿಳುವಳಿಕೆಯುಳ್ಳ ನಮ್ಮ ಸಮಾಜದ ಕೆಲವರು ನಮ್ಮನ್ನು ಆರೋಪ ಮಾಡುತ್ತಿದ್ದಾರೆ. ಒಂದು ನಿದರ್ಶನ ಹೇಳುತ್ತೇನೆ : ನನಗೆ ಅನೇಕ ಕಾಗದಗಳು ಬಂದಿವೆ. ಒಂದು ಕಾಗದದ ಸ್ವಲ್ಪ ಭಾಗವನ್ನು ಇಲ್ಲಿ ಓದುತ್ತೇನೆ. ‘ಗಟ್ಟಿ ಚಂದ್ರಶೇಖರ್. ವಿಧಾನ ಸಭಾ ಸದಸ್ಯ, ನಿಮಗೆ ತುಮಕೂರಿನ ವೀರಶೈವ ಯುವಕರು ಕೇಳುವುದೇನೆಂದರೆ, ಯಾವ ಸಮಾರಂಭಕ್ಕೆ ಬಂದರೂ ನೀನು ವೀರಶೈವ ಸಂಸ್ಥಾಪನಾಚಾರ್ಯರಾದ ಶ್ರೀ ಬಸವೇಶ್ವರರ ವಚನಗಳನ್ನು ಹೇಳಿ, ನಂಬಿಸುತ್ತೀಯ. ಆದರೆ, ನೀನು ವೀರಶೈವ ಜಾತಿಗೆ ಸೇರಿದ್ದರೆ ನಿಮ್ಮ ಸರ್ಕಾರ ನಮ್ಮ ಜನಾಂಗಕ್ಕೆ ಮಾಡುತ್ತಿರುವ ಅನ್ಯಾಯವನ್ನು ಪ್ರತಿಭಟಿಸದೆ ಶ್ರೀ ದೇವರಾಜ ಅರಸು ಅವರು ಹಾಕುವ ಬಿಸ್ಕತ್ತಿಗಾಗಿ ನಾಯಿಯಂತೆ ಅವರ ಎಂಜಲಿಗೆ ಕಾಯುತ್ತಿದ್ದೀಯಾ ? ವೀರಶೈವ ಜಾತಿಗಾದ ಅನ್ಯಾಯವನ್ನು ಪ್ರತಿಭಟಿಸಲು ವೀರಶೈವ ಶಾಸಕರೆಲ್ಲ ರಾಜೀನಾಮೆ ಕೊಡಬೇಕು ನನ್ನ ಮಕ್ಕಳು ನನಗೆ ಹೀಗೆ ಬರೆಯುತ್ತಾರೆ ಕಾಗದವನ್ನು. ಶ್ರೀ ದೇವರಾಜ ಅರಸ್ ಅವರು ನನಗೆ ಬಿಸ್ಕತ್ತನ್ನೂ ಕೊಡಲಿಲ್ಲ. ನಾನದಕ್ಕೆ ಕಾಯಲೂ ಇಲ್ಲ. ಅಂದಾಜು ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ್ದಾರೆ ಅಷ್ಟೆ. ನಮ್ಮ ಜನಾಂಗದವರು ಹೀಗೆ ಹೇಳುವುದಕ್ಕೂ ಸ್ವಲ್ಪ ಕಾರಣವಿದೆ. ಎಲ್ಲ ಜನಾಂಗದವರು ಅವರವರ ಕೋಟಾ ಪಡೆಯುತ್ತಿರುವಾಗ ನಾವು ಏತಕ್ಕೆ ಪಡೆಯಬಾರದು ? ಒಂದು ಕೋಟಿ ಜನಸಂಖ್ಯೆ ಇರುವ ವೀರಶೈವರಲ್ಲಿ ೨೮ ಜನ ಪೋಲೀಸ್

ಸೂಪರಿಂಟೆಂಡೆಂಟ್‌ಗಳಲ್ಲಿ ಒಬ್ಬರು ಇಲ್ಲ ಇದು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಏನೋ. ಸಿ.ಓ.ಡಿ. ಇಲಾಖೆ ಅಂತ ಇದೆ. ಅದಕ್ಕೆ ಕೆಲಸವಿರುವುದೇ ಕಾಣುವುದಿಲ್ಲ. ಸಿ.ಒ.ಡಿ. ಇನ್‌ಸ್ಪೆಕ್ಟರುಗಳ ಯಾವಾಗಲೂ ಸುಮ್ಮನೆ ತಿರುಗಾಡುತ್ತಾ ಇರುತ್ತಾರೆ. ಅವರಿಗೆ ಕೆಲಸವೇನೂ ಇರುವುದಿಲ್ಲ. ಇದರಲ್ಲಿ ಶೇಕಡ ೬೦ ರಷ್ಟು ಲಿಂಗಾಯಿತರಿದ್ದಾರೆ.

[ಚೇರ್ಮನ್ (ಹೆಚ್. ಟಿ. ಕೃಷ್ಣಪ್ಪನವರು) ಅಧ್ಯಕ್ಷ ಪೀಠದಲ್ಲಿದ್ದರು]

ಚುರುಕಾಗಿರತಕ್ಕ ಹಾಗೂ ಆರೋಗ್ಯವಾಗಿರತಕ್ಕ ಇವರನ್ನು ಸಿ.ಓ.ಡಿ.ಗೆ ಹಾಕಿ ಮಡ್ಡಿ ಮಾಡುತ್ತಾರೆ. ನಮ್ಮ ಸಮಾಜದವರು ಆಕ್ಷೇಪಣೆ ಮಾಡುವುದು ಸರಿಯಾಗಿದೆ. ಇದರಲ್ಲಿ ಯಾವುದೇ ರೀತಿಯ ದುರುದ್ದೇಶ ಇಲ್ಲ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಆದಷ್ಟು ಜಾಗ್ರತೆ ಸರಿಪಡಿಸಿ ನಮ್ಮ ಸಮಾಜದಲ್ಲಿ ಗೌರವ ಸಿಗುವ ರೀತಿಯಲ್ಲಿ ಮಾಡಿದರೆ ಮುಂದಿನ ಸಲವೂ ನಾವೇ ಗೆದ್ದು ಬರುತ್ತೇವೆ, ನಿಮ್ಮನ್ನೇ ಮುಖ್ಯ ಮಂತ್ರಿಗಳನ್ನಾಗಿ ಮಾಡುತ್ತೇವೆ.

ಮಾನ್ಯ ಅಧ್ಯಕ್ಷರೇ ಪೋಲೀಸ್ ಇಲಾಖೆಯಲ್ಲಿ, ಕರ್ನಾಟಕದಲ್ಲಿ ೩೪೫ ಜನ ಇನ್‌ಸ್ಪೆಕ್ಟರುಗಳಿದ್ದಾರೆ. ಇದರಲ್ಲಿ ೧೪೫ ಜನ ಎಕ್ಸಿಕ್ಯೂಟಿವ್‌ನಲ್ಲಿದ್ದಾರೆ ೨೦೦ ಜನ ನಾನ್ ಎಕ್ಸಿಕ್ಯೂಟಿವ್‌ನಲ್ಲಿದ್ದಾರೆ. ೧೪೫ ಜನ ಎಕ್ಸಿಕ್ಯೂಟಿವ್‌ನಲ್ಲಿರತಕ್ಕವರು ಅವರು ರಿಟೈರ್ಡ್ ಆಗುವವರೆವಿಗೂ ಅಲ್ಲಿಯೇ ಇರುತ್ತಾರೆ. ನಾನ್ ಎಕ್ಸಿಕ್ಯೂಟಿವ್‌ನಲ್ಲಿರತಕ್ಕ ೨೦೦ ಜನ ಅವರು ಅಲ್ಲಿಯೇ ರಿಟೈರ್ಡ್ ಆಗುತ್ತಾರೆ. ಈ ರೀತಿಯ ಒಂದು ಪರಿಸ್ಥಿತಿ ಇರುವುದರಿಂದ ಅಧಿಕಾರಿಗಳಲ್ಲಿ ಬೇಜಾರು ಮತ್ತು ಜಿಗುಪ್ಸೆ ಉಂಟಾಗಿದೆ, ರೊಟೇಷನ್ ಮೇಲೆ ಪ್ರತಿಯೊಬ್ಬರಿಗೂ ೩—೪ ವರ್ಷ ನಾನ್ ಎಕ್ಸಿಕ್ಯೂಟಿವ್‌ನಲ್ಲಿರತಕ್ಕವರಿಗೆ ಎಕ್ಸಿಕ್ಯೂಟಿವ್‌ನಲ್ಲಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ. ಆ ರೀತಿ ಮಾಡದೇ ಇದ್ದರೆ ಅಧಿಕಾರಿಗಳಲ್ಲಿ ಅಸಮಾಧಾನವಾಗುತ್ತದೆ. ನಾನ್ ಎಕ್ಸಿಕ್ಯೂಟಿವ್‌ನಲ್ಲಿ ಏನೂ ಸಿಗೋಲ್ಲ. ಎಕ್ಸಿಕ್ಯೂಟಿವ್‌ನಲ್ಲಿ ಸಿಗುತ್ತೆ. ಒಂದು ಚಾನ್ಸ್ ಅವರಿಗೂ ಕೊಟ್ಟರೆ ಅವರು ಚೆನ್ನಾಗಿ ಕೆಲಸ ಮಾಡುತ್ತಾರೆ ಸ್ವಾಮಿ, ನಾನು ಹೋದ ವರ್ಷ ಕೂಡ ಹೇಳಿದ್ದೆ. ಪೋಲೀಸ್ ಇಲಾಖೆಯಲ್ಲಿ ಸರ್ಕಲ್ ಇನ್‌ಸ್ಪೆಕ್ಟರ್ ಹುದ್ದೆ ೩ನೇ ದರ್ಜೆಯದು ಇನ್‌ಸ್ಪೆಕ್ಟರ್ ಹುದ್ದೆ ಕೂಡ ೩ನೇ ದರ್ಜೆಯದು. ೨ನೇ ದರ್ಜೆ ಹುದ್ದೆ ಇಲ್ಲ. ಡಿ.ವೈ.ಎಸ್.ಪಿ. ೧ನೇ ದರ್ಜೆ ಹುದ್ದೆ ಎಲ್ಲಾ ಇಲಾಖೆಗಳಲ್ಲಿರುವಂತೆ ಇಲ್ಲೂ ಕೂಡ ೨ನೇ ದರ್ಜೆ ಹುದ್ದೆಯನ್ನು ಏತಕ್ಕೆ ಮಾಡಿಲ್ಲ ? ಪೋಲೀಸಿನವರನ್ನು ಯಾರೂ ಗಮನಿಸಿಲ್ಲ. ಅವರಿಗೆ ಬೇರೆಯವರ ಹಾಗೆ ಸಂಘ ಇಲ್ಲ. ಅವರಿಗೂ ಸಂಘ ಇದ್ದಿದ್ದರೆ ವಿಧಾನ ಸೌಧದ ಮುಂದೆ ಧರಣಿ ಮಾಡುತ್ತಿದ್ದರು, ತಮ್ಮ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದರು.

> 'They are the guardians of law and property, but they have been neglected by all Governments, power centres and power seekers utilise them for their ends and disown them when their purpose is served..........The police cannot enjoy Sunday and other holidays regularly. They get no bonus and other perks. Nor do they get ESI or adequate medical help. They have to roam in the hot sun and rain while friends enjoy the cool working environment in banks and business offices.''

ಇವರ ಬಗ್ಗೆ ಬಹಳ ಚೆನ್ನಾಗಿ ಕೊಟ್ಟಿದ್ದಾರೆ. ಪೋಲೀಸಿನವರನ್ನು ನೋಡಿದರೆ ಅಯ್ಯೋ ಅನ್ನಿಸುತ್ತೆ. ಯಾರಾದರೂ ದೊಡ್ಡ ಮನುಷ್ಯರು ಬರುತ್ತಾರೆಂದರೆ, ಬಿಸಿಲಾಗಿರಲಿ, ರಾತ್ರಿಯಾಗಿರಲಿ, ಮಳೆಬರಲಿ ಕಾಯ್ಕೊಂಡು ನಿಂತಿರಬೇಕಾಗುತ್ತದೆ. ಪೋಲೀಸಿನವರು ಕಾನೂನು ಪಾಲನೆಯನ್ನು ಕಾಪಾಡಬೇಕಾಗುತ್ತದೆ ಮಾನ್ಯ ಮುಖ್ಯ ಮಂತ್ರಿಗಳು ಪೋಲೀಸಿನವರನ್ನು ಟೀಕೆ ಮಾಡಿದರೆ ಸಮರ್ಥಿಸಿಕೊಳ್ಳುತ್ತಾರೆ. ಪೋಲೀಸಿನವರ ಬಗ್ಗೆ ಸಹಾನುಭೂತಿಯಿಂದ ವರ್ತಿಸಿ ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ನಿನ್ನೆ ದಿವಸ ರಾಮಭಟ್‌ರವರು ಮಾತನಾಡುತ್ತಾ ಹೇಳಿದರು, ಪೋಲೀಸ್ ಸ್ಟೇಷನ್‌ಗೆ ಹೋದರೆ ಪೋಲೀಸಿನವರು ಬೋಳಿಮಗ ಅಂತ ಅಂತಾರೆ ಎಂದು.

ಶ್ರೀ ವಳ್ಳೂರು ಆನಂದರಾವ್.—ಸ್ವಾಮಿ, ಈ ಪದಗಳನ್ನು ಉಪಯೋಗಿಸಬಹುದೆ ?

ಛೇರ್ಮನ್ ಅವರು.—ನಿನ್ನೆ ರಾಮಭಟ್‌ರು ಹೇಳಿದ್ದನ್ನು ಹೇಳುತ್ತಿದ್ದಾರೆ.

ಶ್ರೀ ಮಳ್ಳೂರು ಆನಂದರಾವ್.— ಯಾರೇ ಹೇಳಿರಲಿ, ಈ ರೀತಿಯ ಪದಗಳನ್ನು ಉಪಯೋಗಿಸಬಹುದೆ ?

ಛೇರ್ಮನ್ ಅವರು.— ಯಾರೂ ಪ್ರತಿಭಟನೆ ಮಾಡಲಿಲ್ಲ.

ಶ್ರೀ ಮಳ್ಳೂರು ಆನಂದರಾವ್.—ಇವತ್ತು ನಾನು ಪ್ರತಿಭಟನೆ ಮಾಡುತ್ತಿದ್ದೇನೆ. ಇಂಥ ಪದಗಳನ್ನು ಉಪಯೋಗಿಸಬಹುದೇ ? ತಾವು ರೂಲಿಂಗ್ ಕೊಡಿ.

ಛೇರ್ಮನ್‌ಅವರು.- ಕಡಿತದಲ್ಲಿ ಆ ರೀತಿಯ ಪದಗಳು ಬಂದಿದ್ದರೆ ತೆಗೆಸೋಣ. ರಾಮ ಭಟ್‌ರು ನಿನ್ನೆ ಹೇಳಿದ್ದಕ್ಕೆ ಅವರು ಹೇಳುತ್ತಿದ್ದಾರೆ.

ಶ್ರೀ ಮಳ್ಳೂರು ಆನಂದರಾವ್.—ಅವಾಚ್ಯಶಬ್ದಗಳನ್ನು ಉಪಯೋಗ ಮಾಡಬಾರದು ಅಂತ ನಿಯಮ ಇದೆ. ದಯವಿಟ್ಟು ಆ ಪದಗಳನ್ನು ತೆಗೆಸಿಹಾಕಿ. ರಾಮಭಟ್‌ರು ಉಪಯೋಗಿಸಿದ್ದರೂ ತಪ್ಪು, ಮುಖ್ಯ ಮಂತ್ರಿಗಳು ಉಪಯೋಗಿಸಿದ್ದರೂ ತಪ್ಪು, ಆನಂದರಾಯರು ಉಪಯೋಗಿಸಿದ್ದರೂ ತಪ್ಪು.

ಛೇರ್ಮನ್‌ಅವರು.— ಪರಿಶೀಲನೆ ಮಾಡಿ, ಆ ರೀತಿ ತೆಗೆಯಬೇಕಾದಂಥ ಪದಗಳು ಇದ್ದರೆ, ತೆಗೆಸಿ ಹಾಕುತ್ತೇನೆ.

ಶ್ರೀ ಗಟ್ಟಿ ಚಂದ್ರಶೇಖರ್.—ನಾನು ೭ ವರ್ಷದಿಂದ ಸದಸ್ಯನಾಗಿದ್ದೇನೆ. ಒಂದು ಪದ ಕೂಡ ಎಕ್ಸ್‌ಪೆಂಜ್ ಆಗಿಲ್ಲ. ಅವರು ಹೇಳಿದ್ದು ತಪ್ಪು ಅಂತ ಹೇಳುವುದಕೋಸ್ಕರ ಇವತ್ತು ನಾನು ರಿಪೀಟ್ ಮಾಡಿದೆ. ಪೋಲೀಸ್ ಸ್ಟೇಷನ್ನಿಗೆ ಮರ್ಯಾದಸ್ಥರು ಯಾರು ಹೋಗುವುದಿಲ್ಲ. ಪೋಲೀಸಿನವರು ಪೋಲೀಸ್ ಸ್ಟೇಷನ್‌ನಲ್ಲಿ ಏನು ಕದ್ದೆ ? ಯಾತಕ್ಕೆ ಕದ್ದೆ ಚಿನ್ನ ಅಂತ ಕೇಳಿದರೆ ಹೇಳುತ್ತಾರೆಯೆ ? ಅದು ಪೋಲೀಸ್ ಭಾಷೆ, ಕಠಿಣವಾದ ಭಾಷೆ ಗೊತ್ತಾಯಿತ್ತು ಆನಂದರಾಯರೆ ಮಾನ್ಯ ಗಂಗ ಧರನ್‌ರವರು ಹಿಪ್ನೋಟಿಸಂ ಬಗ್ಗೆ ಹೇಳಿದರು, ಒಂದು ಉದಾಹರಣೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ೪—೫ ವರ್ಷದ ಕೆಳಗೆ ಶಾಸಕರ ಭವನದ ನನ್ನ ಕೈಗಡಿಯಾರ ಹೋಯಿತು. ದಿನೇ ದಿನೇ ೫—೬ ಜನರ ಕೈಗಡಿಯಾರ ಹೋದವು. ಬಿ.ಜಿ. ಬಣಕಾರ್‌ರವರ ರೂಮಿಗೆ ಹೋಗಿ ಅವರ ಜೇಬಿಗೆ ಕೈಹಾಕಿ ದುಡ್ಡು ತೆಗೆದುಕೊಳ್ಳತಕ್ಕ ಸಮಯಕ್ಕೆ ಬಣಕಾರ್‌ರವರು ಬಂದು ಅವನನ್ನು ಹಿಡಿದು ಹೈಗ್ರೌಂಡ್ ಪೋಲೀಸ್ ಸ್ಟೇಷನ್‌ಗೆ ಕೊಟ್ಟೆವು. ಕಳ್ಳರನ್ನು ನಾವೇ ಹಿಡಿದುಕೊಟ್ಟು ಒಂದು ತಿಂಗಳಾದರೂ ಕೈಗಡಿಯಾರ ಬರಲಿಲ್ಲ; ಇನ್ನು ಬೇರೆಯವರ ಕೇಸುಗಳನ್ನು ಹೇಗೆ ಮಾಡುತ್ತೀರಿ ಎಂದು ಅಲ್ಲಿನ ಅಧಿಕಾರಿಯನ್ನು ಕೇಳಿದ್ದಕ್ಕೆ. ಸ್ವಾಮಿ, ಅವನು ಕದ್ದ ಗಡಿಯಾರಗಳನ್ನು ಮಾರ್ವಾಡಿಗೆ ಮಾರಿಕೊಂಡಿದ್ದಾನೆ, ಮಾರ್ವಾಡೀನಾ ನಾವು ಭದ್ರವಾಗಿ ಕೇಳೋಹ ಗಿಲ್ಲ. ಯಾಕಪ್ಪ ಅಂದರೆ ಆಗ ಮೋಹನ್‌ಲಾಲ್ ಸುಖಾಡಿಯ ವರು ಗೌರ್ನರ್ ಆಗಿದ್ದರು. ಹೀಗೆ ಪೋಲೀಸಿನವರದು ಬಹಳ ಕಷ್ಟ ? ಅವರು ಆಕ್ಷನ್ ತೆಗೆದುಕೊಂಡರೆ ನ್ಯಾಯಾಂಗ ತನಿಖೆ ಮಾಡಿ ಅಂತೀರಿ, ಸಿಟಿಂಗ್ ಜಡ್ಜ್ ನೇಮಕ ಮಾಡಿ ಅಂತೀರಿ. ಕ್ರಮ ತೆಗೆದುಕೊಳ್ಳದೇಇದ್ದರೆ ಇನ್‌ಆಕ್ಷನ್ ಅಂತೀರಿ ಈ ಮಧ್ಯೆ ಪೋಲೀಸಿನವರಿಗೆ ಫ್ರಿಕ್ಷನ್ ಆಗಿದೆ. ಸ್ವಾಮಿ, ನಾವು ಏನು ಬೇಕಾದರು ಮಾತನಾಡಬಹುದು, ದೇವರು ನಮಗೆ ಸ್ವಾತಂತ್ರ್ಯ ಕೊಟ್ಟಿದ್ದಾರೆ ನಮ್ಮ ಬುದ್ಧಿಯನ್ನು ಚಾಕಚಕ್ಯತೆಯಿಂದ ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕು ಅಲ್ಲವೆ ಆನಂದರಾಯರೆ ?

ಮಿಸೆಸ್ ಪ್ರಮೀಳಾರವರು ಹೆಣ್ಣುಮಕ್ಕಳನ್ನು ಇನ್ಸ್‌ಪೆಕ್ಟರ್ ಮಾಡಿ ಎಂದು ಹೇಳಿದ್ದಾರೆ, ನಮ್ಮ ಮುಖ್ಯ ಮಂತ್ರಿಗಳು ಮಾಡಿಬಿಟ್ಟರೆ ಪಜೀತಿ ಆಗುತ್ತೆ. ಹೆಣ್ಣು ಮಕ್ಕಳು ನ್ಯಾಯಾಧಿಶರಾಗಲೀ, ವಕೀಲರಾಗಲೀ. ಐ.ಎ.ಎಸ್. ಅಧಿಕಾರಿಗಳಾಗಲಿ. ಹೆಣ್ಣು ಮಕ್ಕಳು ಇನ್‌ವೆಸ್ಟಿಗೇಷನ್ ಮಾಡುವುದು ಕಷ್ಟವಾಗುತ್ತದೆ. ಅಕಸ್ಮಾತ್ ಪೋಲೀಸ್ ಇನ್ಸ್‌ಪೆಕ್ಟರ್ ಹೆಂಡತಿಯಾಗಿದ್ದು. ಗಂಡ ಪೋಲೀಸ್ ಕಾನ್‌ಸ್ಟೆಬಲ್ ಆದರೆ, ಅವರು ಯಾವ ರೀತಿ ಕರೆಯಬೇಕು ? ಗಂಡಸರು ಆದರೆ, ನರಸಿಂಹಮೂರ್ತಿ, ಆನಂದರಾವ್ ಅಂತ ಕರೆಯಬಹುದು ಹೆಂಗಸು ಪೋಲೀಸ್ ಇನ್ಸ್‌ಪೆಕ್ಟರ್ ಆದರೆ ೪೫, ೭೫, ೪೨೦ ಅಂತ ಗಂಡಂದಿರನ್ನು ಕರೆಯಬೇಕಾಗುತ್ತದೆ. ಇದು ಸರಿಯೇ ? ಸ್ವಾಮಿ, ಪ್ರಮೀಳಾ ಅವರನ್ನು ಬೇಕಾದರೆ ಹೈಕೋರ್ಟ್ ಜಡ್ಜ್ ಮಾಡಿ ಬೇಡ ಎಂದು ಹೇಳುವುದಿಲ್ಲ. ಪೋಲೀಸ್ ಇಲಾಖೆಗೆ ಮಾತ್ರ ಅವರು ಹೋಗುವುದು ಬೇಡ. ಇನ್ನು ಹೆಂಗಸರಿಗೆ ರಕ್ಷಣೆ ಕೊಡಬೇಕು ಎಂದು ಹೇಳಿದರು, ಅವರಿಗೆ ರಕ್ಷಣೆ ಕೊಡಬೇಕಾದು,

ಮುಖ್ಯ ಕರ್ತವ್ಯ. ಸೆಕೆಂಡ್ ಶೋ ಬಿಡುವವರೆಗೂ ಐ.ಜಿ.ಪಿ. ಅವರು ಸಿನಿಮಾ ಹತ್ತಿರ ಕಾದುಕೊಂಡು ಇದ್ದು ಹೆಂಗಸರು ಯಾರೇ ಇದ್ದರು ಅವರನ್ನೆಲ್ಲಾ ಅವರ ಮನೆಗೆ ಕರೆದುಕೊಂಡು ಹೋಗಿ ಬಿಟ್ಟು ಬರಬೇಕು ಇವೊತ್ತು ಮಾಟ್ನಿ ಇಲ್ಲವೇ, ಫಸ್ಟ್ ಶೋ ಇಲ್ಲವೇ, ಯಾವ ಸಂಸಾರಸ್ಥರು ಸೆಕೆಂಡ್ ಶೋಗೆ ಹೋಗುತ್ತಾರೆ. ಜೊತೆಗೂಡುವವರೆ ಸೆಕೆಂಡ್ ಶೋಗೆ ಹೋಗುವುದು. ಇವೊತ್ತು ಹೇಳಬೇಕು ಅಂದರೆ ಹೆಂಗಸರಿಗೆ ರಕ್ಷಣೆ ಕೊಡುವುದಕ್ಕಿಂತ ಮೊದಲು ಗಂಡಸರಿಗೆ ರಕ್ಷಣೆ ಕೊಡಬೇಕಾಗಿದೆ. ರಸ್ತೆಯಲ್ಲಿ ಹೋಗುತ್ತಿದ್ದರೆ ನಾವೇ ಓರೆಯಾಗಬೇಕಾಗಿದೆ. ಆ ರೀತಿ ಅವರು ರಸ್ತೆಯಲ್ಲಿ ಹೋಗುತ್ತಾ ಇರುತ್ತಾರೆ. ಇವೊತ್ತು ನಮ್ಮ ಭಾರತ ಸಂಸ್ಕೃತಿಯ ಪ್ರಕಾರ ಸೀರೆಯನ್ನು ಉಟ್ಟುಕೊಂಡು ಕುಂಕುಮ ಇಟ್ಟುಕೊಂಡ ಮೈತುಂಬಾ ಸೆರಗು ಹಾಕಿಕೊಂಡಿದ್ದರೆ, ಪೂಜ್ಯ ಮನೋಭಾವನೆ ಬರುತ್ತದೆ ಇವೊತ್ತು ಯಾವರೀತಿ ಇದೆ ಎಂದರೆ ಯಾವ ಬಾರ್‌ಗೆ ಹೋಗಿ ನೋಡಿ ಇಬ್ಬರು ಕುಳಿತಿರುತ್ತಾರೆ, ಅದರಲ್ಲಿ ಗಂಡಸರು ಯಾರು ಹೆಂಗಸರು ಯಾರು ಎಂದು ಕಂಡುಹಿಡಿಯುವುದಕ್ಕೆ ಆಗುವುದಿಲ್ಲ. ಇಬ್ಬರೂ ಪ್ಯಾಂಟ್ ಹಾಕಿರುತ್ತಾರೆ, ಒಂದೇ ತರಹ ಬಟ್ಟೆ ಹಾಕಿರುತ್ತಾರೆ. ಫಿಸಿಕಲ್ ಎಕ್ಸಾಮಿನ್ ಮಾಡದ ಹೊರತು ಯಾರು ಹೆಂಗಸರು, ಯಾರು ಗಂಡಸರು ಗೊತ್ತಾಗುವುದಿಲ್ಲ. ಈ ಪರಿಸ್ಥಿತಿಗೆ ನಮ್ಮ ನಾಗರೀಕತೆ ಬಂದಿದೆ.

ಶ್ರೀ ಪಿ. ರಾಮದೇವ್.—ಸ್ವಾಮಿ, ಈಗ ಇರತಕ್ಕ ೧೫ ಡಿಮ್ಯಾಂಡ್‌ಗಳ ಪೈಕಿ ತಾವು ಯಾವ ಡಿಮ್ಯಾಂಡ್ ಮೇಲೆ ಮಾತನಾಡುತ್ತಿದ್ದೀರಾ ?

ಶ್ರೀ ಗಟ್ಟಿ ಚಂದ್ರಶೇಖರ್.—ತಾವು ಯಾವ ಡಿಮ್ಯಾಂಡ್ ಮೇಲೆ ಏನು ಮಾತನಾಡಬೇಕೆಂದು ತಿಳಿದುಕೊಳ್ಳಲಿಲ್ಲ. ಒಂದೂವರೆ ವರ್ಷ ಆಗಿದೆ. It is not your fault because you are a Bachelor. ಇನ್ನು ಈ ವೆಂಟಿಜರ್ ವಿಷಯ ಹೇಳಿದರು ಇದು ಆ್ಯಡಮ್ ಕಾಲದಿಂದಲೂ ಬಂದಿದೆ. ಇವೊತ್ತು ದೊಡ್ಡ ದೊಡ್ಡ ಊರುಗಳಲ್ಲಿ ಗಂಡಸರನ್ನು ಕೆಣಕುವುದು ಜಾಸ್ತಿಯಾಗಿದೆ. ಬಾರ್‌ನಲ್ಲಿ ಇಬ್ಬರು ಬಿಯರ್ ಕುಡಿದುಕೊಂಡು, ಸಿಗರೇಟ್ ಕುಡಿದುಕೊಂಡು ಕುಳಿತಿರುತ್ತಾರೆ. ಅವರು ಬಿಗಿಯಾದ ಬಟ್ಟೆ ಹಾಕಿಕೊಂಡು ಹೋಗುತ್ತಾ ಇರುವುದನ್ನು ನೋಡಿದರೆ ಎಂತಹ ವಯೋವೃದ್ಧನಿಗೂ ಪ್ರಚೋದನೆಯಾಗುತ್ತದೆ ಇವೊತ್ತು ಹಲ್ಲ ಬಣಾವೆಯಲ್ಲಿ ೫ ಜನ ಹೆಂಗಸರನ್ನು ಹಿಡಿದಿದ್ದಾರೆ. ಸರ್ಕಾರ ಇದನ್ನೆಲ್ಲಾ ನೋಡಲಿಕ್ಕೆ ಆಗುತ್ತದೆಯೋ ಇವೊತ್ತು ಅವರ ಬಗ್ಗೆ ಕನಿಕರ ಇದ್ದರೆ, ಸೆಕೆಂಡ್ ಶೋಗೆ ಯಾರೂ ಹೋಗಬೇಡಿ ಎಂದು ಒಂದು ಪ್ರಕಟಣೆ ಹೊರಡಿಸಲಿ. ಈಗ ಇರುವ ವಿಷಯವನ್ನು ಅಧ್ಯಕ್ಷರು ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳವರಿಗೆ ತಿಳಿಸಿದ್ದೇನೆ. ಈಗ ಅಧ್ಯಕ್ಷರು ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ, ಮಾನ್ಯ ಮುಖ್ಯ ಮಂತ್ರಿಗಳಿಗೂ ಅಭಿನಂದನೆಯನ್ನು ಸಲ್ಲಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಎ. ಬಿ. ಪಾಟೀಲ್ (ಆಳಂದ).—ಮಾನ್ಯ ಅಧ್ಯಕ್ಷರೆ, ಇವೊತ್ತಿನ ದಿವಸ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಹದಿನಾರು ಡಿಮ್ಯಾಂಡ್‌ಗಳನ್ನು ಏನು ಮಂಡನೆ ಮಾಡಿದ್ದಾರೆ ಅದನ್ನು ವಿಚಾರ ಮಾಡಿ ನೋಡಿದಾಗ ಕೆಲವೊಂದು ಸದಸ್ಯರು ಬಹಳಷ್ಟು ಡಿಪಾರ್ಟ್‌ಮೆಂಟ್ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಕಡೆಗೆ ಇಟ್ಟುಕೊಂಡಿದ್ದಾರೆ ಅದು ಸರಿಯಲ್ಲ ಬೇರೆ ಜನರಿಗೆ ಕೊಡಬೇಕಾಗಿತ್ತು ಎಂದು ಹೇಳಿದರು. ಇವೊತ್ತು ಡೈನಾಮಿಕ್ ಪರ್ಸನ್ ಆದಂತಹ ದೇವರಾಜ ಅರಸ್ ಅವರ ಕೈಯಲ್ಲಿ ಇರುವುದರಿಂದಲೇ ಅಭಿವೃದ್ಧಿ ಹೊಂದಬಹುದು ಎಂದು ನನ್ನ ಅನುಭವ ಹೇಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಕರ್ನಾಟಕಕ್ಕೆ ಸಾಕಷ್ಟು ಅಭಿವೃದ್ಧಿ ಮಾಡಿದ್ದಾರೆ ಅವರು ರಾಮರಾಜ್ಯ ಮಾಡಲಿಕ್ಕೆ ಹೊರಟಿದ್ದಾರೆ. ಅವರು ರಾಮರಾಜ್ಯ ಮಾಡಬೇಕೆಂದು ಹೊರಟಿದ್ದರು ಕೆಲವು ಕಡೆ ಅಂದರೆ ಹಳ್ಳಿಗಳ ಮಟ್ಟದಲ್ಲಿ ನೋಡಿದಾಗ ರಾವಣನ ರಾಜ್ಯವಾಗುತ್ತದೆ. ಎಂದು ನಾನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಲ್ಯಾಂಡ್ ಸೀಲಿಂಗ್ ಬಿಲ್ ತಂದು ಸಾಕಷ್ಟು ಪ್ರಗತಿಪರ ಕೆಲಸ ಮಾಡಿದ್ದಾರೆ ಇದಕ್ಕೆ ವಿರೋಧ ಪಕ್ಷದವರು ಸಾಕಷ್ಟು ಸಹಕರಿಸಿದ್ದಾರೆ. ಆದರೆ ಅದರಲ್ಲಿರತಕ್ಕ ಕುಂದುಕೊರತೆಗಳು ಏನಿವೆ ಅದನ್ನು ನೋಡಲೇ ಬೇಕಾಗುತ್ತದೆ. ಸಮಾಜದಲ್ಲಿ ಮೈನರ್ಸ್‌ಗೆ ಏಷ್ಟು ಸಂರಕ್ಷಣೆ ಕೊಡಬೇಕೋ ಅದನ್ನು ಕೊಟ್ಟಿಲ್ಲ. ಮೇಜರ್ ಅವರಿಗೂ ಕೊಟ್ಟಿಲ್ಲ ಭಾರತೀಯ ಸಂಸ್ಕೃತಿಗೆ ಅನುಗುಣವಾಗಿ ವಿಧವೆಯರಿಗೆ ಯಾವ ಷೇರು ಕೊಟ್ಟಿಲ್ಲ, ಎಂದು ಅವರ ಗಮನದಲ್ಲಿ ತಂದುಕೊಂಡು ಮೊನ್ನೆ ಮಂತ್ರಿಮಂಡಲದಲ್ಲಿ ಚರ್ಚೆ ಮಾಡಿ ಭಾರತೀಯ ಸಂಸ್ಕೃತಿಗೆ ಅನುಗುಣವಾಗಿ ಮಾಡಬೇಕೆಂದು ಹೊರಟಿದ್ದಾರೆ ರೈತರಿಗೆ ಪ್ರಗತಿಪರವಾಗಿ ಮಾಡಿದ್ದಾರೆ. ಇವೊತ್ತು ಮಾನ್ಯ ಮುಖ್ಯ

ಮಂತ್ರಿಯವರು, ಮಂತ್ರಿಮಂಡಲದವರು ಮಾತನಾಡುವುದನ್ನು ನೋಡಿದರೆ ರಾಮರಾಜ್ಯ ಮಾಡಲಿಕ್ಕೆ ಹೊರಟಿದ್ದಾರೆಂದು ಕಾಣುತ್ತದೆ. ಆದರೆ ಅಗ್ರಿಕಲ್ಚರಿಸ್ಟ್‌ಗೆ ಹಳ್ಳಿಯಲ್ಲಿ ಆಗತಕ್ಕ ಅನ್ಯಾಯವನ್ನು ನೋಡಿದರೆ ರಾವಣ ರಾಜ್ಯಕ್ಕಿಂತಲೂ ಘೋರವಾದ ಕಷ್ಟವನ್ನು ಅನುಭವಿಸುತ್ತಿರುವುದು ಕಂಡಬರುತ್ತದೆ. ಸರ್ಕಾರಿ ಅಧಿಕಾರಿಗಳು ಬಂದು ಜನರಿಗೆ ಏನು ಕಷ್ಟ ಕೊಟ್ಟಿದ್ದಾರೆ ಎನ್ನುವುದನ್ನು ಹಳ್ಳಿಗಳಲ್ಲಿ ನೋಡಿದರೆ ಬಹುಶಃ ರಾವಣನ ರಾಜ್ಯದಲ್ಲಿಯೂ ಅಷ್ಟು ಘೋರ ಆಗಿಲ್ಲ ಎಂದು ಹೇಳಬಹುದು. ಇನ್ನು ಹಳ್ಳಿಗಳ ಕಡೆ ಕೆ.ಇ.ಬಿ. ಕಡೆಯಿಂದ ಐ.ಪಿ.ಸಿ. ನಡೆಸತಕ್ಕವರು ದುಡ್ಡು ಕಟ್ಟಿಲ್ಲ ಎಂದು ಡಿಸ್‌ಕನೆಕ್ಷನ್ ಮಾಡಿದ್ದಾರೆ. ಸಮ್ಮರ್ ಕ್ರಾಪ್ ನಷ್ಟವಾಗಿದೆ. ಇವೊತ್ತು ಪೆನಾಲ್ಟಿ ಹಾಕಿದ್ದಾರೆ. ೬೦ ರೂಪಾಯಿ ಕಟ್ಟತಕ್ಕವರಿಗೆ ೩.೬೨೨ ರೂಪಾಯಿ ಪನಿಷ್‌ಮೆಂಟ್ ಹಾಕಿದ್ದಾರೆ. ಇನ್ನು ಮೂರನೆಯದಾಗಿ ಅವನು ಕೋರ್ಟ್‌ನಲ್ಲಿ ತಿರುಗುವಂತೆ ಒಂದು ಭರ್ಜರಿ ಕೇಸ್ ಹಾಕಿದ್ದಾರೆ ಇವೊತ್ತು ರಾಜ್ಯದಲ್ಲಿ ಏನು ನಡೆದಿದೆ ನೋಡಬೇಕಾಗುತ್ತದೆ. ಖಾನಾಪುರ ಗ್ರಾಮದಲ್ಲಿ ರೈತರಿಗೆ ಎಷ್ಟು ತೊಂದರೆ ಕೊಟ್ಟಿದ್ದಾರೆ ಅದನ್ನು ನೋಡಬೇಕು. ಇನ್ನು ಆಳಂದ ತಾಲ್ಲೂಕಿನಲ್ಲಿ ಈ ಐ.ಪಿ.ಸಿ. ನಡೆಸತಕ್ಕವರ ಮೇಲೆ ಹೀಗೆ ಮೂರು ತರಹ ಕಠೋರ ನಡೆದಿದೆ ಇದರ ಬಗ್ಗೆ ಮಾನ್ಯ ಮಂತ್ರಿಗಳು ನೋಡಬೇಕು. ಕನ್‌ಸರ್ನ್ಡ್ ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟ್ ಮಿನಿಸ್ಟರೂ ಕೂಡ ಇದ್ದಾರೆ, ಅವರೂ ಕೂಡ ಇದರ ಬಗ್ಗೆ ಮುತುವರ್ಜಿ ವಹಿಸಿ ಅಲ್ಲಿ ಆಗತಕ್ಕ ಅನ್ಯಾಯವನ್ನು ದೂರಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

೨.೩೦ ಪಿ. ಎಂ.

ಸ್ವಾಮಿ. ಇನ್ನೊಂದು ವಿಚಾರ ಏನೆಂದರೆ, ರಾಜ್ಯದ ಜನತೆ ಮಾನ್ಯ ದೇವರಾಜ ಅರಸ್‌ರವರನ್ನೂ ಮತ್ತು ನಮ್ಮ ಶಾಸಕರನ್ನೂ ಆಯ್ಕೆ ಮಾಡುವಾಗ ನಮ್ಮ ರಾಜ್ಯ ದೇವರ ರಾಜ್ಯದಂತೆ ಇರಲಿ, ದೇವರಾಜ ಅರಸ್‌ರವರು ದೇವರಂತೆ ಕೆಲಸಮಾಡಲಿ ಎಂದು ಓಟು ಹಾಕಿದ್ದಾರೆ. ಮಾನ್ಯ ದೇವರಾಜ ಅರಸ್‌ರವರು ಈ ರಾಜ್ಯವನ್ನು ದೇವರ ರಾಜ್ಯದಂತೆಯೇ ನಡೆಸಿಕೊಂಡು ಹೋಗುತ್ತಿದ್ದಾರೆ. ಸ್ವಾಮಿ, ಇದುವರೆಗೂ ಪಟ್ಟಣಗಳಲ್ಲಿ ಯಾವರೀತಿ ಕಳ್ಳತನಗಳಾಗುತ್ತಿವೆ, ಯಾವ ರೀತಿ ಲೂಟಿಗಳಾಗುತ್ತಿವೆ ಎಂಬುದನ್ನು ಕೇಳಿದಿರಿ ಇನ್ನು ಹಳ್ಳಿಗಳ ವಿಚಾರದಲ್ಲಿ ಹೇಳುವುದಾದರೆ, ಸಾಯಂಕಾಲ ೪ ಗಂಟೆಗೇ ಜನಗಳು ಕುಡಿದು ಬೀದಿಗಳಲ್ಲಿ ಕುಣಿದಾಡುತ್ತಾ ಹೋಗುತ್ತಿರುತ್ತಾರೆ ಆ ರಸ್ತೆಗಳಲ್ಲಿ ಹೆಣ್ಣುಮಕ್ಕಳು ಓಡಾಡುವುದು ಇರಲಿ. ಮರ್ಯಾದಸ್ಥ ಗಂಡಸರೂ ಕೂಡ ಅಲ್ಲಿ ತಿರುಗಾಡುವುದಕ್ಕಾಗುವುದಿಲ್ಲ ಈಗಿನ ನಮ್ಮ ಐ.ಜಿ.ಪಿ.ಯವರು ಬಹಳ ಚೆನ್ನಾಗಿ ಕೆಲಸ ಮಾಡುವವರಾಗಿದ್ದಾರೆಂದು ನಾನು ತಿಳಿದಿದ್ದೇನೆ. ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಯವರನ್ನೂ ಮತ್ತು ಮಾನ್ಯ ಐ.ಜಿ.ಪಿ.ಯವರನ್ನೂ ಕೇಳಿಕೊಳ್ಳುವುದೇನೆಂದರೆ ಹಳ್ಳಿಗಳಲ್ಲಿ ಕುಡಿದು ಕುಣಿದಾಡುವವರನ್ನು ಹಿಡಿದು ಶಿಕ್ಷಿಸಬೇಕು.

ಇದೇ ಅದೇ ಮಟ್ಕ ವಿಚಾರದಲ್ಲಿ ಹೇಳುವುದಾದರೆ. ಹಳ್ಳಿಗಳಲ್ಲಿ ಘೋರ ಗರೀಬರು ಬಹಳವಾಗಿ ಮಟ್ಕ ಜೂಜು ಆಡುತ್ತಿದ್ದಾರೆ. ಉದಾಹರಣೆಗೆ ನನ್ನ ಆಳಂದ ಊರಿನ ಪೋಸ್ಟ್ ಆಫೀಸ್‌ನಲ್ಲಿ ಪ್ರತಿದಿನ ರಾತ್ರಿ ಹೊತ್ತು ಸುಮಾರು ೨೫ ಸಾವಿರ ರೂಪಾಯಿಗಳಷ್ಟು ಮಟ್ಕ ನಡೆಯುತ್ತಿರುತ್ತದೆ. ಕೇವಲ ಒಂದು ತಲ್ಲೂಕಿನಲ್ಲಿ ಇಷ್ಟು ಮಟ್ಕ ನಡೆಯುತ್ತಿರಬೇಕಾದರೆ ಕರ್ನಾಟಕದ ಬೇರೆ ಭಾಗಗಳಲ್ಲಿ ಇನ್ನೆಷ್ಟು ನಡೆಯುತ್ತಿರಬಹುದು ಎಂಬುದನ್ನು ತಾವೆ ಯೋಚನೆ ಮಾಡಬೇಕು. ನಮ್ಮ ಕರ್ನಾಟಕ ರಾಜ್ಯ ಪ್ರತಿಯೊಂದು ವಿಚಾರದಲ್ಲೂ ಮುಂದೆ ಇದೆಯೆಂದು ಹೇಳುತ್ತಿರುವಾಗ ಈ ಪ್ರೊಹಿಬಿಷನ್ ಒಂದರಲ್ಲಿ ಏತಕ್ಕೆ ಇಷ್ಟು ಹಿಂದೆ ಬೀಳುತ್ತಿದ್ದೇವೋ ಗೊತ್ತಿಲ್ಲ. ರಾಜ್ಯದಲ್ಲಿ ಕುಡಿಯುವವರು ಇದೇ ರೀತಿ ಹೆಚ್ಚುತ್ತಿದ್ದರೆ ಇನ್ನು ೧೦೦ ಜನ ಐ.ಜಿ.ಪಿ.ಗಳನ್ನು ನೇಮಕ ಮಾಡಿದರೂ ತಪ್ಪಿಸುವುದಕ್ಕಾಗುವುದಿಲ್ಲ. ಇವತ್ತು ತಾವು ಗೋಹತ್ಯೆಯನ್ನು ನಿಷೇಧ ಮಾಡಬೇಕೆಂದು ಮಾಡುತ್ತಿದ್ದೀರಿ. ಅದೇ ರೀತಿಯಲ್ಲಿ ಮಹಾತ್ಮಾ ಗಾಂಧೀಜಿಯವರು ಹೇಳಿರುವಂತೆ ದೇಶದಲ್ಲಿ ಕುಡಿತವನ್ನೂ ತಪ್ಪಿಸಿ ಇಲ್ಲದೇ ಹೋದರೆ ಈ ರೀತಿ ಕುಡಿದು ಕುಣಿದಾಡುವವರಿಂದ ಬಹಳ ಅನಾಹುತವಾಗುತ್ತದೆ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಯವರ ಹಾಗೂ ಐ.ಜಿ.ಪಿ. ಅವರ ಗಮನಕ್ಕೆ ತರಬಯಸುತ್ತೇನೆ ಸ್ವಾಮಿ. ಕುಡಿತದಿಂದ ಬರಬಹುದಾದ ವರಮಾನ ನಿಮಗೆ ಕಡಿಮೆಯಾಗುವುದಾದರೆ. ಶಾಸಕರಿಗೆ ಕೂಡ ತ್ತಿರುವ ಸಂಬಳವನ್ನು ಬೇಕಾದರೂ ಕಡಿಮೆ ಮಾಡಿ ಇಲ್ಲವೇ ಹೊಸದಾಗಿ ಬೇರೆ ಯಾವುದೇ ತೆರಿಗೆಯನ್ನು ಬೇಕಾದರೂ ಹಾಕಿ ವಸೂಲ್ಮಾಡಿ ನಾವು ಕೊಡುವುದಕ್ಕೆ ಸಿದ್ಧವಾಗಿದ್ದೇವೆ. ತಾವು ಈ ಕುಡಿತ ಹಾಗೂ ಮಟ್ಕಾಗಳನ್ನು ಕಡಿಮೆ ಮಾಡದೇ ಹೋದರೆ ಮುಂದೆ ಇನ್ನು ಕೆಲವೇ ದಿವಸಗಳಲ್ಲೇ ಏನೇನು ಅನಾಹುತಗಳಾಗಬಹುದೆಂಬುದನ್ನು ತಾವು ನೋಡಬೇಕಾಗುತ್ತದೆ.

ಸ್ವಾಮಿ, ನಾನು, ತಮ್ಮ ಮೂಲಕ ಒಂದು ಮಾತನ್ನು ಸರ್ಕಾರಕ್ಕೆ ಹೇಳಬಯಸುತ್ತೇನೆ. ಇವತ್ತು ಮಾನ್ಯ ಹಾವನೂರ್‌ರವರಾಗಲಿ ಅಥವಾ ಸರ್ಕಾರ ಆಗಲಿ ಈ ಜನರಿಗೆ ಎಷ್ಟೆ ಹಣವನ್ನು ಕೊಟ್ಟರೂ ಇವರಲ್ಲಿರತಕ್ಕ ಕೆಟ್ಟ ಚಾಳಿ, ಕೆಟ್ಟ ಚಟಗಳು ಹೋಗುವುದಿಲ್ಲ. ತಾವು ಏನು ಹಣವನ್ನು ಈ ಜನಗಳಿಗೆ ಕೊಡುತ್ತಿದ್ದೀರಿ ಇದರಿಂದ ಜನ ಇನ್ನೂ ಹಾಳಾಗುವುದಕ್ಕೆ ದಾರಿಯಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ಒಂದು ರಿಸರ್ವಾಯರ್‌ಗೆ ಸ್ವಲ್ಪ ತೂತುಗಳಿದ್ದರೆ ನಾವು ಎಷ್ಟೆ ಕೊಡ ನೀರನ್ನು ತಂದು ಹಾಕಿದರೂ ಅದರಲ್ಲಿ ನೀರು ನಿಲ್ಲುವುದಿಲ್ಲ. ಆದ್ದರಿಂದ ನಾನು ಸರ್ಕಾರದವರಿಗೆ ಈ ಕೆಲವು ಸಲಹೆಗಳನ್ನು ಕೊಡುತ್ತಿದ್ದೇನೆ ತಮಗೆ ಎಷ್ಟೇ ಕಷ್ಟವಾದರೂ ಪರವಾಯಿಲ್ಲ ಈ ಮಟ್ಕಾ ಮತ್ತು ಕುಡಿತವನ್ನು ತಪ್ಪಿಸಿ ಜನರು ಸುಖವಾಗಿ ಇರುವುದಕ್ಕೆ ಅವಕಾಶ ಮಾಡಿಕೊಡಬೇಕು.

ಇನ್ನು ಎರಡನೆಯದಾಗಿ ತಮಗೆ ಗುರುತು ಇರುವಂತೆ ಪಶುಸಂಗೋಪನೆ ಮತ್ತು ಡೈರಿ ಅಭಿವೃದ್ಧಿ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ ಇವು ಚೆನ್ನಾಗಿ ನಡೆಯಬೇಕು. ಇಲ್ಲಿ ಒಂದು ಮಾತು ಹೇಳುವುದಾದರೆ, ನಾನು ಒಂದು ಸಾರಿ ಅಮೇರಿಕಾಕ್ಕೆ ಹೋದಾಗ ಅಲ್ಲಿ ಪಶು ಸಂಗೋಪನೆ ಯಾವ ರೀತಿ ಮಾಡಿದ್ದಾರೆ, ಎಷ್ಟು ತರಬೇತಿ ಹೊಂದಿದ್ದಾರೆ, ಇದರಲ್ಲಿ ಎಷ್ಟು ಆಸಕ್ತಿ ಇದೆ ಎಂಬುದನ್ನು ಇಲ್ಲಿ ಹೇಳಬೇಕಾದರೆ ತಾಸುಗಟ್ಟಲೆ ಕಾಲಾವಕಾಶ ಬೇಕಾಗುತ್ತದೆ. ಪಶುಸಂಗೋಪನೆ ಹಾಗೂ ಡೈರಿ ಅಭಿವೃದ್ಧಿ ಬಗ್ಗೆ ಹಳ್ಳಿಗಳಲ್ಲಿರತಕ್ಕ ರೈತರ ಮಕ್ಕಳಿಗೆ ತರಬೇತಿ ಕೊಡಬೇಕು. ಇವತ್ತು ಅಮೇರಿಕಾದಲ್ಲಿ ಯಾವರೀತಿ ವೈಟ್ ರೆವಲ್ಯೂಷನ್ ಮತ್ತು ಗ್ರಿನ್ ರೆವಲ್ಯೂಷನ್ ಆಗಿದೆ ಎಂಬುದನ್ನು ನೋಡಬೇಕು. ನಮ್ಮ ದೇಶದಲ್ಲಿರತಕ್ಕ ರೈತರ ಮಕ್ಕಳಿಗೆಪಶುಸಂಗೋಪನೆ ಮತ್ತುಡೈರಿಡೆವಲಪ್‌ಮೆಂಟ್ ವಿಚಾರದಲ್ಲಿ ಟ್ರೈನಿಂಗ್ ಕೊಡುವುದಲ್ಲದೇ ಹಳ್ಳಿಗಳ ಕಡೆಗೆ ಮೊಬೈಲ್ ವ್ಯಾನುಗಳನ್ನು ವೆಟರ್ನರಿ ಡಿಪಾರ್ಟ ಮೆಂಟ್‌ನವರು ಒದಗಿಸಬೇಕು. ಇದರಿಂದ ಜಾನುವಾರಗಳಿಗೆ ಔಷಧೋಪಚಾರ ಮಾಡಲು ಅನುಕೂಲ ವಾಗುತ್ತದೆ. ಹಿಂದೆ ಒಂದು ಸಾರಿ ದನ ಮತ್ತು ಕುರಿಗಳಿಗೆ ಒಂದು ರೀತಿಯ ಖಾಯಿಲೆ ಬಂದಾಗ ಬಹಳವಾಗಿ ಸತ್ತುಹೋದವು ಆಗ ಮೊಬೈಲ್ ವ್ಯಾನ್ ಇದ್ದಿದ್ದರೆ ಬಹಳಷ್ಟು ದನ, ಕುರಿಗಳು ಉಳಿದು ಕೊಳ್ಳುತ್ತಿದ್ದವು, ನಾನು ಅಮೇರಿಕಾದಲ್ಲಿ ನೋಡಿದ ಇನ್ನೊಂದು ವಿಚಾರ ಎಂದರೆ, ಹಸುಗಳು ಕರು ಹಾಕಿ ೬ ತಿಂಗಳು, ವರ್ಷ ಆದರೆ ಅವುಗಳ ಬಾಲದ ಮೇಲೆ ಪ್ಲಾಸ್ಟಿಕ್ ಕ್ಲಿಪ್ ಹಾಕುತ್ತಾರೆ. ಅದು ಕೆಂಪು ಬಣ್ಣಕ್ಕೆ ತಿರುಗಿದರೆ ಆಗ ಅದು ಗಬ್ಬಕ್ಕೆ ಬಂದಿದೆ ಎಂದು ತಿಳಿದುಕೊಂಡು ಇಂಜೆಕ್ಷನ್ ಮಾಡುತ್ತಾರೆ. ಇದೇ ರೀತಿಯ ತರಬೇತಿಯನ್ನು ನಮ್ಮ ಹಳ್ಳಿಗಳಲಿರತಕ್ಕ ರೈತರ ಮಕ್ಕಳಿಗೂ ಕೊಡಬೇಕು. ಇವತ್ತು ಅನೇಕ ಹಸುಗಳು ಗಬ್ಬಕ್ಕೆ ಬಂದಿರುವುದು ನಮಗೆ ಗೊತ್ತಾಗುವುದಿಲ್ಲ. ನಮ್ಮ ಮಾನ್ಯ ಮುಖ್ಯ ಮಂತ್ರಿಯವರು ಬಹಳ ಪವರ್‌ಫುಲ್ ಆದವರು. ನಮ್ಮ ಕರ್ನಾಟಕದಲ್ಲಿ ಸಾಕಷ್ಟು ಪೊಟೆನ್‌ಷಲ್ ಇರುವುದರಿಂದ ವೈಟ್ ರೆವ ಲ್ಯೂಷನ್ ಹಾಗೂ ಗ್ರೀನ್ ರೆವಲ್ಯೂಷನ್ ಮಾಡಲು ಪ್ರಯತ್ನ ಮಾಡಬೇಕು. ಪ್ರತಿಯೊಂದು ಹಳ್ಳಿ ಗಳಿಗೂ ಹೋಗಿ ಕ್ಯಾಟಲ್ ಸೆನ್‌ಸಸ್ ತೆಗೆದುಕೊಂಡು ಪ್ರತಿ ೫೦೦ ಅಥವಾ ೧೦೦೦ ಕ್ಯಾಟಲ್ಸ್‌ಗೆ ಒಂದೊಂದು ಕಾಮನ್ ಕ್ಯಾಟಲ್ ಷೆಡ್ಸ್ ಕಟ್ಟಿಸಿಕೊಡಬೇಕು. ಇವತ್ತು ಘೋರ ಗರೀಬರಿಗೆ ಮನೆಗಳನ್ನು ಕಟ್ಟಿಸಿ ಕೊಡುತ್ತಿರುವಂತೆ ಕ್ಯಾಟಲ್ಸ್‌ಗೂ ಒಂದೊಂದು ಕಾಮನ್ ಷೆಡ್ಸ್‌ನ್ನು ಕಟ್ಟಿಸಿಕೊಟ್ಟರೆ ಬಹಳ ಅನುಕೂಲ ವಾಗುತ್ತದೆ. ದನಗಳಿಗೆ ಬರತಕ್ಕ ರೋಗಗಳಿಗೆ ಔಷಧಿಯನ್ನು ಒದಗಿಸಬೇಕು. ಇದೇ ಅಲ್ಲದೇ ರೈತರ ಮಕ್ಕಳನ್ನು ಹೆಸರಘಟ್ಟ ಮುಂತಾದ ಕಡೆಗಳಲ್ಲಿರುವ ಪೌಲ್ಟ್ರಿ ಫಾರಂ ಇತ್ಯಾದಿಗಳನ್ನು ತೋರಿಸಿ ಕೊಂಡು ಬರಲು ಸ್ಟಡಿ ಟೂರ್ ಕರೆದುಕೊಂಡು ಹೋಗಬೇಕು.

ಸ್ವಾಮಿ, ನಾನು ಮಾನ್ಯ ಮುಖ್ಯ ಮಂತ್ರಿಯವರನ್ನು ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ಪ್ರತಿಯೊಬ್ಬ ಎಂ.ಎಲ್.ಎ. ಆಗಲಿ ಎಂ.ಎಲ್.ಸಿ. ಆಗಲಿ, ಅಥವಾ ಎಂ.ಪಿ. ಆಗಲಿ ವರ್ಷ ಕ್ಕೊಮ್ಮೆ ಅವರವರ ಮತ ಕ್ಷೇತ್ರಗಳಲ್ಲಿ ಪ್ರವಾಸ ಮಾಡಿ ಅಲ್ಲಿನ ಜನರ ಕಷ್ಟ-ಸುಖಗಳನ್ನು ಸದನಕ್ಕೆ ವರದಿ ಮಾಡಲು ಅವಕಾಶ ಮಾಡಿಕೊಡಬೇಕು. ಮತ್ತು ಮಹಾರಾಷ್ಟ್ರದಲ್ಲಿರುವಂತೆ ಕ್ಯಾಬಿ ನೆಟ್‌ನಲ್ಲಿರತಕ್ಕ ಪ್ರತಿಯೊಬ್ಬ ಮಂತ್ರಿಗಳಿಗೂ ಒಂದೊಂದು ಜಿಲ್ಲೆಗಳನ್ನು ವಹಿಸಿ ಅಲ್ಲಿನ ಕಷ್ಟ ಸುಖ ಗಳನ್ನು ತಿಳಿದು ಅದಕ್ಕೆ ಸೂಕ್ತ ಪರಿಹಾರವನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕು.

ಸ್ವಾಮಿ, ಇವತ್ತು ಯಾವ ಶಾಸಕರೇ ಆಗಲಿ ತಮ್ಮ ಕ್ಷೇತ್ರದ ಮತದಾರರ ಕುಂದು ಕೊರತೆಗಳ ಬಗ್ಗೆ ಸರ್ಕಾರಕ್ಕೆ ಒಂದು ಕಾಗದ ಬರೆದರೆ ಅದಕ್ಕೆ ಉತ್ತರವೇ ಬರುವುದಿಲ್ಲ. ಆದ್ದರಿಂದ ನಾನು ಈ ಮೂಲಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರನ್ನು ಮತ್ತು ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದೇ ನೆಂದರೆ, ನಮ್ಮ ಯಾವ ಶಾಸಕ ಸದಸ್ಯರೇ ಆಗಲಿ ಜನಗ ಕುಂದು ಕೊರತೆಗಳ ಬಗ್ಗೆ ಪತ್ರ ಬರೆದರೆ ತಕ್ಷಣ

ಅದನ್ನು ಸಂಬಂಧಪಟ್ಟ ಇಲಾಖೆಗೆ ಕಳುಹಿಸಿ ಉತ್ತರವನ್ನು ಕೊಡಿಸಲು ವ್ಯವಸ್ಥೆ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ನಾನು ಈಗಾಗಲೇ ಹೇಳಿದಂತೆ ಇನ್‌ಕಮ್‌ಟ್ಯಾಕ್ಸ್ ಹಾಕಿರುವುದರಿಂದ ರೈತರಿಗೆ ಬಹಳ ಅನ್ಯಾಯವಾಗುತ್ತಿದೆ. ಮಾನ್ಯ ಅರ್ಥಸಚಿವರು ಇದನ್ನು ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದಾರೆ. ಮತ್ತೆ ಒತ್ತಾಯ ಮಾಡಿ ಹೇಳುತ್ತಿದ್ದೇನೆ. ಇದರಿಂದ ರೈತರಿಗೆ ಎಷ್ಟು ಅನ್ಯಾಯವಾಗುತ್ತಿದೆ ಎಂಬುವರ ಬಗ್ಗೆ ಅವರೂ ಕೂಡ ಹಳ್ಳಿಯಲ್ಲಿಯೇ ಇದ್ದು ಚುನಾಯಿತ ಮಂತ್ರಿಗಳಾಗಿರುವುದರಿಂದ ಅರ್ಥಮಾಡಿಕೊಂಡು ಇದಕ್ಕೆ ಏನಾದರೂ ಒಂದು ಪರಿಹಾರವನ್ನು ಕಂಡುಹಿಡಿಯಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ದೊಡ್ಡ ದೊಡ್ಡ ನದಿಗಳು ಮಳೆಗಾಲದಲ್ಲಿ ತುಂಬಿ ಹರಿದು ಫ್ಲಡ್ಸ್‌ನಿಂದ ಸಾಕಷ್ಟು ಹಾನಿಯಾಗುತ್ತಿದೆ. ಇದನ್ನು ಯಾವ ರೀತಿ ಫ್ಲಡ್ ಕಂಟ್ರೋಲ್ ಮಾಡಬೇಕು ಎನ್ನುವ ಬಗ್ಗೆ ಒಂದು ಸ್ಪಷ್ಟ ಪ್ಲಾನ್ ಮಾಡಬೇಕೆಂದು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಗ್ರಾಮಾಂತರ ಪ್ರದೇಶಗಳ ಕಡೆ ಮೊಬೈಲ್ ಪೋಲೀಸ್ ವ್ಯಾನ್‌ಗಳು ತಿರುಗಾಡುವಂಥ ವ್ಯವಸ್ಥೆಯನ್ನು ಮಾಡಬೇಕು. ಏತಕ್ಕೆಂದರೆ ಸಾಗುವಳಿ ಮಾಡಿ ಕೊಯಿಲಿಗೆ ಬರುವ ವೇಳೆಯಲ್ಲಿ ಧಾನ್ಯಗಳು ವಿಶೇಷವಾಗಿ ಕಳ್ಳತನವಾಗುತ್ತಿರುತ್ತವೆ. ಇದರ ಬಗ್ಗೆ ಪೋಲೀಸ್ ಐ ಜಿ ಯವರಿಗೂ ಪ್ರಾರ್ಥನೆ ಮಾಡಿಕೊಂಡಿರುತ್ತೇನೆ. ಈ ರೀತಿ ಪೋಲೀಸ್ ಮೊಬೈಲ್ ವ್ಯಾನ್‌ಗಳು ಹಳ್ಳಿಗಾಡುಗಳಲ್ಲಿ ತಿರುಗಾಡುತ್ತಿದ್ದರೆ, ಕಳ್ಳರಿಗೆ ಒಂದು ರೀತಿಯ ಭಯ ಬರುತ್ತದೆ. ಬೆಳೆದಂಥ ಬೆಳೆಯೂ ಕೂಡ ರೈತರ ಮನೆಗೆ ಸುರಕ್ಷಿತವಾಗಿ ಸೇರುತ್ತದೆಂದು ಹೇಳುತ್ತೇನೆ.

ಚೇರ್‌ಮನ್.—ಮಾನ್ಯ ಸದಸ್ಯರೇ ತಾವು ಈ ರೀತಿ ಹೆಚ್ಚು ಕಾಲವನ್ನು ತೆಗೆದುಕೊಳ್ಳುತ್ತಾ ಹೋದರೆ, ಬೇರೆಯವರ ಕಾಲವನ್ನು ಕಬಳಿಸಿದಂತಾಗುತ್ತದೆ. ಆದ್ದರಿಂದ ಆದಷ್ಟು ಜಾಗ್ರತೆ ತಮ್ಮ ಭಾಷಣವನ್ನು ಮುಗಿಸಿ.

ಶ್ರೀ ಎ. ಬಿ. ಪಾಟೀಲ್.—ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಒಂದು ಕೋರಿಕೆ. ಏನೆಂದರೆ ಹಿಂದೆ ಕೋರ್ಟ್‌ಗಳಲ್ಲಿ ಜ್ಯೂರಿ ಸಿಸ್ಟಮ್ ಇತ್ತು. ನಾನ್ ಅಫಿಷಿಯಲ್ ಜ್ಯೂರಿಸ್ ಇದ್ದರು. ಇವರುಗಳು ಕೋರ್ಟ್‌ಗಳಲ್ಲಿ ನ್ಯಾಯ ಅನ್ಯಾಯವನ್ನು ವಿಮರ್ಶೆ ಮಾಡಿ ಸಮಸ್ಯೆಗಳನ್ನು ಬಗೆಹರಿಸಲು ನೆರವಾಗುತ್ತಿದ್ದರು. ಆದ್ದರಿಂದ ಮತ್ತೆ ಜ್ಯೂರಿ ಸಿಸ್ಟಮ್‌ನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಮತ್ತೆ ಇರಿಗೇಷನ್ ಖಾತೆಯನ್ನು ವಹಿಸಿಕೊಂಡಿರತಕ್ಕಂಥ ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನ್ನು ಕಟ್ಟುತ್ತಿದ್ದೀರಿ. ಇದರಿಂದ ಇತಿಹಾಸ ಪ್ರಸಿದ್ಧವಾದ ಕೂಡಲಸಂಗಮ ಮುಳುಗಡೆಯಾಗುತ್ತಿದೆ. ಇದು ಮುಳುಗಡೆಯಾಗುತ್ತಿದೆ ಎಂದು ಪ್ರಪಂಚದಲ್ಲೇ ಕೂಗು ಹಬ್ಬಿದೆ. ಖಡಾ ಖಂಡಿತವಾಗಿಯೂ ಹೇಳುತ್ತಿದ್ದೇನೆ. ಸರ್ಕಾರ ಯಾವುದಾದರೂ ವಿಧದಲ್ಲಿ ಮುಳುಗಡೆಯಾಗುತ್ತಿರುವುದನ್ನು ತಪ್ಪಿಸಲು ಪ್ರಯತ್ನ ಮಾಡಬೇಕು. ಇಲ್ಲವಾದರೆ ಪ್ಯಾಲೆಸ್ಟೈನ್‌ನಲ್ಲಿ ಅರಬ್ ಜನಾಂಗದವರು ಜೀಸಸ್ ಮೇಲೆ ವಿರುದ್ಧವಾಗಿ ಯಾವರೀತಿ ದಂಗೆ ಎದ್ದಿದ್ದಾರೆ. ಅದೇ ರೀತಿಯಲ್ಲಿ ಕರ್ನಾಟಕದಲ್ಲಿಯೂ ಆಗುತ್ತದೆ ಎಂದು ಹೇಳುತ್ತೇನೆ. ಅಷ್ಟೇ ಅಲ್ಲ ಜಗತ್ತಿನಲ್ಲಿ ಬಸವ ಪ್ರಮುಖಾದಿ ಜನಾಂಗ ಏನು ಇರುತ್ತದೆ ಅವರು ಒಂದು ರೆವಲ್ಯೂಷನ್ ಮಾಡತಕ್ಕಂಥ ಪರಿಸ್ಥಿತಿ ಬರುತ್ತದೆ ಎನ್ನುವುದನು ಸ್ಪಷ್ಟವಾಗಿ ಹೇಳುತ್ತೇನೆ. ಈ ಕೂಡಲ ಸಂಗಮವು ಮುಳುಗಡೆಯಾಗುವುದರಿಂದ ಕರ್ನಾಟಕದ ಅಷ್ಟೇ ಅಲ್ಲ ಪ್ರಪಂಚದಲ್ಲಿ ಸಂಸ್ಕೃತಿಯ ನಾಗರೀಕತೆಯನ್ನು ಹೊಂದಿರತಕ್ಕಂಥ ಇತಿಹಾಸ ಪ್ರಸಿದ್ಧ ಸ್ಥಳವನ್ನು ಕಳೆದುಕೊಂಡಂತಾಗುತ್ತದೆ. ಆದ್ದರಿಂದ ಇದನ್ನು ಒಂದು ಟೂರಿಸ್ಟ್ ಸೆಂಟರ್ ಮಾಡಬೇಕು. ಬಸವಣ್ಣನವರು ೧೨ನೇ ಶತಮಾನದಲ್ಲಿ ಯಾವ ಮಾತುಗಳನ್ನು ಹೇಳಿದ್ದಾರೆ ಅದೇ ಮಾತುಗಳನ್ನು ಮಹಾತ್ಮಾಗಾಂಧಿಯವರು ೨೦ನೇ ಶತಮಾನದಲ್ಲಿ ಮಾಡಲಿಕ್ಕೆ ಬಂದಿದ್ದೇನೆಂದು ಹೇಳಿದ್ದನ್ನು ನೆನಪಿಸುತ್ತಾ ಕೂಡಲ ಸಂಗಮವು ಮುಳುಗಡೆಯಾಗದಂತೆ ನೋಡಿಕೊಳ್ಳಬೇಕೆಂದು ರೂಲಿಂಗ್‌ನವರನ್ನು ಕೇಳಿಕೊಳ್ಳುತ್ತೇನೆ. ನಮ್ಮ ಕಡೆ ಪ್ರಾಜೆಕ್ಟ್ ತೆಗೆದುಕೊಂಡಿರುವುದಕ್ಕೆ ಕೊಟ್ಟಿರತಕ್ಕಂಥ ಹಣವನ್ನು ನೋಡಿದರೆ ಬಹಳ ಕಡಿಮೆ ಇರುತ್ತದೆ. ಅಮರ್ಜಾ ಪ್ರಾಜೆಕ್ಟ್ ಕೆಲಸ ನಡೆಯುತ್ತಿದೆ. ೧೦ ಕೋಟಿ ರೂಪಾಯಿಗಳು ಈ ಪ್ರಾಜೆಕ್ಟ್‌ಗೆ ೬ ಕೋಟಿ ರೂಪಾಯಿಗಳನ್ನು ಕೊಟ್ಟಿರುತ್ತೀರಿ, ಇದು ಏನೇನು ಸಾಲದು ಇನ್ನೂ ಹೆಚ್ಚಿನ ಹಣವನ್ನು ಕೊಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಗುಲ್ಬರ್ಗಾ ವಿಷಯದಲ್ಲಿ ಹೇಳುವುದಾದರೆ ಶಹಬಾದ್, ಗುಲ್ಬರ್ಗಾ ಡಿವಿಜನ್ ಹೈದರಾಬಾದ್ ಕರ್ನಾಟಕದಲ್ಲಿ ಬರುತ್ತದೆ. ಇಲ್ಲಿ ಇಂಡಸ್ಟ್ರೀಸ್ ಸಾಕಷ್ಟು ಬೆಳೆಸಬೇಕು. ಮೀಡಿಯಮ್ ಇರಿಗೇಷನ್ ಮುಖ್ಯ ಮಂತ್ರಿಗಳ ಖಾತೆಯಾಗಿರುತ್ತದೆ ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಭಾಗದಲ್ಲಿ ಸಂಚಾರ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ನಮ್ಮ ಭಾಗ ಹೈದರಾಬಾದ್ ಕರ್ನಾಟಕದಲ್ಲಿ ಮೈದಾನ ಪ್ರದೇಶವಾಗಿರುತ್ತದೆ ಇದು ಇರಿಗೇಷನ್ ಮಾಡಲು ಬಹಳ ಅನುಕೂಲವಾದ ಪ್ರದೇಶವೆಂದು ಒಬ್ಬ ಅಮೇರಿಕನ್ ಎಕ್ಸ್‌ಪರ್ಟ್ ಇಂಜಿನೀಯರ್ ಹೇಳಿರುತ್ತಾನೆ ಮಾನ್ಯ ಅಧ್ಯಕ್ಷರೇ ಕೊಟ್ಟಿರತಕ್ಕಂಥ ವೇಳೆಯಲ್ಲಿ ಭಾಷಣವನ್ನು ಮುಗಿಸಬೇಕಾಗಿರುವುದರಿಂದ ಕೊನೆಯದಾಗಿ ಒಂದು ಮಾತನ್ನು ಹೇಳುವುದೇನೆಂದರೆ ಇರಿಗೇಷನ್ ಪ್ರಾಜೆಕ್ಟ್‌ಗಳಿಗೆ ಸಾಕಷ್ಟು ಹಣವನ್ನು ಕೊಡಬೇಕು. ಹಳೇ ಮೈಸೂರು, ಹೊಸ ಮೈಸೂರು ಎಂದು ರಾಜಕಾರಣ ಮಾಡುತ್ತಿದ್ದರೆ ಹೈದರಾಬಾದ್ ಕರ್ನಾಟಕದವರು ಸುಮ್ಮನೆ ಕೂಡ್ರುವುದಕ್ಕಾಗುವುದಿಲ್ಲವೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಡಿ. ಜಯದೇವರಾಜ ಅರಸ್ (ಚಾಮುಂಡೇಶ್ವರಿ).—ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯ ಮಂತ್ರಿಗಳಿಗೆ ಸಂಬಂಧಪಟ್ಟಂತೆ ಹಾಗೂ ನೀರಾವರಿ ಖಾತೆಗೆ ಸಂಬಂಧಪಟ್ಟಂತೆ ಡಿಮ್ಯಾಂಡ್‌ಗಳನ್ನು ಏನು ನಮ್ಮ ಮುಂದಿಟ್ಟಿದ್ದಾರೆ. ಅದಕ್ಕೆ ಸ್ವಾಗತ ಬಯಸುತ್ತಾ ಕೆಲವಾರು ಸಲಹೆಗಳನ್ನು ಕೊಡಲು ಬಯಸುತ್ತೇನೆ. ಅಡ್ಮಿನಿಸ್ಟ್ರೇಟೀವ್ ರಿಫಾರ್ಮ್ಸ್ ಎಂದು ಹೇಳಿ ರಿಪೋರ್ಟನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆಂದು ಹೇಳಿದ್ದಾರೆ. Simplification of procedure & methods decentralisation of powers and measures to tone up administration ಎಂದು ಆಡಳಿತ ನಡೆಸತಕ್ಕಂಥ ಸಮಯದಲ್ಲಿ ಕೆಲವು ಸಲಹೆಗಳನ್ನು ಕೊಡಲು ಇಚ್ಛೆಪಡುತ್ತೇನೆ. ಡಿ ಸೆಂಟ್ರಲೈಸೇಷನ್ ಆಫ್ ಪವರ್ ಎಷ್ಟರ ಮಟ್ಟಿಗೆ ಆಗಿದೆ ಎನ್ನುವುದನ್ನು ರಿಪೋರ್ಟ್‌ನಲ್ಲಿ ಕೊಟ್ಟಿರುತ್ತಾರೆ. ಸುಮಾರು ೧೦-೧೫ ಇಲಾಖೆಗಳು ಕಾರ್ಯಗತವಾಗುವಾಗ ಫಾಲೊ-ಅಪ್ ಕೆಲಸಗಳ ವ್ಯವಸ್ಥೆಯನ್ನು ಮಾಡಿದ್ದಾರೆ, ಈ ಸಂದರ್ಭದಲ್ಲಿ ಏನು ಆಗಿದೆ ಎಂದರೆ ಕೆಲವು ಅಧಿಕಾರಿಗಳನ್ನು ಪುನರ್ ನೇಮಕ ಮಾಡಿಕೊಳ್ಳತಕ್ಕಂಥಾದ್ದು, ಮತ್ತು ಪ್ರಮೋಷನ್ ಕೊಡತಕ್ಕಂಥಾದ್ದು ಮಾತ್ರ ಆಗಿದೆ ಎನ್ನುವ ಅಭಿಪ್ರಾಯ ಈ ರಿಪೋರ್ಟ್ ಓದಿದ ಮೇಲೆ ಅರ್ಥವಾಗುತ್ತದೆ. ಅದರ ಬದಲು ಯಾರಿಗೋಸ್ಕರವಾಗಿ ಕಾರ್ಯಗಳು ಆಗಬೇಕು, ಸಾಮಾನ್ಯ ಜನರಿಗೆ ಸರ್ಕಾರ ಹಾಕಿಕೊಳ್ಳುವ ನೀತಿ, ಕಾರ್ಯಕ್ರಮಗಳು ರಿಫಾರ್ಮ್ಸ್‌ಗಳ ಆದೇಶಗಳು ಜನರಿಗೆ ಎಷ್ಟರಮಟ್ಟಿಗೆ ಕೊಡಲಿಕ್ಕೆ ಸಾಧ್ಯವಾಯಿತು, ಎಲ್ಲ ಸಾಮಾನ್ಯ ಜನರಿಗೆ ಅದು ತಿಳಿಯತಕ್ಕಂಥ ವ್ಯವಸ್ಥೆ ಎಷ್ಟರಮಟ್ಟಿಗೆ ನಡೆಯಿತು. ಮತ್ತು ಅಧಿಕಾರವನ್ನು ನಾವು ಎಷ್ಟರಮಟ್ಟಿಗೆ ಕೊಟ್ಟಿದ್ದೇವೆ ಎನ್ನುವುದನ್ನು ಇಲ್ಲಿ ಎಲ್ಲೂ ಹೇಳಲಿಲ್ಲ. ಏತಕ್ಕೆಂದರೆ ಈವತ್ತು ನಾನು ತಿಳಿದಹಾಗೆ ತಾಲ್ಲೂಕುಗಳಲ್ಲಿ ಅಡ್ಮಿನಿಸ್ಟ್ರೇಟೀವ್ ಬಗ್ಗೆ ಹೇಳಿದ್ದಾರೆ, ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಇರುವ ಸಿಬ್ಬಂದಿ ಸ್ಕೂಲ್ ಟೀಚರ್ಸನ್ನು ಸೇರಿಸಿಕೊಂಡು ಸುಮಾರು ಒಂದು ಸಾವಿರಕ್ಕಿಂತಲೂ ಹೆಚ್ಚಿನ ಜನ ಎಂದರೆ ಸಾವಿರದ ನಾನೂರು, ಸಾವಿರದ ಆರನೂರು ಜನ ಅಧಿಕಾರಿಗಳು ಇದ್ದಾರೆ ಏಳರಿಂದ ಒಂಬತ್ತು ಲಕ್ಷ ರೂಪಾಯಿಗಳು ಒಂದು ತಿಂಗಳಿಗೆ ತಾಲ್ಲೂಕ್ಕು ಮಟ್ಟದಲ್ಲಿ ಕೊಡುತ್ತಿದ್ದಾರೆ. ಲೆಕ್ಕಹಾಕಿ ನೋಡಿದರೆ ಅಡ್ಮಿನಿಸ್ಟ್ರೇಟೀವ್‌ಗೋಸ್ಕರವಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಇದು ಸೆಕ್ರೆಟರಿಯವರಿಂದ ಹಿಡಿದು ಗ್ರಾಮಸೇವಕನತನಕ ಖರ್ಚು ಮಾಡುವುದನ್ನು ಲೆಕ್ಕ ಹಾಕಿದರೆ ಸುಮಾರು ೬೦ ಪರ್ಸೆಂಟ್ ನಮ್ಮ ಬಡ್ಜೆಟ್‌ನಲ್ಲಿ ಖರ್ಚಾಗುವಂಥ ಒಂದು ವ್ಯವಸ್ಥೆಗೆ ಕೈಹಾಕಿದ್ದೀರಿ ಎಂದರೆ ತಪ್ಪಾಗಲಾರದು ಅವರಿಗೆ ಇಷ್ಟು ಸಂಬಳ ಕೊಟ್ಟಮೇಲೆ ಅವರಿಂದ ಅಷ್ಟೇ ಕೆಲಸಗಳನ್ನು ಸಮಾಜದ ಅಭಿವೃದ್ಧಿಗಾಗಿ ಪಡೆಯಬೇಕು ಎನ್ನುವುದು ಸರ್ಕಾರದ ಉದ್ದೇಶವಾಗಬೇಕು. ಇಷ್ಟು ಹಣವನ್ನು ಖರ್ಚು ಮಾಡಿದ್ಯಾಗ್ಯೂ ಕೂಡ ಅದರಿಂದ ಎಷ್ಟು ಪ್ರಯೋಜನವಾಗಬೇಕೋ ಅಷ್ಟು ಪ್ರಯೋಜನವಾಗಿದೆಯೆ ? ಸಾಮಾನ್ಯ ಜನರು ಅಧಿಕಾರಿಗಳಿಂದ ಪ್ರಯೋಜನವನ್ನು ಪಡೆಯುತ್ತಿದ್ದಾರೆಯೇ ? ಪ್ರಯೋಜನವಾಗದಿದ್ದರೆ ಮುಂದೆ ಈ ಬಗ್ಗೆ ಮಾಡುವಂತಹ ವ್ಯವಸ್ಥೆ ಏನು ಎಂಬುದರ ಬಗ್ಗೆ ನಾವು ಮೊದಲು ಯೋಚನೆ ಮಾಡಬೇಕು. ಸಚಿವ ಸಂಪುಟದಲ್ಲಿ ಅಡ್ಮಿನಿಸ್ಟ್ರೇಟೀವ್ ರಿಫಾರ್ಮ್ಸ್ ಎಂಬುದಾಗಿ ನೇಮಿಸಿಕೊಂಡಿದ್ದಾರೆ. ಇದೂ ಅಲ್ಲದೆ ನಾವು ಬೇಕಾದಷ್ಟು ಕನ್ಸಲ್ಟೇಟಿವ್ ಕಮಿಟಿಗಳನ್ನು ಮಾಡಿದ್ದೇವೆ: ಜೊತೆಗೆ ಪಬ್ಲಿಕ್ ಅಕೌಂಟ್ಸ್ ಕಮಿಟಿ ಇದೆ. ಎಸ್ಟಿಮೇಟ್ ಕಮಿಟಿ ಇದೆ. ಇಷ್ಟೆಲ್ಲಾ ಕಮಿಟಿಗಳು ಇದ್ದರೂ ಕೂಡ ನಾವು ನಿರೀಕ್ಷಣೆ ಮಾಡಿದ ಮಟ್ಟದಲ್ಲಿ ಕಾರ್ಯಗತವಾಗುತ್ತಿಲ್ಲ. ಸಚಿವಾಲಯದ ಮಟ್ಟದಲ್ಲಿ ಯಾವ ರೀತಿ ಕೆಲಸ ಮಾಡುತ್ತಿದ್ದಾರೆಂಬುದು ನಾನು ಹೇಳುವುದಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ವಾಸ ಮಾಡುತ್ತಿರುವ ಒಬ್ಬ ರೈತ ಕಛೇರಿಯಲ್ಲಿ ತನ್ನ ಕೆಲಸ ಮಾಡಿಸಿಕೊಳ್ಳು

ತ್ತಾನೆ ಎಂಬುದನ್ನು ನೋಡಬೇಕಾಗಿದೆ. ಬಹಳ ಸುಲಭ ರೀತಿಯಲ್ಲಿ ಆಗುತ್ತಿಲ್ಲ. ಆತನು ಊರಿಂದ ಎಷ್ಟೋ ಮೈಲಿಗಳನ್ನು ನಡೆದುಕೊಂಡು ಬಂದಿರುತ್ತಾನೆ. ಆತನು ಬಂದಿದ್ದಾಗ ಅಧಿಕಾರಿಗಳು ಇಲ್ಲದೇ ವಾಪಸ್ಸು ಹೋಗಬೇಕಾದ ಪರಿಸ್ಥಿತಿ ಇದೆ. ಮತ್ತೆ ಅಧಿಕಾರಿ ಸಿಕ್ಕಿದಾಗ ಆ ರೈತನ ಬಗ್ಗೆ ಆಸಕ್ತಿ ವಹಿಸಿ ಕೆಲಸ ಮಾಡುತ್ತಾನೆ ? ಈ ದೃಷ್ಟಿಯಿಂದ ಅಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸ್‌ನ್ನು ನೋಡಬೇಕಾಗುತ್ತದೆ. ಜಿಲ್ಲಾ ಮಟ್ಟಗಳಲ್ಲಿಯಾಗಲಿ, ತಾಲ್ಲೂಕು ಮಟ್ಟಗಳಲ್ಲಿಯಾಗಲಿ, ರೈತರು ಬರೆದಂತಹ ಕಾಗದಕ್ಕೆ ಯಾವ ರೀತಿಯ ಪುರಸ್ಕಾರ ಸಿಕ್ಕುತ್ತಿದೆ ಎಂಬುದನ್ನು ನೋಡುವುದಾದರೆ. ಒಬ್ಬ ರೈತನು ತನ್ನ ಖಾತೆಯನ್ನು ಬದಲಾವಣೆ ಮಾಡಿಕೊಳ್ಳಬೇಕಾದರೆ ಸಾಕಷ್ಟು ಹಣವನ್ನು ಇವತ್ತೂ ಖರ್ಚು ಮಾಡಬೇಕು. ಅದರಲ್ಲೂ ಶಕ್ತಿ ಇದ್ದವರಿಗೆ ಅನುಕೂಲವಾಗುತ್ತದೆ. ಶಕ್ತಿ ಇಲ್ಲದಿದ್ದವರಿಗೆ ಅನುಕೂಲವಾಗುವುದಿಲ್ಲ Procedure for dealing with the letters received from Members of Legislature and Parliament. ಸಚಿವಾಲಯಕ್ಕೆ ಶಾಸಕರು ಬರೆದ ಪತ್ರಕ್ಕೆ ಉತ್ತರ ಬರುತ್ತಿಲ್ಲ. ಆ ರೀತಿಯ ಪದ್ಧತಿಯನ್ನು ನಾವು ಇನ್ನೂ ಜಾರಿಗೆ ತಂದಿಲ್ಲ. ಆದರೆ ಈ ಅಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸ್ ಯಾರಿಗೋಸ್ಕರ ? ರೈತನ ಕಷ್ಟಸುಖಗಳಿಗೆ ನೆರವಾಗುವ ರೀತಿಯಲ್ಲಿ ಅಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸ್ ವರದಿ ಇಲ್ಲ ಎಂಬುದಾಗಿ ಹೇಳಬಲ್ಲೆ. ಮಾನ್ಯ ಮುಖ್ಯ ಮಂತ್ರಿಗಳನ್ನು ವಿನಂತಿಯಿಂದ ಕೇಳಿಕೊಳ್ಳುವುದೇನೆಂದರೆ. ಈ ಅಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸ್‌ಗೋಸ್ಕರ ಒಂದು ಶಾಸಕರ ಸಮಿತಿ ಇರಬೇಕು. ಆಡಳಿತದಲ್ಲಿ ವಿಕೇಂದ್ರೀಕರಣ ಮಾಡುವುದೂ ಈ ಸಮಿತಿಗೆ ಅಧಿಕಾರ ಇರಬೇಕು. ಭೂಮಿ ನಿಜವಾಗಿ ಸಿಕ್ಕಬೇಕಾದವರಿಗೆ ಸಿಕ್ಕುತ್ತಿಲ್ಲ. ಆ ಬಡವ ಬೆಂಗಳೂರಿನವರೆಗೆ ಹಣವನ್ನು ಖರ್ಚು ಮಾಡಿಕೊಂಡು ಬರುವುದಕ್ಕೆ ಸಾಧ್ಯವೇ ? ಸಾಧ್ಯವಿಲ್ಲ. ದುಡ್ಡು ಇರುವವರು ಬೆಂಗಳೂರಿನವರೆಗೂ ಬರುತ್ತಾನೆ ಹಣವನ್ನು ಖರ್ಚು ಮಾಡುತ್ತಾನೆ. ಜಮೀನನ್ನು ಮಾಡಿಕೊಂಡು ಹೋಗುತ್ತಾನೆ. ಇದರ ಬಗ್ಗೆ ಒಂದು ಉದಾಹರಣೆಯನ್ನು ಹೇಳುವುದಾದರೆ. ಹಿಂದೆ ನಾನು ಹೆಗ್ಗಡದೇವನಕೋಟೆಯ ಲ್ಯಾಂಡ್ ಡಿಸ್ಟ್ರಿಬ್ಯೂಷನ್ ಕಮಿಟಿಯ ಸದಸ್ಯನಾಗಿದ್ದೆ. ಒಂದೇ ಜಮೀನನ್ನು ೧೦ ಜನರಿಗೆ ಕೊಟ್ಟಿದ್ದಾರೆ. ಇವತ್ತಿನವರೆಗೂ ಈ ಜಮೀನನ್ನು ಇತ್ಯರ್ಥ ಮಾಡಿ ಕೊಡುವುದಕ್ಕಾಗಿಲ್ಲ. ಆತನು ಇವತ್ತಿಗೂ ಪೋಲೀಸ್ ಠಾಣೆ ಅಥವಾ ರೆವಿನ್ಯೂ ಇನ್‌ಸ್ಪೆಕ್ಟರ್ ಅಥವಾ ತಹಸೀಲ್ದಾರ್ ರವರ ಮನೆಗೆ ಅಲೆಯುತ್ತಲೆ ಇರತಕ್ಕಂತಹ ಪರಿಸ್ಥಿತಿ ಇದೆ. ಅದು ಇವತ್ತಿನವರೆಗೂ ಇತ್ಯರ್ಥವಾಗಿಲ್ಲ. ಈ ಅಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸ್ ಏನು ಹೇಳುತ್ತೀರಿ ಇದರಿಂದ ನಿಜವಾಗಿಯೂ ಸಮಾಜಕ್ಕೆ ಪ್ರಯೋಜನವಾಗುವ ರೀತಿಯಲ್ಲಿ ಇಲ್ಲ ಎಂಬುದಾಗಿ ಹೇಳುತ್ತೇನೆ.

ಇವತ್ತು ನಾವು ನಿರುದ್ಯೋಗಿ ಪದವೀಧರರಿಗೆ ಆರ್ಥಿಕವಾಗಿ ನೆರವನ್ನು ಕೊಡಬೇಕೆಂದು ಸುಮಾರು ೧೦ ಸಾವಿರ ಜನ ಯುವಕ ಪದವೀಧರರಿಗೆ ಅವರು ಇಂಜಿನೀಯರ್ ಇರಬಹುದು, ಡಾಕ್ಟರ್ ಇರಬಹುದು, ಅಥವಾ ಸಾಮಾನ್ಯ ಪದವೀಧರ ಇರಬಹುದು. ಅಂತಹ ೧೦ ಸಾವಿರ ಜನರಿಗೆ ಆರ್ಥಿಕ ನೆರವನ್ನು ಕೊಡುವ ಸಲುವಾಗಿ ೧.೮ ಲಕ್ಷ ರೂಪಾಯಿಗಳನ್ನು ಅವರಿಗಾಗಿ ಖರ್ಚು ಮಾಡುತ್ತಿದ್ದೇವೆ. ಈ ವರ್ಷ ಎರಡು ಕೋಟಿ ರೂಪಾಯಿಗಳು ಆದರೂ ಆಗಬಹುದು. ಈ ೧೦ ಸಾವಿರ ಯುವಕ ಪದವೀಧರರನ್ನು ಹತ್ತಾರು ಇಲಾಖೆಯಲ್ಲಿ ಕೆಲಸಕ್ಕೆ ನೇಮಿಸಿ ಅದರಿಂದ ಅವರು ಉಪಯೋಗವನ್ನು ಪಡೆಯುತ್ತಿದ್ದಾರೆ ; ನಿಜವಾಗಿ ಪ್ರಯೋಜನ ಪಡೆಯುತ್ತಿದ್ದಾನೆಯೋ ? ಎಂಬುದನ್ನು ನಾವು ನೋಡುವುದಾದರೆ, ಶಾಸಕರ ಭವನಕ್ಕೆ ಇಂತಹವರು ಬರುತ್ತಲೇ ಇರುತ್ತಾರೆ. ಅವರು ಇಲಾಖೆಯಲ್ಲೂ ಕೆಲಸ ಮಾಡುತ್ತಿಲ್ಲ, ಇಲ್ಲಿಗೆ ಬಂದು ಸರಿಯಾವ ಕೆಲಸ ಇಲ್ಲದೆ ಅಲೆಯುತ್ತಿರುವುದನು ನಾವು ನೋಡುತ್ತಿದ್ದೇವೆ ಅವರು ಕಷ್ಟದಲ್ಲಿದ್ದಾರೆಂದು ಆರ್ಥಿಕವಾಗಿ ಹಿಂದುಳಿದವರಿಗೆ ನೆರವು ಕೊಡಬೇಕೆಂದು ಸಹಾಯ ಮಾಡಬೇಕೆಂದು ಮಾಡಿದ್ದೇವೆ. ಆದರೆ ಆ ಸಹಾಯವನ್ನು ಅವನು ಯಾವ ಮಟ್ಟದಲ್ಲಿಟ್ಟಿದ್ದೇವೆ ಎಂಬುದನ್ನು ನೋಡುವುದಾದರೆ, ಶೇಕಡ ೧೦ ಭಾಗ ಸರಿಯಾಗಿ ಕೆಲಸ ಮಾಡುತ್ತಿರಬಹುದು, ಇನ್ನುಳಿದ ೯೦ ಭಾಗ ಇಲಾಖೆಯಲ್ಲಿ ಹೊಂದಾಣಿಕೆಯಿಂದ ಕೆಲಸ ಮಾಡುತ್ತಿಲ್ಲ. ಅಥವಾ ಅವರನ್ನು ಪೂರ್ಣವಾಗಿ ಉಪಯೋಗಿಸಿಕೊಂಡಿಲ್ಲ. ಆತನು ಗ್ರಾಮದಲ್ಲಿ ವ್ಯವಸಾಯ ಮಾಡುವುದನ್ನೂ ತಪ್ಪಿಸಿ ಮನೆಯಲ್ಲಿದ್ದವರನ್ನೂ ತಪ್ಪಿಸಿ ಪಟ್ಟಣಕ್ಕೆ ಬರುವ ಹಾಗೆ ಮಾಡಿದ್ದೇವೆ. ನಾವು ಕೊಡುತ್ತಿರುವ ೧೫೦ ರೂಪಾಯಿ ಆತನಿಗೆ ಸಾಲುವುದಿಲ್ಲ. ಅದು ಸಾಲದೇ ಇರುವುದರಿಂದ ಪುನಃ ಮನೆಯಿಂದ ದುಡ್ಡನ್ನು ತೆಗೆದುಕೊಂಡು ತನ್ನ ಜೀವನವನ್ನು ಈ ಪಟ್ಟಣದಲ್ಲಿ ನಡೆಸತಕ್ಕಂತಹ ಪರಿಸ್ಥಿತಿ ಇದೆ ಈ ವರ್ಷ ೧೦ ಜನ ಇದ್ದಾರೆ. ಮುಂದಿನ ವರ್ಷ ೨೦ ಸಾವಿರ ಜನ ಆಗಬಹುದು. ೨೦ ಸಾವಿರ ಜನರಿಗೆ ೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕಂತಹ ಪರಿಸ್ಥಿತಿ ಬರುತ್ತದೆ. ಈ ಎಲ್ಲ ದೃಷ್ಟಿಯಿಂದ ಅಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸನಲ್ಲಿ ಏನು ಹೇಳುತ್ತೀರಿ ಅದನ್ನು ಉಪಯೋಗಿಸಿಕೊಂಡಿದ್ದೀರಾ ?

ಪಂಚಾಯಿತಿ ಸೆಕ್ರೆಟರಿಯನ್ನಾಗಿ ಈ ೧೦ ಸಾವಿರ ಜನರನ್ನು ನೇಮಕ ಮಾಡಿಕೊಳ್ಳಿ ಎಂಬುದಾಗಿ ಸಂಬಂಧಪಟ್ಟ ಮಂತ್ರಿಗಳಲ್ಲಿ ಹೇಳಿದಾಗ ನನ್ನಲ್ಲಿ ಹಣ ಇಲ್ಲ ಎಂಬುದಾಗಿ ಹೇಳಿದರು. ಇವರನ್ನು ಪಂಚಾಯಿತಿ ಸೆಕ್ರೆಟರಿಯಾಗಿ ನೇಮಿಸಿದರೆ ಅವರು ಹಳ್ಳಿಯ ವಾತಾವರಣದಲ್ಲಿ, ತನ್ನ ಊರಿನಲ್ಲಿ ಪಂಚಾಯಿತಿ ಸೆಕ್ರೆಟರಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಎಲ್ಲ ದೃಷ್ಟಿಯಿಂದ ಇದಕ್ಕಾಗಿ ಒಂದು ಶಾಸಕರ ಸಮಿತಿಯನ್ನು ಮಾಡಬೇಕೆಂದು ಹೇಳುತ್ತೇನೆ. ಸಾಮಾನ್ಯ ಜನರಿಗೆ ಪ್ರಯೋಜನವಾಗುವ ರೀತಿಯಲ್ಲಿ ಅಧಿಕಾರ ವಿಕೇಂದ್ರೀಕರಣ ಅಧಿಕಾರದ ವ್ಯಾಪ್ತಿ ಬಗ್ಗೆ ಪರಿಶೀಲಿಸಬೇಕೆಂಬ ಸಲಹೆಯನ್ನು ತಮ್ಮ ಮುಂದೆ ಇಡುತ್ತಿದ್ದೇನೆ.

ನಮ್ಮ ಹಳ್ಳಿಗಳಲ್ಲಿ ವಿಲೇಜ್ ಡಿಫೆನ್ಸ್ ಫೋರ್ಸ್ ಎಂಬುದಾಗಿ ಏನು ರಚನೆ ಮಾಡಿದ್ದೀರಿ, ಇದರಿಂದ ಗ್ರಾಮಕ್ಕೆ ಯಾವ ರೀತಿಯ ಉಪಯೋಗ ಆಗಬೇಕೋ ಅದು ಆಗುತ್ತಿಲ್ಲ. ಐ ಜಿ.ಪಿ.ಯವರೂ ಇಲ್ಲಿಯೇ ಇದ್ದಾರೆ, ಅವರು ತಪ್ಪು ತಿಳಿದುಕೊಳ್ಳಬಾರದು, ತಾಲ್ಲೂಕು ಮಟ್ಟದ ಅಧಿಕಾರ ವರ್ಗದವರಿಗೆ ಈ ರೀತಿಯ ಏಜೆನ್ಸಿಗಳಾಗಿದ್ದಾರೆ ಎಂಬುದಾಗಿ ಹೇಳಿದರೆ ತಪ್ಪಾಗಲಾರದು. ಸರ್ಕಾರದವರೇ ಒಂದು ಏಜೆನ್ಸಿಯನ್ನು ಮಾಡಿದ ಹಾಗೆ ಆಗಿದೆ. ವೈಯಕ್ತಿಕವಾಗಿ ಅವರಿಗೆ ಬೆಲೆ ಕೊಡದಿದ್ದರೆ ಆ ವರಿಗೆ ಕಿರುಕುಳ ಕೊಡುತ್ತಿದ್ದಾರೆ ಬಡವರು ಬೆಳಿಗ್ಗೆಯಾದ ತಕ್ಷಣ ನಮ್ಮಲ್ಲಿಗೆ ಬರುತ್ತಾರೆ, ನಾವು ಈ ಬಗ್ಗೆ ಸಬ್ ಇನ್ಸ್‌ಪೆಕ್ಟರಿಗೆ ಫೋನ್ ಮಾಡಿದರೆ ಅವರು ಈ ಶಾಸಕರಿಗೆ ಬೇರೆ ಕೆಲಸವೇ ಇಲ್ಲ ಎಂಬುದಾಗಿ ಹೇಳುವಂತಹ ಪರಿಸ್ಥಿತಿ ಬಂದಿದೆ. ಅವರಿಗೆ ಸರಿಯಾದ ತರಬೇತಿಯನ್ನು ಕೊಟ್ಟಿಲ್ಲ ಸರ್ವೀಸ್ ಮೈಂಡ್ ಅವರಲ್ಲಿ ಬಂದಿಲ್ಲ. ಜಾತಿ ಆಧಾರದ ಮೇಲೆ ಆಗಲಿ, ಅಥವಾ ಇನ್ನಿತರೇ ಬೇರೆ ಯಾವುದಾದರೂ ಜಿಜ್ಞಾಸೆ ಪಟ್ಟು, ಒಂದು ರೀತಿಯ ವೈಮನಸ್ಸು ಅವರಲ್ಲಿ ಇದೆ. ಇದರಿಂದ ಸರ್ಕಾರಕ್ಕೆ ಹೆಚ್ಚು ಪ್ರಯೋಜನವಾಗಿಲ್ಲ, ವಿಲೇಜ್ ಡಿಫೆನ್ಸ್ ಫೋರ್ಸ್ ಬಗ್ಗೆ ದೊಡ್ಡದಾಗಿ ಮೆರವಣಿಗೆ ಮಾಡಿ, ಅವರಿಗೆ ಒಂದು ರೀತಿಯ ತರಬೇತಿಯನ್ನು ಕೊಟ್ಟಿರು, ಆದರೆ ಆ ತರಬೇತಿ ಯಾವ ಕಡೆಗೆ ಹೋಯಿತೋ ತಿಳಿಯದು. ಹಿಂದೆ ಹಳ್ಳಿಯಲ್ಲಿ ಪೋಲೀಸ್ ಪಾಟೀಲ್ ಎಂಬುದಾಗಿ ಇರುತ್ತಿದ್ದ. ಆತನು ಏನಾದರೂ ಮಾಡಬೇಕಾದರೆ ಹಿಂದೆ ಮುಂದೆ ನೋಡುತ್ತಿದ್ದ. ಇವರು ಏನೂ ನೋಡುವುದಿಲ್ಲ. ಆತನಿಗೆ ಹೇಗೆ ಬೇಕೋ ಆ ರೀತಿ ಮಾಡುತ್ತಾನೆ. ಇದರಿಂದ ಗ್ರಾಮದಲ್ಲಿ ಕಿರುಕುಳ ಜಾಸ್ತಿಯಾಗಿದೆ. ಇದನ್ನು ನಾನು ಎಂ ಎಲ್.ಸಿ. ಆಗಿದ್ದ ಸಮಯದಲ್ಲೂ ಕೂಡ ಹೇಳಿದ್ದೇನೆ ಕೆಲವು ಕಡೆ ಚೆನ್ನಾಗಿ ಆಗಿರಬಹುದು. ಒಟ್ಟಿನಲ್ಲಿ ಈ ಫೋರ್ಸ್‌ನಿಂದ ಸಮಾಜಕ್ಕೆ ಹೆಚ್ಚಿನ ರೀತಿಯಲ್ಲಿ ಪ್ರಯೋಜನವಾಗಿಲ್ಲ. ಆದಷ್ಟು ಜಾಗ್ರತೆ ಈ ವ್ಯವಸ್ಥೆಯನ್ನು ತಪ್ಪಿಸುವುದೇ ಉತ್ತಮವೆಂದು ಕಾಣುತ್ತದೆ. ಇದನ್ನು ತಪ್ಪಿಸುವುದರಿಂದ ನಮಗೆ ಅಷ್ಟೇನೂ ಕಷ್ಟವಾಗುವುದಿಲ್ಲ. ಇರುವ ಪೋಲೀಸ್‌ನವರೇ ನಮ್ಮನ್ನು ನೋಡಿಕೊಳ್ಳುತ್ತಾರೆ.

೩-೦೦ ಪಿ.ಎಂ.

ಕೊನೆಯದಾಗಿ ಇನ್ನು ಒಂದೆರಡು ವಿಷಯಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈಗ ಡೈರಿ ಡೆವಲಪ್‌ಮೆಂಟ್ ಬಗ್ಗೆ ಹೇಳಬೇಕಾದರೆ ಈವೊತ್ತಿನ ದಿವಸ ಈ ಒಂದು ಡೈರಿಯ ಅಭಿವೃದ್ಧಿಗೆ ಅಮೆರಿಕಾ ಹಣ ಬೇಕಾದಷ್ಟು ಬರುತ್ತಾ ಇದೆ. ಈಗ ಡೈರಿ ಏನು ಸ್ಥಾಪನೆ ಮಾಡಿದ್ದೀರಿ ಈ ಒಂದು ಆರ್ಗನೈಸೇಷನ್‌ನಲ್ಲಿ ಹಸುಗಳನ್ನು ಕೊಡುಕೊಳ್ಳಲಿಕ್ಕೆ ಸಾಲ ಕೊಡುತ್ತಿದ್ದಾರೆ ಇವರಿಗೆ ಕೊಡುವ ಸಾಲದಲ್ಲಿ ಕೊನೇ ಪಕ್ಷ ೫೦ ಪರ್ಸೆಂಟ್ ಅಷ್ಟು ಹಣ ಮಿಸ್‌ಯೂಸ್ ಆಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ರೈತ ಈ ಬಗ್ಗೆ ತಾನು ಏನು ಕಷ್ಟಪಡುತ್ತಾನೋ ಆ ಕಾರ್ಮಿಕನಿಗೆ ಇದರಿಂದ ಏನು ಉಳಿಯಬೇಕೋ ಅದು ಉಳಿಯುತ್ತಾ ಇಲ್ಲಾ. ತಮಗೆ ಒಂದು ಉದಾಹರಣೆ ಹೇಳಬೇಕಾದರೆ ಸಮುದ್ರದ ನೀರು ಕಾದಿದರೆ ಅದು ಹೇಗೆ ಆವಿಯಾಗಿ ಹೋಗುತ್ತದೋ ಆ ರೀತಿಯಾಗಿ ನಮ್ಮ ಅಮೇರಿಕಾದ ಹಣ, ಅವರು ನಮ್ಮ ಯೋಜನೆಗಳಿಗೆ ಇಂಡಿಯಾಕ್ಕೆ ಕೊಡುತ್ತಿರುವ ಹಣ ಹೋಗುತ್ತಾ ಇದೆ. ಅವರು ಬೇಕಾದಷ್ಟು ಸಾಲವನ್ನು ಏನು ಕೊಡುತ್ತಿದ್ದಾರೋ ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳುವುದಕ್ಕೆ ತಕ್ಕ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಜೊತೆಗೆ ಯಾವಾಗಲೂ ಕೂಡ ನಾವು ಆ ಹಣವನ್ನೇ ನಂಬಬಾರದು ನಮ್ಮ ರಿಸೋರ್ಸಸ್ ಏನು ಇದೆ ಅದನ್ನೂ ಸಹ ಉಪಯೋಗಿಸಿಕೊಳ್ಳುವುದಕ್ಕೆ ಸರಿಯಾದ ರೀತಿಯಲ್ಲಿ ಅದನ್ನು ಎಷ್ಟರ ಮಟ್ಟಿಗೆ ಕ್ರೋಢೀಕರಿಸಬೇಕೋ ಅದಕ್ಕೆ ಪ್ರಯತ್ನ ಮಾಡಬೇಕು ಮತ್ತು ಆ ಹಣ ಆ ಗ್ರಾಮಾಂತರದಲ್ಲಿ ಉಳಿಯುವಂತೆ ಮಾಡಬೇಕು ಎಂದು ಹೇಳುತ್ತೇನೆ. ತಮಗೆ ಒಂದು ಉದಾಹರಣೆ ಹೇಳುವುದಾದರೆ ೧೯೭೭ನೇ ಇಸವಿಯಲ್ಲಿ ನಾನು ಈ ಬಗ್ಗೆ ಒಂದು ಡಿಸ್ಟ್ರಿಕ್ಟ್

ಬ್ಯಾಂಕೊಂದನ್ನು ಮಾಡಿ ಇದರಲ್ಲಿ ಬರತಕ್ಕಂಥಾ ರಿಸೋರ್ಸಸ್‌ನಿಂದಲೇ ಆ ಡಿಸ್ಟ್ರಿಕ್ಟ್ ಬ್ಯಾಂಕ್‌ನವರೇ ರೋಲ್ ಮಾಡಬೇಕು ಅಂತ ನಾನು ಮಾಡಿದೆ. ಆದರೆ ಅದು ಎಲ್ಲಿಯವರೆಗೆ ಬಂತು ಎಂದರೆ ನಾನು ಹೋದಮೇಲೆ ಮುಂದಕ್ಕೆ ಅದನ್ನು ರೂಢಿಸಲಿಲ್ಲಾ. ನಾನು ಮೊದಲೇ ಹೇಳಿದ ಹಾಗೆ ಒಂದು ಗ್ರಾಮದಲ್ಲಿ ಸಾಕಷ್ಟು ಹಣವನ್ನು ಹಾಕಿದರೆ ಅವರು ಅದರಿಂದ ಬರತಕ್ಕಂಥಾ ರಿಸೋರ್ಸ್‌ನಲ್ಲೇ ಅದನ್ನು ಉಳಿಸಿಕೊಂಡು ಹೋಗವುದಕ್ಕೆ ಪ್ರಯತ್ನ ಮಾಡುವುದಿಲ್ಲಾ. ಆದುದರಿಂದ ನಾವು ಹಾಕಿದ ಹಣವೆಲ್ಲಾ ನಾನು ಮೊದಲೇ ಹೇಳಿದ ಹಾಗೆ ಸಮುದ್ರದ ನೀರು ಕಾದಿದರೆ ಹೇಗೆ ಆವಿಯಾಗಿ ಹೋಗುತ್ತದೋ ಆ ರೀತಿಯಾಗಿ ಅದು ಆವಿಯಾಗಿ ಹೋಗುತ್ತದೆ. ರೈತರು ಇದನ್ನು ಯಾವರೀತಿಯಿಂದಲೂ ಕೂಡ ಉಳಿಸಿಕೊಳ್ಳುವುದಕ್ಕಾಗುವುದಿಲ್ಲಾ. ಈಗ ಡೈರಿ ಡೆವಲಪ್‌ಮೆಂಟ್‌ಗಾಗಿ ಈ ಬ್ಯಾಂಕ್‌ನವರು ರೈತರಿಗೆ ಏನೂ ಸಾಲ ಕೊಡುತ್ತಿದ್ದಾರೋ ಇದೂ ಕೂಡ ಹಾಗಾಗಿದೆ ಆದುದರಿಂದ ಈ ಬಗ್ಗೆ ಸರ್ಕಾರ ಗಮನ ಕೊಟ್ಟು ಅದರಲ್ಲಿ ಸರಿಯಾದ ರೀತಿಯಲ್ಲಿ ಕೆಲಸ ಮಾಡುವ ಹಾಗೆ ಮಾಡಿ ಇಡೀ ದೇಶಕ್ಕೆ ಇದು ಮಾದರಿಯಾಗುವಂತೆ ಮಾಡಬೇಕು ಎಂದು ಹೇಳುತ್ತೇನೆ. ತಮಗೆ ಹೇಳಬೇಕಾದರೆ ನಾನು ಮಹಾರಾಷ್ಟ್ರಕ್ಕೆ ಹೋಗಿದ್ದಾಗ ಅಲ್ಲಿ ನೋಡಿದೆ, ಅಲ್ಲಿ ಧೂಳಿಯಾ ಮಿಲ್ಕ್ ಯೂನಿಯನ್‌ನವರು ಈ ರೀತಿ ಪ್ರಯತ್ನ ಮಾಡಿ ಯಶಸ್ವಿಯಾಗಿದ್ದಾರೆ. ಈವೊತ್ತು ವರ್ಲ್ಡ್ ಬ್ಯಾಂಕ್‌ನವರು ನಮಗೆ ೬ ಪರ್ಸೆಂಟ್ ಬಡ್ಡಿಯಂತೆ ಹಣ ಕೊಡುತ್ತಿದ್ದಾರೆ ನಾವು ಇದನ್ನು ಹಂಚುವಾಗ ೧೧ ಪರ್ಸೆಂಟ್ ಬಡ್ಡಿ ಹಾಕಿ ಕೊಡುತಿದ್ದೇವೆ. ನಾವು ಈ ರೈತರಿಗೆ ಇದಕ್ಕಾಗಿ ಏನು ಹಣ ಹಂಚುತ್ತಿದ್ದೇವೋ ಇದರಲ್ಲಿ ಬಹಳಷ್ಟು ಹಣ ಮಧ್ಯವರ್ತಿ ಜನಗಳ ಪಾಲಾಗುತ್ತಿದೆ. ಬಡವರ ಹೆಸರನ್ನು ಹೇಳಿ ಈ ಮಧ್ಯವರ್ತಿಗಳು ಲಾಭ ಮಾಡಿಕೊಳ್ಳುತ್ತಿದ್ದಾರೆ. ಇದನ್ನು ಆದಷ್ಟು ಜಾಗ್ರತೆ ನಿಲ್ಲಿಸಬೇಕು ಎಂದು ಹೇಳಿ ಮತ್ತು ಇದರ ಬಗೆ ಒಂದು ಸರಿಯಾದ ವ್ಯವಸ್ಥೆ ಮಾಡುವುದಕ್ಕೆ ತಕ್ಕ ಯೋಚನೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಕೊನೆಯದಾಗಿ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಮೈನರ್ ಇರ್ರಿಗೇಷನ್ ಬಗ್ಗೆ ಎರಡು ಮಾತುಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮ್ಮ ಮೈಸೂರು ತಲ್ಲೂಕಿನಲ್ಲಿ ಇಳವಾಳ ಹೋಬಳಿ ಅಂತ ಇದೆ ಅದು ಬಹಳ ಎತ್ತರವಾದಂಥಾ ಸ್ಥಳ ಅಲ್ಲಿ ಕನ್ನಂಬಾಡಿ ಕಟ್ಟೆ ಒಡೆದು ಹೋದಾಗ ಅಲ್ಲಿ ಮುಳುಗಡೆಯಾದಂಥಾ ಜನಗಳು ಆ ಒಂದು ದಡಕ್ಕೆ ಬಂದು ಸೇರಿದಂಥಾ ಸ್ಥಳ. ಅಲ್ಲಿ ಯಾವ ನೀರಾವರಿ ಯೋಜನೆಯನ್ನೂ ಸಹ ಮಾಡಿಲ್ಲಾ ಅಲ್ಲಿ ಲಿಫ್ಟ್ ಇರ್ರಿಗೇಷನ್ ಮಾಡುವುದಕ್ಕೆ ಸಾಧ್ಯ ಇದೆ. ಅಲ್ಲಿ ಒಂದಲ್ಲ ನಾಲ್ಕಾರು ಲಿಫ್ಟ್ ಇರ್ರಿಗೇಷನ್ ಮಾಡಬಹುದು. ಸಧ್ಯಕ್ಕೆ ಅಲಿ ಎರಡು ಲಿಫ್ಟ್ ಇರ್ರಿಗೇಷನ್ ಮಾಡುವುದಕ್ಕೆ ಸಾಧ್ಯತೆ ಇದೆ. ಅದನ್ನು ಪರೀಕ್ಷೆ ಮಾಡಿಕೊಂಡೂ ಸಹ ಹೋಗಿದ್ದಾರೆ. ಆ ಎರಡು ಸ್ಥಳ ಯಾವುದೆಂದರೆ ಯಾಚೇಗೌಡನಹಳ್ಳಿ, ಮತ್ತು ಗುಂಡವಾಡಿ; ಇನ್ನೊಂದು ಕಮರ್‌ಬೆರೊನ ಒಂದು ಪಿಕ್‌ಅಪ್ ಕೆಲಸಕ್ಕೆ ೨ ಲಕ್ಷ ರೂಪಾಯಿನ ಒಂದು ಸ್ಕೀಮನ್ನು ತಯಾರು ಮಾಡಿದ್ದಾರೆ. ಈ ಮೂರು ಕೆಲಸಗಳನ್ನೂ ಸಹ ತೆಗೆದುಕೊಂಡರೆ ಆ ಭಾಗಕ್ಕೆ ಸಾಕಾದಷ್ಟು ನೀರನ್ನು ಕೊಡಬಹುದು ತಮಗೆ ಹೇಳಬೇಕಾದರೆ ಈ ೩ ಸ್ಕೀಮಿನ ಯೋಜನೆಗಳ ಕೆಲಸಗಳನ್ನೂ ತೆಗೆದುಕೊಂಡರೆ ಅದು ೧೦ ಲಕ್ಷಕ್ಕಿಂತ ಹೆಚ್ಚಾಗುವುದಿಲ್ಲ ಅಲ್ಲದೆ ಆ ಜನಗಳಿಗೆ ನೀರಾವರಿ ಸೌಕರ್ಯವೂ ಕೂಡ ಆಗುತ್ತದೆ ಆದುದರಿಂದ ಸರ್ಕಾರದವರು ದಯವಿಟ್ಟು ಇದನ್ನು ಗಮನಕ್ಕೆ ತೆಗೆದುಕೊಂಡು ಮಾಡಿಸಿಕೊಡಬೇಕು ಎಂದು ಹೇಳುತ್ತೇನೆ. ಈ ಯೋಜನೆಗಳನ್ನು ಈ ವರ್ಷದಲ್ಲಿ ಸಾಧ್ಯವಾಗದಿದ್ದರೆ ಮುಂದಿನ ಸಾಲಿನಲ್ಲಾದರೂ ಬಡ್ಜೆಟ್ಟಿನಲ್ಲಿ ಸೇರಿಸಬೇಕು ಎಂದು ಹೇಳುತ್ತೇನೆ. ಈ ವರ್ಷದ ಬಡ್ಜೆಟ್ಟಿನಲ್ಲಿ ಕೈಬಿಟ್ಟು ಹೋಗಿರುವುದನ್ನು ನಾನು ಬಜೆಟ್ ಪುಸ್ತಕದಲ್ಲಿ ನೋಡಿದೆ. ಮುಂದಿನ ವರ್ಷವಾದರೂ ಕೂಡ ಈ ಕೆಲಸವನ್ನು ಮಾಡಿಸಿಕೊಡಬೇಕೆಂದು ಮತ್ತೊಮ್ಮೆ ನಾನು ಹೇಳುವುದಕ್ಕೆ ಬಯಸುತ್ತೇನೆ.

ಇನ್ನು ಕೊನೆಯದಾಗಿ ಡೆವಲಪ್‌ಮೆಂಟ್ ಆಕ್ಟಿವಿಟೀಸ್ ಬಗ್ಗೆ ಹೇಳಬೇಕಾದರೆ ಈ ಕೆಲಸಗಳನ್ನು ಮಾಡುವಾಗ ಅವರನ್ನು ನಾನು ಕೇಳಿಕೊಳ್ಳುತ್ತೇನೆ ಪಿ.ಡಬ್ಲ್ಯು.ಡಿ. ಇಲಾಖೆಯವರಾಗಲಿ ಅಥವಾ ಮೈನರ್ ಇರ್ರಿಗೇಷನ್ ಇಲಾಖೆಯವರಾಗಲಿ ಇದನ್ನು ಮಾಡುವಾಗ ಅವರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ಪ್ರತಿಯೊಂದು ಕ್ಷೇತ್ರದಲ್ಲೂ ಕಡೇ ಪಕ್ಷ ಒಂದೊಂದನ್ನಾದರೂ ಕೂಡ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಒಂದೇ ಕ್ಷೇತ್ರದಲ್ಲಿ ೪–೫ ಕೆಲಸಗಳನ್ನು ಏನೂ ಮಾಡಿಕೊಡಬೇಕಾದ್ದಿಲ್ಲಾ, ಒಂದೊಂದು ಆದರೆ ಸಾಕು. ತಮಗೆ ಹೇಳಬೇಕಾದರೆ ನನ್ನ ಕ್ಷೇತ್ರದಲ್ಲಿ ಒಟ್ಟು ೧೧ ತಾಲ್ಲೂಕುಗಳು ಇವೆ. ಅದರಲ್ಲಿ ೭ ತಲ್ಲೂಕುಗಳಿಗೆ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೀರಿ, ಇನ್ನು ೪ ತಲ್ಲೂಕುಗಳನ್ನು ಕೈಬಿಟ್ಟಿದ್ದೀರಿ. ಆದುದರಿಂದ ನಾನು ಹೇಳುವುದೇನೆಂದರೆ ಸಾಧ್ಯವಾದರೆ ಎರಡು ಅಭಿವೃದ್ಧಿ ಕೆಲಸಗಳು

ಮಾಡಿ ಇಲ್ಲದೆ ಹೋದರೆ ಒಂದೊಂದು ಕ್ಷೇತ್ರಕ್ಕೆ ಒಂದೊಂದನ್ನಾದರೂ ಕೂಡ ಮಾಡಿಕೊಡಿ ಎಂದು ಹೇಳುತ್ತೇನೆ. ತಾವು ನನ್ನ ಕ್ಷೇತ್ರದ ಈ ೪ ತಾಲ್ಲೂಕುಗಳನ್ನು ಕೈಬಿಟ್ಟಿದ್ದೀರಲ್ಲಾ ನಾವು ಏನು ಪಾಪ ಮಾಡಿದ್ದೇವೆ ಹೇಳಿ ಇದನ್ನು ನಾನು ಏತಕ್ಕೆ ಹೇಳುತ್ತಿದ್ದೆ ನೆಂದರೆ ಇದನ್ನು ಸರಿಪಡಿಸುವುದಾದರೆ ಸರಿಪಡಿಸಲಿ ಎಂದು ಹೇಳುತ್ತಿದ್ದೇನೆ. ಅಲ್ಲದೆ ತಾವು ಒಂದೊಂದು ತಾಲ್ಲೂಕಿಗೆ ಕಡೇ ಪಕ್ಷ ಒಂದೊಂದನ್ನಾದರೂ ಅಭಿವೃದ್ಧಿ ಕೆಲಸಗಳನ್ನು ಮಾಡಿಕೊಟ್ಟರೆ, ನಾವು ಆ ಜನಗಳಿಂದ ಏನು ಓಟು ತೆಗೆದುಕೊಂಡು ಬಂದಿದ್ದೇವೋ ಅವರಿಗೆ ನಾವು ಈ ಒಂದು ಕೆಲಸವನ್ನಾದರೂ ಕೂಡ ಮಾಡಿಕೊಟ್ಟಿದ್ದೇವೆ ಎಂದು ಹೇಳಬಹುದು ಆದುದರಿಂದ ಮುಂದಿನ ಸಲವಾದರೂ ಮಾನ್ಯಮಂತ್ರಿಗಳು ಕೊನೇ ಪಕ್ಷ ಒಂದೊಂದು ತಾಲ್ಲೂಕಿಗೆ ಒಂದೊಂದು ಕೆಲಸವನ್ನಾದರೂ ಕೂಡ ಮಾಡಿಸಿಕೊಡಬಹುದು ಎಂದು ನಾನು ನಂಬಿ, ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†SRI C.M. ARMUGHAM (K.G.F.).—Mr. Chairman Sir, there are about 16 Demands before the House. It is not possible to cover all the demands within a short period. I would like to submit that some of the reports of the department like Police department and other departments came to us only the previous night. Like that there are several reports which reached us only the previous day of the Demand If that kind of arrangement is made, it is not possible to study it and speak. The Departmental officers must take note of this and try to send them one or two days earlier. Because, we, MLAs are all busy people. I know there are some Ministers who study from 6 A.M. to 11 A.M. But for members it is not possible.

In the present Government there are some representation for minorities and backward class communities. Here I would like to submit that there must be representation to un-represented areas like Bidar, Gulbarga, Raichur, Bellary and Kolar. It is for the simple reason that if a Minister represents a particular district, he will take interest in the development of the district. So, I submit to the Hon Chief Minister to give proper representation to each districts of the State. Some of the Ministers must have learnt the work of the department by now. I understand that there is a refresher course for MLAs to study the functioning of the Government. Likewise, is there any course for Ministers? If there is such course, you could invite ex-Ministers to give lectures.

Today, the Police department which is very important has been clubbed with Irrigation, Under the stewardship and guidance of the present IGP, the police department will function well. He will improve the performance and functioning of the Police department. Similarly, the Commissioner and Secretary of the Home Department is an able administrator I am not saying that it is lagging behind any other States. The Police department requires reorganisation once in five years. This is for the simple reason that when the area is being developed, you can't put the same number of constables

fixed some years back. This requires some sort of re-organisation. For the benefit of the House, I have got the figuree of police force in the entire country.

Andra Pradesh	..	...	43817
Gujarat	...	...	456?9
Himachal Pradesh	...	...	7612
Jammu & Kashmir	...	...	12319
Karnataka	...	...	39,000
Madhya pradesh	...	...	58668
Maharashtra	...	...	83205
Nagaland	...	...	8915
Punjab	...	...	26819
Tamilnadu	...	...	43369
Uttar Pradesh	...	...	106502
West Bengal	...	...	67419
Kerala	...	...	28148

Then for every 10,000 the number of policemen in different States is as follows:

State			No. of Policemen
Andhra	...	...	15.8
Gujarat	...	...	15.2
Himachal Pradesh	...	...	19.7
Jammu and Kashmir	...	...	22.2
Karnataka	...	...	10.8
Madhya Pradesh	...	...	12.2
Maharastra	...	...	14·9
Nagaland	...	...	14.4
Pu jab	...	...	18.8
Tamil Nadu	...	...	9.1
Uttar Pradesh	...	...	10.9
West Bengal	...	...	1?.3
Kerala	...	...	8.6

It will be seen that compared to other States the police force in Karnataka requires to be increased. I have a praise for our police force. In spite of its inadequate number they are doing very well compared to some other states.

Coming to investigation, the performance of our force is excellent compared to other States in India So far as crime is concerned, it is not increasing. For one lakh volume of crime in the country, the position is like this;

Andhra	...	...	128.2
Gujrath	...	...	186.4
Himachal Pradesh	...	...	97.9
Jammu and Kashmir	...	...	231.6
Karnataka	...	...	155.4
Madhya Pradesh	...	...	254.9
Maharashtra	...	...	238.2
Nagaland	...	...	132.9
Punjab	...	...	79.5
Tamilnadu	...	...	156.9
Uttar Pradesh	...	...	201.2
West Bengal	...	...	167.8
Kerala	...	...	133.5

The national average is 75.2. Ours is less than these of other States.

Now, coming to the action taken by the Police, under the Suppression of Immoral Traffic Act, the Police are very vigilant compared to other States. They are arrested number of prostitutes and prevented immoral traffic in women. I have not got the latest figure but only figures for the year 1976. They are as follows:

State			No. of arrests
Andhra Pradesh	...	...	1697
Gujrath	...	...	27
Himachal Pradesh	...	...	nil
Jammu and Kashmir	...	...	7
Karnataka	...	...	3302
Madhya Pradesh	...	...	33
Maharashtra	...	...	153
Nagaland	...	...	9
Punjab	...	...	10
Tamil Nadu	..	...	8899
Uttar Pradesh	...	...	nil
West Bengal	...	...	76
Kerala	...	...	134

So far as the major cities are concerned, the figures are as follows:

Bangalore City	...	...	852
Ahmedabad	...	...	9
Calcutta	...	...	76
Delhi	...	...	153
Madras	...	...	2186
Bombay	...	...	10229

In this connection I wish to suggest that instead of allowing these ladies to repeat, it is better they are sent to rehabilitation centres. In some places like Bijapur Scheduled Caste ladies are taken naked in procession. The police must put a stop to this forthwith. There must be increase in the police force. I join with other members in pleasing that the post of Circle Inspector must be upgraded into a gazetted one as is done in Gujrath and Maharashtra.

So far as petty offences like overspeeding are concerned, they should be dealt with on the spot just as in the case of offenece under the Civil Rights Protection Act. Under this Act there are lots of cases which are registered but the action taken is not effective. The number of cases disposed of on the spot in 1978 is as follows;

Number reported	...	...	304
Number chargesheeted	...	...	217
Number convicted	...	...	4
Number discharged	...	...	3
Number compounded	...	...	2
Number Pending	...	...	208

There are 1,50,000 vehicles in Bangalore City alone and why take petty offences under the Motor Vehicles Act to the court. It will take lot of time. For instance, as in foreign countries, power to punish on the spot in minor offences like overspeeding should be given to the Circle Inspector. I hope the Home Department would consider how far it is possible to implement it.

So far as Constables of our State are concerned, their pay scales range from Rs. 300 to 700. Members will agree with me that in the whole of India our pay scales are the highest. I would like to submit that the agitation bythe police in Punjab and other places is on account of Karnataka because when all the officers from other States assembled here for a meeting, they came to know that our pay scales are higher than theirs. As a result of agitation, the Punjab Constable got a minimum of Rs.527 Because of that, the pay scale of our Constable requires to be increased.

Here I want to make a point clear, in the police force you cannot call a constable as class-4, but it must be upgraded. Before that disease comes to Karnataka I hope they will upgrade pay scales and increase their status, It is necessary as suggested by some other Members there must be more classifications in the police force. If you upgrade certain ministerial staff to class-2 it will have an impact on police officers and they will serve more in maintaining law and order. The representation of SCs/STs are very meagre and inadequate. In class-I there are 180 posts apart from IPS, IPS comes from heaven and not here! It is imposed from Delhi. Out of 180 there are only 12 Scheduled Caste people and it works out to 6.66%, Scheduled tribe only one and it works out to 0.55 In class-2 there are only 14 Scheduled Caste people in the Police Department. In class-3 out of 8,332 only 853 Scheduled Castes and it works out to 10.23% and for Scheduled tribes there are only 207 and it works out to 2.48% In class-4 including sweepers also, you are all talking about classes, casteless society the other day Sri Bheemanna Khandre said that you should bring in all castes sweepers post must be opened to all. Sweepers and scavengers must be given more salary to attract other communities to work as sweepers and scavengers. There are about 27.256 class-4 and out of them 466 SCs and 746 STs, it works out to 2.40 per cent.

About jails, I do not know whether the Hon'ble Minister has ever gone to the Jail. There is no uniform supplied to the jail staff. They give some uniform to warders and the Chief Warder, but for others they do not give even allowance. Therefore, please note down this point and kindly do justice. They have supplied a limited number of overcoats and they are common to everyone in the jail. Is it possible for all persons to wear it?

The Public Works Department has neglected the maintenance of jails. They do not white-wash and they do not undertake minor repairs. Therefore, Superintendents of jails must be empowered to undertake maintenance work. Otherwise if they are entrusted to the P.W.D. even for small things papers will have to go from the Junior Engineers to Chief Engineer; there will be a lot of delay. There are no staff quarters to jailors; they come from far off places. They do 12 hours' work from 6 A.M. to 6 P.M. I think you can introduce some fixed hours and some reforms in the jail administration.

The expenditure on food for a prisoner is Rs. 2.50 per day, and for undertrials Rs. 2.40. Kindly go through it and see whether this Rs. 2 50 is enough for a prisoner per day. Even if you go to a small hotel they charge about 2 to 3 rupees. For non-vegetarian food it will be still more costly. When once a prisoner is convicted there must

be somebody to advise him if he wants to go on appeal. Can you not provide assistance of an advocate to conflicts so that if a conflict wants to go on appeal he can have legal help and can get justice. Otherwise it will not be possible. You must also provide assistance of a doctor. During the emergency. I was told some prisoners were taken to hospitals even for minor ailments. It is not correct, Medical facilities should be available in all jails throughout the Karnataka State. The jail administration requires overall improvement. I am glad the food supplied appears to be satisfactory, though not completely satisfactory. Therefore, it must be improved. You must provide good quality of rice and wheat.

So far as the Minor irrigation is concerned, the Hon'ble Minister Sri Chandre Gowda who comes from Chickmagalur has become very popular on account of recent elections and he has become Minister The Election made him a Minister. He is incharge of Minor Irrigation. This is a very important department common people, poor people, small holders and marginal holders require minor irrigation facilities. In villages minor irrigation plays a very important role.

SRI D.B. CHANDREGOWDA.—Elections make some people to become Governors.

SRI C.M. ARMUGHAM.—We are glad that one more person from Karnataka is going to become Governor of Bihar. How nice this. Why not we conduct some more by elections to the Parliament like this?

Under minor irrigation you must take up desilting of tanks. I know it is costly. but in every village there is a tank. Therefore, I suggest that action should be taken immediately to desilt all the tanks in Karnataka in a phased programme and then you must also construct more tanks. On the tank beds lands have been granted and they are cultivating. Therefore, silts have accumulated and it is necessary that you must have a machinery to remove silts around and on the tank beds and you can have fisheries and afforestation around tanks which is necessary for the villagers.

On irrigation we have spent about more than two thousand crores for all these years and it has benefitted only rich farmers, those who have 100 acres have become millioniers. So it is better we confine ourselves to small land holders and marginal farmers by constructing community wells. You have Hydro Geological Survey to identify certain places. Even places such as Kolar, Tumkur, Chitradurga, Chickmagalur, some portion of Hassan, Coorg, Bidar and Gulbarga you can have minor irrigation. These are places where we have no major irrigation. They have identified certain areas where you can

have ground water. In the entire Karnataka, I was told that 25% of rain water reaches ground water, 10% goes as evaporation and 30% go to rivers. We have got plenty of ground water. Recently I was told in a village of Challakere taluk, Chitradurga District, they have dug a borewell which yields 31,136 gallons of water per hour. It is excellent Therefore, it is necessary that this ground water property is made use of The Chief Minister of Karnataka has asked the Department to prepare a plan. I am glad that the Chief Engineer for Minor Irrigation Sri Subbaiah, has done a marvellous work. He has achieved more than the targeted work; he has completed 427 works as against 318 tanks. Why not you allow him to prepare schemes for ground water? Papers sent to the secretariat are held up. As asual beaurecratic set up of Karnataka secretariat are not able to dispose of papers. You must make it a point that orders should be issued on the schemes submitted. One thing that I am glad about is that the Central Government is giving 50% of grant to drill a borewell. Nothern States have made use of this facilities and have taken Rs. 20 crores. But the Government of Karnataka has not taken advantage of the assistance of the Central Government to dig wells which will help marginal and small farmers. Where there is no minor irrigation and where there is no water this scheme could be implemented. Therefore, I urge upon the Government to do this in order to help marginal farmers.

3.30 P.M.

I have one submission to make regarding the Animal Husbandry Department. I do not know who is dealing with this Department. I do not know who is the Commissioner and Director. People expect this Department to provide them milk and meat The Department has failed to provide these things Today the price of meat has gone up very high. I do not know the reason for it. I would like to know what the Animal Food Corporation is doing? Have they made any assessment of requirement of vegetables and mutton for the entire Karnataka. In the Bangalore Dairy a number of things require a probe. It is also dominated by one section and that must be destroyed. There were road tanker prime movers which were given for repairs at a cost of Rs 98,500 for each. The agency to which the work was given does not have a workshop. The agency gives the work to someone else and takes commission. I understand a new tanker costs about Rs. 2 lakhs but for repairs alone for each tank they have given Rs. 98,500. If a new one is bought it will serve at least for ten or twelve years. So action should be taken against the entire administration of the Bangalore Dairy. Further, the agency

STEADFAST AGENCY has drawn an advance of Rs. 32,000 even before effecting any repair. First of all this agency has no workshop and secondly even before repairs are undertaken and advance of Rs. 32,000 is given. Now they have purchased a minitractor for Rs. 35,000 without the approval of the Board. This is the state of affairs of the Bangalore Dairy, under the very nose of the Government of Karnataka.

There are three bottling plants. For overhauling the work was entrusted to M/s. Khoday. This company is only a manufacturing unit and some of the plants are imported ones. That means we cannot get spare parts. It is curious that instead of repairing they have dismantled the plants. Therefore, it is necessary that an enquiry is conducted. The Government are posting persons who have no know edge of this industry as Directors and General Manager, with the result the Dairy has incurred a loss of Rs. 16 lakhs.

Regarding general administration I want to mention one point. Now confidential reports are written by higher officers against their subordinates. Yesterday a strong plea was made by an hon'ble member that this practice of writing confidential reports must be discontinued. The higher officers in the course of one year they can take action against subordinates, if their work is not satisfactory. I know instances where officers could not be promoted because of adverse remarks in the confidential reports. This writing of confidential reports is an old tradition practised by the Britishers and which is being continued even now. So, the practice of writing confidential reports must be done away with.

In the matter of transfers, I do not know the system they are following. The hon'ble member Sri Gatti Chandrasekhar referred to this and mentioned that transfers are favoured for executive posts. If that is the case can we transfer persons only to coveted places in order to enable them to make money. Transfer is not a punishment. It must be done on a practical way without giving any room for favouring some individuals.

During the emergency many officers have been retired under rule 285. The Government should place before the House the number of persons who were made to retire compulsorily and what is the cross section of them; how many are poor and how many are backward. If the emergency has helped us we will welcome it but if it has gone against us, we will oppose it.

Coming to the Fisheries Department, I am told that the prawns that are catched at the Mangalore port are being taken away by a private person to Kerala. The department is running under loss.

Can we not reorganise the department and make it self-sufficient? I request the Hon'ble Minister to look into it.

Sir, in the Public Service Commission, most of the retired officers are being appointed who are not able to walk who are not able to take quick decisions and who are unable to hear. Many of them almost all of them do not know the technical subjects. It is better we allow persons after the age of 58 to live happily instead of appointing them as Members of the Public Service Commission. These members are mostly appointed on political grounds. This should be stopped.

I welcome the 'Employment Affirmation Scheme'. This will help the rural illiterate people; it is a good scheme. Our Government is second in the country in implementing such a scheem. Maharashtra is the first. I appeal to the Government that it should spread all over Karnataka instead confining it only to a few districts.

I have been speaking often about I A.S. and I.P.S. officers. I am not against them; I love them. I suggest that these officers should serve at least for 12 years in the department before they occupy responsible positions. An I P.S. officer before becoming a Superintendent of Police should know the job of a Sub-Inspector, Inspector and Deputy Superintendent of Police, and should have investigated at least six important cases. An I.A.S. Officer unless he has put in 12 years of service shall not be made the Head of the District. Otherwise, some one coming from Orissa or Assam, without knowing the language of the State, becomes the Head of the District.

So far as the Electricity Department is concerned, sometimes there will be no current for hours together. Can we not find out why it happens and can we not improve upon it? In the Electricity Board and the Power Corporation, we find that always retired persons are accommodated and made Chairmen of these Corporations and several other Boards. We should discontinue this practice. We must see that proper power supply is ensured to the consumers without interruption.

Under the 'Bhagyajothi' scheme, each hut should have an electric light. I want to know how many villages have been provided with lights after taking a decision about this scheme. When a decision has been taken, it should be implemented and it should not be kept under cold storage.

Finally, I impress upon the Government to tone up the administration in the Secretariat and in all other departments by bringing in measures to improve the administration. The money that is made

available to each department must be spent properly. The House is supreme in granting money and we are entitled to know the performance of every department including the High Court. We should not only receive the Annual report of each department, but also the performance report.

With these few words I thank the Chair for having given me an opportunity to say a few words.

† ಶ್ರೀ ಡಿ. ಟಿ. ರಾಮು (ಚೆನ್ನಪಟ್ಟಣ).—ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ತಂದಿರತಕ್ಕ ಈ ೧೬ ಇಲಾಖೆಗಳ ಬೇಡಿಕೆಗಳನ್ನು ಸ್ವಾಗತಿಸುತ್ತಾ ನನ್ನ ಕೆಲವು ಸಲಹೆಗಳನ್ನು ನೀಡುವುದಕ್ಕೆ ಇಷ್ಟಪಡುತ್ತೇನೆ. ಯಾವುದೇ ಒಂದು ರಾಷ್ಟ್ರ ಯಾವುದೇ ಒಂದು ರಾಜ್ಯ ಸುವ್ಯವಸ್ಥೆಯಿಂದ ಇರಬೇಕಾದರೆ, ಸ್ಥಿರತೆಯಿಂದ ಇರಬೇಕಾದರೆ, ಆ ರಾಜ್ಯದಲ್ಲಿ ಒಂದು ರೀತಿಯ ಒಳ್ಳೆಯ ಆಡಳಿತ ಇರಬೇಕಾದರೆ ಆ ರಾಜ್ಯದ ಸುಸಂಸ್ಕೃತ ಸುವ್ಯವಸ್ಥಿತ ಪೋಲೀಸ್ ದಳ ಮುಖ್ಯವಾಗಿರಬೇಕು. ಜೊತೆಗೆ ಆ ದಳದ ಮೇಲ್ವಿಚಾರಣೆ ನೋಡಿಕೊಳ್ಳತಕ್ಕ ವ್ಯಕ್ತಿ ಬಲಿಷ್ಟರಾಗಿರಬೇಕು. ಅವರಲ್ಲಿ ಆಡಳಿತ ಚಾಕಚಕ್ಯತೆಯಿರಬೇಕು. ಹಾಗೂ ಚಾಣಾಕ್ಷತನವಿರಬೇಕು. ಅದೃಷ್ಟವಶಾತ್ ನಮ್ಮ ರಾಜ್ಯಕ್ಕೆ ಈ ಎರಡು ರೀತಿಯಲ್ಲಿ ಎರಡು ನಿಟ್ಟಿನಲ್ಲಿ ನಮ್ಮ ರಾಜ್ಯ ಒಂದು ಒಳ್ಳೆಯ ಮಾರ್ಗವನ್ನು ಹಿಡಿದಿದೆ. ಏಕೆಂದರೆ, ನಮ್ಮ ರಾಜ್ಯದಲ್ಲಿರತಕ್ಕ ಪೋಲೀಸ್ ದಳ ಒಳ್ಳೆಯ ಕಾರ್ಯ ಮಾಡುತ್ತಿದೆ, ಅದನ್ನು ಹೊಂದಿರತಕ್ಕ ಸನ್ಮಾನ್ಯ ಮುಖ್ಯಮಂತ್ರಿಯವರು ಒಳ್ಳೆಯ ರೀತಿಯ ಆಡಳಿತವನ್ನು ಈ ರಾಜ್ಯಕ್ಕೆ ಒದಗಿಸಿದ್ದಾರೆ. ಆದಕಾರಣ ನಾನು ಪ್ರಪ್ರಥಮವಾಗಿ ನಮ್ಮ ಪೋಲಿಸ್ ಇಲಾಖೆಯನ್ನು ಪ್ರಶಂಸಿಸುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ವಿರೋಧಪಕ್ಷದ ಮಾನ್ಯ ಮಿತ್ರರುಗಳಲ್ಲಿ ಅನೇಕರು ಹೇಳಿದ್ದಾರೆ, ಈ ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಕುಸಿದು ಬಿದ್ದಿದೆ, ಈ ರಾಜ್ಯದ ಶಾಂತಿ ಕುಸಿದು ಬಿದ್ದಿದೆ, ಈ ರಾಜ್ಯದಲ್ಲಿ ಸುವ್ಯವಸ್ಥೆ ಇಲ್ಲಾ ಎನ್ನತಕ್ಕ ಒಂದು ಭಾವನೆಯನ್ನು ಇವರು ನೀಡಿದ್ದಾರೆ. ನನಗನ್ನಿಸುತ್ತದೆ ಇವರ ಮಾತಿನಲ್ಲಿ ಹೇಳುವುದಾದರೆ ಇವತ್ತು ಇವರ ಮನೆಯಲ್ಲಿರತಕ್ಕ ಸಹೋದರಿಯರು ನಮ್ಮ ಮನೆಯಲ್ಲಿ ಇರತಕ್ಕ ಸಹೋದರಿಯರು ಬೆಂಗಳೂರಿನಲ್ಲಿ ಬೆಳಿಗ್ಗೆ ೮ ಗಂಟೆಗೆ ಮನೆಯನ್ನು ಬಿಟ್ಟು ವಾಪಸ್ ರಾತ್ರಿ ೮ ಗಂಟೆಗೆ ಸುರಕ್ಷಿತವಾಗಿ ಬರತಕ್ಕ ವ್ಯವಸ್ಥೆ ಇದೆ. ಹಾಗೂ ನಮ್ಮ ರಾಜ್ಯದಲ್ಲೂ ಇಂತಹ ವ್ಯವಸ್ಥೆ ಇದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಜೊತೆಗೆ ನಮ್ಮ ರಾಜ್ಯದ ಪೋಲೀಸ್ ಇಲಾಖೆಯಲ್ಲಿ ಅತೃಪ್ತಿ ಇಲ್ಲಾ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ಇವತ್ತು ಇಡೀ ರಾಷ್ಟ್ರದಲ್ಲಿ ಪಂಜಾಬ್ ತೆಗೆದುಕೊಳ್ಳಿ. ಮಹಾರಾಷ್ಟ್ರ ತೆಗೆದುಕೊಳ್ಳಿ. ಉತ್ತರ ಪ್ರದೇಶ ತೆಗೆದುಕೊಳ್ಳಿ ಅಲ್ಲಿಯ ಪೋಲೀಸ್ ಇಲಾಖೆಯಲ್ಲಿ ಒಂದು ದೊಡ್ಡ ರೀತಿಯ ಅಶಾಂತಿಯ ಧೋರಣೆ ತಾಂಡವವಾಡುತ್ತಿದೆ. ಆದಕಾರಣ ಆ ರಾಜ್ಯಗಳಲ್ಲಿ ಈ ದಿವಸ ಮುಷ್ಕರಗಳು ನಡೆಯುತ್ತಿವೆ. ಅರಾಜಕತೆ ಉಂಟಾಗುತ್ತಿದೆ. ಅದೃಷ್ಟವಶಾತ್ ನಮ್ಮ ರಾಜ್ಯದಲ್ಲಿ ಅದು ನಡೆಯುತ್ತಿಲ್ಲ. ಕಾರಣವೇನೆಂದರೆ ನಮ್ಮ ಪೋಲೀಸ್ ಇಲಾಖೆಯಲ್ಲಿ ಸಭ್ಯತೆ ಉಂಟೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಎರಡನೆಯದಾಗಿ ಈ ಪೋಲೀಸ್ ಇಲಾಖೆಯಲ್ಲಿ ದಕ್ಷ ಅಧಿಕಾರಿಗಳಿದ್ದಾರೆ. ಐಪಿಎಸ್ ಅಧಿಕಾರಿಗಳು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ರಾಜ್ಯದ ಹೊರಗಡೆ ಸೇವೆಸಲ್ಲಿಸಿರತಕ್ಕಂತಹವ್ಯಕ್ತಿಯೊಬ್ಬರು ರಾಜ್ಯದ ರಥವನ್ನು ನಡೆಸತಕ್ಕ ಐ. ಜಿ ಪಿ ಆಗಿ ಕೆಲಸ ಮಾಡುತ್ತಿದ್ದಾರೆ. ಹಿಂದೆ ಅನೇಕ ಮುಖ್ಯ ಅಧಿಕಾರಿಗಳೂ ಸಹ ಒಳ್ಳೆಯ ಸೇವೆಯನ್ನು ಸಲ್ಲಿಸಿದ್ದಾರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ದುರಾದೃಷ್ಟವಶಾತ್ ಕೆಲವು ಕೆಳಮಟ್ಟದ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ತಮ್ಮ ಕೆಲಸವನ್ನು ನಿರ್ವಹಿಸುತ್ತಿಲ್ಲದಿರಬಹುದು. ಆದ್ದರಿಂದ ಕೆಲವು ವೇಳೆ ಇಲಾಖೆಯ ಮೇಲೆ ಕೆಟ್ಟ ಹೆಸರು ಬರುವುದಕ್ಕೆ ಕಾರಣವಾಗುತ್ತದೆ. ಸರ್ಕಾರಕ್ಕೆ ಕೆಟ್ಟ ಹೆಸರು ಬರತಕ್ಕ ಕೆಲವು ಕೃತ್ಯಗಳು ನಡೆದಿರಬಹುದು, ನೂರಕ್ಕೆ ನೂರು ಪಟ್ಟು ಕೃತ್ಯಗಳು ನಡೆದಿವೆ ಎಂದು ಅರ್ಥವಲ್ಲ. ಎಂದರೆ ಪೋಲೀಸ್ ಇಲಾಖೆಯಲ್ಲಿ ಒಳ್ಳೆಯ ಅಧಿಕಾರಿಗಳಿದ್ದಾರೆ, ಒಳ್ಳೆಯ ಕಾನೂನು ಇದೆ, ಒಳ್ಳೆಯ ಆಡಳಿತ ಇದೆ, ಜೊತೆಗೆ ಅಷ್ಟೋ ಇಷ್ಟೋ ಕೆಟ್ಟದ್ದೂ ಇದೆ ಎಂದು ಹೇಳುತ್ತೇನೆ. ನನ್ನ ಮಿತ್ರರು ಹೇಳಿದರು ಶ್ರೀಮತಿ ಇಂದಿರಾಗಾಂಧಿಯವರನ್ನು ದಸ್ತಗಿರಿ ಮಾಡಿದಾಗ ಈ ರಾಜ್ಯದಲ್ಲಿ ಅರಾಜಕತೆ ಹಾಗೂ ರಾಜ್ಯಕ್ಕೆ ಕ್ಷೋಭೆ ಉಂಟಾಯಿತು ಎಂದು ಹೇಳಿದ್ದಾರೆ. ಆದಕ್ಕೆ ನಾನು ಹೇಳುತ್ತೇನೆ ಶ್ರೀಮತಿ ಇಂದಿರಾಗಾಂಧಿಯವರನ್ನು ದಸ್ತಗಿರಿ ಮಾಡಿದಾಗ ಉಂಟಾದ

ಗಲಾಟೆ, ಗೊಂದಲ ಒಂದು ಏರ್ಪಡಿಸಿದ ಕ್ರಮದಲ್ಲಿ ಅಲ್ಲ, ಅದು ಭಾವೋದ್ವೇಗದಿಂದ ಉಂಟಾದ ಕಾರ್ಯ ಎಂದು. ಶ್ರೀಮತಿ ಇಂದಿರಾಗಾಂಧಿಯವರನ್ನು ದಸ್ತಗಿರಿ ಮಾಡಲಿಕ್ಕೆ ಹೊರಟ ದಿನ ನಾನು ಬೆಂಗಳೂರಿನಲ್ಲಿ ಕಲ್ಲೇಟಿಗೆ ಗುರಿಯಾದೆಯೆಂದು ನಿಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆ ಒಂದು ಜಡ್ಜ್‌ಮೆಂಟ್ ಬಂದಾಗ ಲೋಕಸಭೆಯಲ್ಲಿ ತೀರ್ಮಾನವಾದಾಗ ಅವತ್ತಿನದಿವಸ ೬ ಗಂಟೆಯಲ್ಲಿ ಮೈಸೂರು ರಸ್ತೆಯ ವಿನಾಯಕ ಟಾಕೀಸಿನ ಬಳಿ ನಾನೇ ಕಲ್ಲೇಟಿಗೆ ಗುರಿಯಾದೆ. ಇದು ಕೇವಲ ವ್ಯವಸ್ಥಿತವಾದ ಕಾರ್ಯಕ್ರಮ ಎಂದು ಜನತಾ ಮಿತ್ರರು ಏನು ಹೇಳುತ್ತಿದ್ದಾರೆ, ಅದು ವ್ಯವಸ್ಥಿತವಾದ ಕಾರ್ಯಕ್ರಮವಲ್ಲ ಅನಿರೀಕ್ಷಿತವಾಗಿ, ಭಾವೋದ್ವೇಗದಿಂದ ಜನಪ್ರಿಯ ನಾಯಿಕೆಯೊಬ್ಬರಿಗೆ ಬಂದ ತೊಂದರೆಯ ಘಟನೆಯೇ ಹೊರತಾಗಿ ಇದು ವ್ಯವಸ್ಥಿತ ಕಾರ್ಯಕ್ರಮವಲ್ಲ ಎಂದು ತಮಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಜನತಾ ಮಿತ್ರರು ಕೆಲವು ವೇಳೆ ಹೇಳುತ್ತಾ ಇರುತ್ತಾರೆ. ಏನೆಂದರೆ, ಈ ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಕುಸಿದು ಬಿದ್ದಿದೆ ಎಂದು ಹೇಳುತ್ತಾ ಕೇಂದ್ರಸರ್ಕಾರಕ್ಕೆ ಒಂದು ಭಾವನೆಯನ್ನುಂಟು ಮಾಡಿ, ಈ ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಕುಸಿದು ಬಿದ್ದಿದೆ ಈ ರಾಜ್ಯದಲ್ಲಿ ರಾಷ್ಟ್ರಪತಿಗಳ ಆಡಳಿತವನ್ನು ತರತಕ್ಕಂಥ ಸನ್ನಾಹವನ್ನು ಮಾಡುತ್ತಿದ್ದಾರೆ. ಆದರೆ ವಸ್ತು ಸ್ಥಿತಿ ಆ ರೀತಿ ಇಲ್ಲ. ಇಡೀ ಭರತಖಂಡದಲ್ಲಿ ನಮ್ಮ ರಾಜ್ಯಕ್ಕೆ ಯಾವುದೇ ರಾಜ್ಯವನ್ನು ಹೋಲಿಸಿದಾಗ ನಮ್ಮ ರಾಜ್ಯದಲ್ಲಿರತಕ್ಕ ಸುವ್ಯವಸ್ಥಿತವಾದ ಸರ್ಕಾರ, ನಮ್ಮ ರಾಜ್ಯದಲ್ಲಿರತಕ್ಕ ಸ್ಥಿರ ಸರ್ಕಾರ ಬೇರೆ ಯಾವುದೇ ರಾಜ್ಯದಲ್ಲಿಲ್ಲ. ಅಕಸ್ಮಾತ್, ದುರದೃಷ್ಟವಶಾತ್ ರಾಷ್ಟ್ರಪತಿಗಳ ಆಡಳಿತವನ್ನು ಘೋಷಿಸುವುದಾದರೆ, ಮೊದಲು ಉತ್ತರ ಪ್ರದೇಶದಲ್ಲಿ ಘೋಷಣೆ ಮಾಡಬೇಕು, ಮೊದಲು ಮಧ್ಯಪ್ರದೇಶವನ್ನು ಡಿಸ್‌ಮಿಸ್ ಮಾಡಬೇಕು, ನಂತರ ಪಂಜಾಬಿಗೆ ಹೋಗಬೇಕು, ಕಟ್ಟಕಡೆಯಲ್ಲಿ ಅವರು ಕರ್ನಾಟಕವನ್ನು ಮುಟ್ಟಲಿ ಎನ್ನತಕ್ಕಂಥ ಭಾವನೆಯನ್ನು ವ್ಯಕ್ತಪಡಿಸುತ್ತಾ, ಪೋಲೀಸ್ ಇಲಾಖೆಯ ಬಗ್ಗೆ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಪ್ರಪ್ರಥಮವಾಗಿ ಪೋಲೀಸ್ ಪೇದೆಗಳನ್ನು ಆರಿಸುವಾಗ ಎಸ್‌ಎಸ್‌ಎಲ್‌ಸಿ. ಕನಿಷ್ಟ ವಿದ್ಯಾರ್ಹತೆಯನ್ನಾಗಿ ನೀವು ಮಾಡಿದ್ದೀರಿ ಇದು ಬಹಳ ಒಳ್ಳೆಯ ವಿಚಾರ. ಎಸ್‌ಎಸ್‌ಎಲ್‌ಸಿ. ಅರ್ಹತೆಯನ್ನು ನೀವು ಇಟ್ಟಿರುವುದರಿಂದ ಇನ್ನು ಮುಂದೆ ಬರತಕ್ಕಂಥ ಪೋಲೀಸ್ ಪೇದೆಗಳಲ್ಲಿ ಒಂದು ಸುಸಂಸ್ಕೃತಿಯನ್ನುಂಟು ಮಾಡಬಹುದು ಅವರಿಗೆ ಒಳ್ಳೆಯ ತರಬೇತಿಯನ್ನು ನೀಡಿದರೆ. ಸುಸಂಸ್ಕೃತರಾದ ಅಧಿಕಾರಿಗಳಾಗಿ ಆ ಒಂದು ಅರ್ಹತೆಯನ್ನು ಅವರು ಸಂಪಾದಿಸಿಕೊಳ್ಳಬಹುದು ಸೆಕೆಂಡ್ ಡಿವಿಜನ್‌ನವರಿಗೆ. ಏನು ವೇತನ ಕೊಡುತ್ತೀರೋ ಅದಕ್ಕಿಂತ ಹೆಚ್ಚು ವೇತನವನ್ನು ಅವರಿಗೆ ಕೊಡಿ. ಹಿಂದೆ ಎಸ್‌ಎಸ್‌ಎಲ್‌ಸಿ ಮಾಡಿದವರು ಎಸ್.ಪಿ. ಆಗಿದ್ದರು, ಡಿ ಎಸ್.ಪಿ ಆಗಿದ್ದರು ಐ ಜಿ.ಪಿ. ಆಗಿದ್ದರೋ ಏನೋ ನನಗೆ ಗೊತ್ತಿಲ್ಲ. ಎಸ್‌ಎಸ್‌ಎಲ್‌ಸಿ. ಪಾಸಾಗಿರತಕ್ಕಂಥ ಅಭ್ಯರ್ಥಿಗಳಿಗೆ ಪೋಲೀಸ್ ಪೇದೆ ಕೆಲಸವನ್ನು ಕೊಟ್ಟರೆ ಒಂದು ವ್ಯವಸ್ಥಿತವಾದ ಪೋಲೀಸ್ ದಳವನ್ನು ನಿರ್ಮಿಸಿದಂತಾಗುತ್ತದೆಂಬ ಭಾವನೆಯನ್ನು ವ್ಯಕ್ತಪಡಿಸುತ್ತೇನೆ. ಈಗ ಒಂದು ತಾಲ್ಲೂಕಿಗೆ ಒಂದು ಪೋಲೀಸ್ ಸರ್ಕಲ್ ಇರುತ್ತದೆ. ನಾಲ್ಕು ತಾಲ್ಲೂಕುಗಳನ್ನು ಸೇರಿಸಿ ಒಂದು ಸರ್ಕಲ್ ಇನ್ಸ್‌ಪೆಕ್ಟರ್ ಎಂದು ಏನು ಮಾಡಿದ್ದೀರಿ, ಅವರನ್ನು ಗೆಜೆಟೆಡ್ ಹುದ್ದೆಗೆ ಏರಿಸಿ ಎಂದು ಈ ಸಂದರ್ಭದಲ್ಲಿ ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಹರಿಜನ ಗಿರಿಜನರ ಬಗ್ಗೆ ಹೇಳುವುದಾದರೆ ಉತ್ತರ ಭಾರತದಲ್ಲಿ ಬಹಳಷ್ಟು ಕ್ಷೋಭೆ ಉಂಟಾಗಿದೆ. ಹರಿಜನರ ಮೇಲೆ ಅತ್ಯಾಚಾರ ನಡೆಯುತ್ತಾ ಇದೆ, ಸಾಕಷ್ಟು ದಬ್ಬಾಳಿಕೆ ನಡೆಯುತ್ತಾ ಇದೆ. ಅಲ್ಲಿ ರುಂಡವನ್ನು ತರುತ್ತಿದ್ದಾರೆ, ಬೆಂಕಿ ಹಚ್ಚಿ ಸುಡುತ್ತಿದ್ದಾರೆ, ಆದರೆ ಅದೃಷ್ಟವಶಾತ್ ನಮ್ಮ ರಾಜ್ಯದಲ್ಲಿ ಆ ರೀತಿಯಾಗಿಲ್ಲ. ನಮ್ಮ ರಾಜ್ಯದಲ್ಲೂ ಕೆಲವು ಘಟನೆಗಳು ಬರಬಹುದು, ಹೊಡೆದಾಟಗಳು ಬರಬಹುದು ಕೊಲೆಗಳು ಬರಬಹುದು, ಆದರೆ ರುಂಡವನ್ನು ತರತಕ್ಕಂಥ, ಜೀವಂತವಾಗಿ ಸುಡತಕ್ಕಂಥ ಒಂದು ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಇಲ್ಲ. ಹರಿಜನರ ಕಷ್ಟನಿಷ್ಠೂರಗಳನ್ನು ನೋಡಿಕೊಳ್ಳುವುದಕ್ಕೆ ಒಂದು ಜಾಗೃತ ದಳವನ್ನು ತಾವು ನೇಮಿಸಬೇಕು ಎಂದು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಜೊತೆಗೆ, ಇವತ್ತಿನ ದಿವಸ ವೇಶ್ಯಾವೃತ್ತಿ ಒಂದು ಸಾಮಾಜಿಕ ಪಿಡುಗು. ಇವತ್ತಿನದಿವಸ ರಾಜ್ಯದಲ್ಲಿರತಕ್ಕ, ರಾಷ್ಟ್ರದಲ್ಲಿರತಕ್ಕ ಒಂದು ಆರ್ಥಿಕ ಅಸಮಾನತೆ ಜೊತೆಗೆ ಬಡತನ ಈ ವೇಶ್ಯಾವೃತ್ತಿಗೆ ಪ್ರಚೋದನೆಯಾಗಿರಬಹುದು ಇದರ ಬಗ್ಗೆ ನಮ್ಮ ನಗರದಲ್ಲಿ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ಅದೃಷ್ಟವಶಾತ್ ನಮ್ಮ ನಗರಕ್ಕೆ ಒಳ್ಳೆಯ ಕಮಿಷನರು ಸಿಕ್ಕಿದ್ದಾರೆ, ಒಳ್ಳೆಯ ಎಸ್.ಪಿ. ಡಿ.ಎಸ್.ಪಿ.ಗಳು ಸಿಕ್ಕಿದ್ದಾರೆ ಯಾವುದಾದರೂ ಘಟನೆ ಸುದ್ದಿ ತಿಳಿದಕೂಡಲೆ ತಕ್ಷಣ ಪೋಲೀಸರು ತಮ್ಮ ಕಾರ್ಯವನ್ನು ನಿರ್ವಹಿಸುತ್ತಾರೆ. ಉದಾಹರಣೆಗೆ ಹೇಳುವುದಾದರೆ, ಇತ್ತೀಚೆಗೆ ಒಬ್ಬ ರಾಜೇಂದ್ರಪಾಲ್ ಎನ್ನುವವನು

ಬ್ಯಾಂಕಿನಲ್ಲಿ ೪ ಲಕ್ಷ ರೂಪಾಯಿಗಳನ್ನು ಎಳೆಯುತ್ತಿದ್ದ, ಆಗ ಅನುಮಾನ ಬಂದು ಕಂಟ್ರೋಲ್ ರೂಮಿಗೆ ಫೋನ್ ಮಾಡಿದರು. ಕೂಡಲೇ ರಾಜೇಂದ್ರಪಾಲ್, ರೂಪಪಾಲ್, ಸುಡುಗಾಡಪಾಲ್—ಈ ೩ ಜನರನ್ನು ಪೋಲೀಸರು ಹಿಡಿದು ಒಳಗೆ ಹಾಕಿದರು. ಇನ್ನೊಂದು ಘಟನೆ ಎಂದರೆ, ಇವತ್ತಿನ ಪತ್ರಿಕೆಯಲ್ಲಿ ಬಂದಿದೆ. ಗಂಡಹೆಂಡತಿ ಜಗಳ ಆಡಿ ವಿರಸವುಂಟಾಗಿ ಹೆಂಡತಿ ಬೇರೆ ಲವ್ವರ್ ಜೊತೆಯಲ್ಲಿದ್ದು ಅವನು ತಪ್ಪಿಸಿಕೊಂಡು ನಂತರ ರೈಲ್ವೆ ಸ್ಟೇಷನ್‌ನಲ್ಲಿ ಸಿಕ್ಕಿದಾಗ ಹೀಗೆ ಮಾಡಿಬಿಟ್ಟಿದ್ದೀಯಾ ಹೋಟೆಲಿಗೆ ಹೋಗೋಣ ನಡಿ ಎಂದು ಹೇಳಿ ವೆಸ್ಟ್ ಎಂಡ್ ಹೋಟೆಲ್‌ಗೆ ಕರೆದುಕೊಂಡು ಹೋಗಿ ಕುಡಿಯುತ್ತಿರುವಾಗ ಎರಡು ನಿಮಿಷದಲ್ಲಿ ಹೋಗಿಬರುತ್ತೇನೆಂದು ಹೇಳಿ ಪಕ್ಕದಲ್ಲಿ ಪೋಲೀಸ್ ಕಂಟ್ರೋಲ್ ರೂಮಿಗೆ ಫೋನ್ ಮಾಡಿದತಕ್ಷಣ ಪೋಲೀಸರು ಬಂದು ಕ್ರಮ ತೆಗೆದುಕೊಂಡಿದ್ದಾರೆ. ಇಬ್ಬರು ಮೂವರು ಪೋಲೀಸ್ ಅಧಿಕಾರಿಗಳು ಅಂದರೆ ಕಾರ್ತೀಕೇಯನ್, ಶಿಂಧೆ ಮುಂತಾದವರು ತಕ್ಷಣ ಅವನನ್ನು ಹಿಡಿದಿದ್ದಾರೆ. ಇವತ್ತು ಈ ರಾಜ್ಯದಲ್ಲಿ ಪೋಲೀಸ್ ದಳ ಎಷ್ಟು ಎಚ್ಚರಿಕೆಯಿಂದ ಕೆಲಸಮಾಡುತ್ತಿದೆ ಎನ್ನುವುದಕ್ಕೆ ಸೂಚಕವಾಗಿ ಇದನ್ನು ಹೇಳಿದೆ. ಈ ಸಂದರ್ಭದಲ್ಲಿ ಪೋಲೀಸರಿಗೆ ಒಳ್ಳೆಯ ಮನೆಗಳನ್ನು ಕೊಡಬೇಕು ಮತ್ತು ಪೋಲೀಸರ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸವನ್ನು ಕೊಡಬೇಕು ಎಂದು ಸರ್ಕಾರಕ್ಕೆ ಸಲಹೆ ಮಾಡುವುದಕ್ಕೆ ನಾನು ಇಷ್ಟಪಡುತ್ತೇನೆ. ಇದರ ಜೊತೆಗೆ ಪೋಲೀಸರ ಮಕ್ಕಳಿಗೆ ಇನ್‌ಕಂ ಸರ್ಟಿಫಿಕೇಟ್ ಕೇಳುವುದು ಬೇಡ. ಪೋಲೀಸರ ಮಕ್ಕಳಿಗೆ ಕಾಲೇಜುಮಟ್ಟದಲ್ಲಿ ಉಚಿತ ವಿದ್ಯಾಭ್ಯಾಸ ಕೊಡಬೇಕು ಎಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇದರ ಜೊತೆಗೆ ಪೋಲೀಸ್ ಅಧಿಕಾರಿಗಳಿಗೆ ತಾಲ್ಲೂಕುಮಟ್ಟದಲ್ಲಿ ಗೃಹಗಳನ್ನು ಕಟ್ಟಿಸಿಕೊಡಿ. ಇವತ್ತಿನದಿವಸ ಸಬ್ ಇನ್ಸ್‌ಪೆಕ್ಟರ್ ಬಂದು ತಿಮ್ಮಣ್ಣ ಬೊಮ್ಮಣ್ಣನ ಮನೆಯಲ್ಲಿರುತ್ತಾನೆ, ಹೀಗೆ ಇರುವುದರಿಂದ ದಾಕ್ಷಿಣ್ಯಕ್ಕೆ ಒಳಗಾಗತಕ್ಕ ಮನೋಭಾವ ಬರುತ್ತದೆ. ಇದನ್ನು ತಪ್ಪಿಸಬೇಕಾದರೆ ತಾಲ್ಲೂಕುಮಟ್ಟದಲ್ಲಿ ಪೋಲೀಸ್ ಅಧಿಕಾರಿಗಳಿಗೆ ಗೃಹಗಳನ್ನು ನಿರ್ಮಾಣ ಮಾಡಬೇಕು ಮತ್ತು ಪೋಲೀಸ್ ಪೇದೆಗಳಿಗೆ ಕ್ವಾರ್ಟರ್ಸ್‌ಗಳನ್ನು ಕಟ್ಟಿಸಿಕೊಡಬೇಕು ಎಂದು ಸರ್ಕಾರಕ್ಕೆ ಸಲಹೆಮಾಡುತ್ತೇನೆ ಮಾನ್ಯ ಗಂಗಾಧರನ್‌ರವರು ನಿನ್ನೆ ದಿವಸ ಮಾತನಾಡುತ್ತಾ ಎಫ್.ಐ.ಆರ್. ಬಹಳ ತಡವಾಗಿ ತಲುಪುತ್ತದೆ ಎಂದು ಹೇಳಿದರು, ಅದು ತಡವಾಗಿ ತಲುಪುವುದಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸೆರೆಮನೆಗಳ ವಿಚಾರಕ್ಕೆ ಬರುತ್ತೇನೆ. ಇವತ್ತಿನದಿವಸ ಜಿಲ್ಲಾಮಟ್ಟದಲ್ಲಿ ಹೆಚ್ಚು ಬಯಲು ಸೆರೆಮನೆಗಳು ಆಗಬೇಕು. ಬಯಲು ಸೆರೆಮನೆಗಳಲ್ಲಿ ಖೈದಿಗಳನ್ನು ಹಾಕಿ ಅವರಿಗೆ ಕಸಬುಗಳನ್ನು ಕೊಟ್ಟು ಒಳ್ಳೆಯ ರೀತಿಯಲ್ಲಿ ಕೆಲಸಮಾಡುವುದಕ್ಕೆ ಅವಕಾಶಕೊಟ್ಟು ಅವರಿಗೆ ಕೂಲಿ ಕೊಟ್ಟು, ಸೆರೆಮನೆಯಿಂದ ಬಿಡುಗಡೆಯಾದಮೇಲೆ ಸುಸಂಸ್ಕೃತ ವ್ಯಕ್ತಿ ಎಂದು ಸಮಾಜ ಅವರನ್ನು ಸ್ವೀಕರಿಸತಕ್ಕ ರೀತಿಯಲ್ಲಿ ಅವನ ಜೀವನ ಬದಲಾವಣೆಯಾಗಬೇಕು, ಪರಿವರ್ತನೆಯಾಗಬೇಕು ಪರಿವರ್ತನೆಯಾಗಬೇಕಾದರೆ ಬಯಲು ಸೆರೆಮನೆಗಳು ದೊಡ್ಡ ಉದಾಹರಣೆಗಳಾಗಬೇಕು ಎಂದು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಮೂರನೆಯದಾಗಿ ಪಶುಸಂಗೋಪನೆ. ಯಾವುದೇ ಒಂದು ರಾಜ್ಯದಲ್ಲಿ ಆರ್ಥಿಕ ಪ್ರಬುದ್ಧತೆ ಬರಬೇಕಾದರೆ, ಆರ್ಥಿಕವಾಗಿ ಆ ರಾಜ್ಯ ಮುಂದುವರಿದಿದೆ ಎಂದು ಹೇಳಬೇಕಾದರೆ ಆ ರಾಜ್ಯದಲ್ಲಿ ಕ್ಷೀರಕ್ರಾಂತಿಯಾಗಬೇಕು, ಹಸಿರುಕ್ರಾಂತಿಯಾಗಬೇಕು. ಕ್ಷೀರಕ್ರಾಂತಿ ಎಂದರೆ ಡೈರಿ ಡೆವಲಪ್‌ಮೆಂಟ್ ಮಾಡುತ್ತಿದ್ದೀರಿ ಅದರ ಮೂಲಕ ಬಡವರಿಗೆ ಹಣದ ಸಹಾಯಮಾಡಿ. ಇದಕ್ಕೆ ಪೂರಕವಾಗಿ ಐದಾರು ಪ್ಲಾಟ್ ತೆಗೆದುಕೊಂಡು ಅಲ್ಲಿ ನೇಪರ್ ಗ್ರಾಸ್ ಹುಲ್ಲನ್ನು ಬೆಳೆಸಬೇಕು, ಬೆಳೆಸಿ, ಸುತ್ತಮುತ್ತ ಜನತಾ ಗೃಹಗಳನ್ನು ನಿರ್ಮಿಸಿ ಅಲ್ಲಿ ಬಡವರನ್ನಿಟ್ಟು ಅವರು ಹುಲ್ಲನ್ನು ಉಪಯೋಗಿಸಿಕೊಂಡು ಹಸುವನ್ನು ಸಾಕಿದರೆ ಆಗ ಅವರ ಆರ್ಥಿಕ ಮುನ್ನಡೆಯಾಗುತ್ತದೆ. ಆದುದರಿಂದ ಪಶುಸಂಗೋಪನೆ ಕಡೆ ಹೆಚ್ಚಿನ ಗಮನವನ್ನು ಸರ್ಕಾರ ಕೊಡಬೇಕು ಎಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಭೂಗರ್ಭಶಾಸ್ತ್ರ. ಇಲ್ಲಿ ಭೂಗರ್ಭದ ವಿಷಯ ಬಂದಿದೆ. ಪಾವಗಡದಲ್ಲಿ ಕೆಂಪುರತ್ನ ಸಿಕ್ಕುತ್ತಿದೆ ಎಂದು ತಿಳಿದು ಬಂದಿದೆ. ನನ್ನ ಕ್ಷೇತ್ರದಲ್ಲಿರತಕ್ಕ ಕೋಲಾರಿನಲ್ಲಿ ದೊರೆಯುತಕ್ಕ ಕಲ್ಲುಗಳಲ್ಲಿ ಒಂದು ಕಲ್ಲಿಗೆ ೩೦ ಸಾವಿರ ರೂಪಾಯಿ ಆಗುತ್ತದೆ ಎಂದು ಕೇಳಿ ಬಲ್ಲೆ. ಇವತ್ತಿನ ದಿವಸ ನನ್ನ ಕ್ಷೇತ್ರದಲ್ಲಿ ದೊರಕತಕ್ಕ ಕಲ್ಲು ಜೈಪುರ್ ಡಲ್ಲಿ ಮುಂತಾದ ಕಡೆಗಳಿಗೆ ಹೋಗುತ್ತದೆ, ದೊಡ್ಡ ದೊಡ್ಡ ಶ್ರೀಮಂತರ ಉಂಗುರಗಳಲ್ಲಿ ನಿಂತುಕೊಳ್ಳುತ್ತದೆ ಎಂದು ನಿಮಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

4-00 ಪಿ.ಎಂ.

ಆದುದರಿಂದ ಈ ಪಾವಗಡ ಪ್ರದೇಶವನ್ನು ಮತ್ತು ನನ್ನ ಕ್ಷೇತ್ರದ ಪ್ರದೇಶವನ್ನು ಮೈಸೂರು ಮಿನರಲ್ಸ್ ಕಾರ್ಪೊರೇಷನ್ನಿನವರಿಗೆವಹಿಸಿ ಕೊಡಬೇಕೆಂದು ಹೇಳುತ್ತಾ, ಆ ಭೂಮಿಯಲ್ಲಿ ಸಿಗತಕ್ಕ ಅತ್ಯ ಮೂಲ್ಯವಾದಬೆಲೆ ಬಾಳುವಂಥಾ ವಜ್ರವೈಢೂರ್ಯಗಳೇನು ಸಿಗುತ್ತವೆ ಅವು ಸರ್ಕಾರದ ಸ್ವತ್ತು ಆಗಬೇಕು ಎನ್ನತಕ್ಕ ಒಂದು ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳವರು ಈಗಾ ಗಲೇ ಒಂದು ತೀರ್ಮಾನವನ್ನುಮಾಡಿ ಆಶ್ವಾಸನೆಯನ್ನು ಕೊಟ್ಟಿದ್ದಾರೆ ಅದು ಏನೆಂದರೆ ಈ ಸಭಾಭವನದಲ್ಲಿ ದಲಿತರ ಉದ್ಧಾರಕ್ಕಾಗಿ ರಾಜ್ಯಾಂಗದ ಜನಕ ಡಾ. ಅಂಬೇಡ್ಕರರವರ ಫೋಟೋ ಹಾಕುತ್ತೇವೆಂದು ಹೇಳಿ ರುವುದನ್ನು ನಾನು ಸ್ವಾಗತಿಸುತ್ತಾ ನಿಮಗೆ ಮತ್ತೊಂದು ಸಲಹೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಸ್ವಾತಂತ್ರ್ಯ ಹೋರಾಟದಲ್ಲಿ ಸ್ವಾತಂತ್ರ್ಯವನ್ನು ಪಡೆಯುವುದಕ್ಕಾಗಿ, ಆ ದಿಕ್ಕಿನಲ್ಲಿ ಒಂದು ದೊಡ್ಡ ಕ್ರಾಂತಿ ಯನ್ನು ಉಂಟುಮಾಡಿದಂಥ ದಿ|| ಸುಭಾಶ್ ಚಂದ್ರಭೋಸ್‌ರವರ ಭಾವಚಿತ್ರವನ್ನು ಈ ಸದನದಲ್ಲಿ ಹಾಕ ಬೇಕು ಎನ್ನತಕ್ಕದನ್ನು ಸರ್ಕಾರಕ್ಕೆ ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಇಷ್ಟನ್ನು ಹೇಳುತ್ತಾ ನನ್ನ ಕ್ಷೇತ್ರದ ವಿಷಯಕ್ಕೆ ಬಂದರೆ ಮೀಡಿಯಂ ಇರಿಗೇಷನ್‌ನಲ್ಲಿ ಇಗ್ಲೂರ್ ಅಣೆಕಟ್ಟನ್ನು ಕಟ್ಟುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳವರು ಈ ಸಾರಿ ಒಪ್ಪಿಗೆ ಕೊಡಿಸಿದ್ದಾರೆ. ಅದು ೧೫ ವರ್ಷಗಳಿಂದ ಬರೀ ಕಾಗದಪತ್ರಗಳ ಮೇಲೆಯೇ ಇತ್ತು ಆದರೆ ಕಾರ್ಯರೂಪಕ್ಕೆ ಬಂದಿರಲಿಲ್ಲ. ಆದರೆ ಅದು ಈಗ ಕಾರ್ಯರೂಪಕ್ಕೆ ಬರುತ್ತಿದೆ ಆದುದರಿಂದ ನಾನು ನನ್ನ ಕ್ಷೇತ್ರದ ಬಡ ಜನತೆಯ ಪರವಾಗಿ ಮುಖ್ಯ ಮಂತ್ರಿಗಳವರನ್ನು ನಾನು ಮನ ಸಾರೆ ವಂದಿಸುತ್ತಿದ್ದೇನೆ. ಆದರೆ ಈಗ ಒದಗಿಸಿರತಕ್ಕ ಹಣ ಕೇವಲ ೧೦ ಲಕ್ಷ ಏನೂ ಸಾಲದು ಇನ್ನು ೫೦ ಲಕ್ಷಗಳನ್ನಾದರೂ ಒದಗಿಸಬೇಕು ಎಂದು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಬ್ಯಾಂಕ್ ಗಳ ಬಗ್ಗೆ ಹೇಳುವುದಾದರೆ...

ಛೇರ್ಮನ್‌ರವರು .—ಇನ್ನು ನಿಮಗೆ ಕೊಟ್ಟ ಸಮಯ ಆಗುತ್ತಾ ಬಂತು, ದಯವಿಟ್ಟು ಬೇಗನೆ ಮುಗಿಸಿ, ನಿಮ್ಮ ಚೀಫ್ ವಿಪ್‌ರವರು ಕೇವಲ ೧೦, ನಿಮಿಷ ಕೊಡಿ ಅಂತ ಹೇಳಿದ್ದರು ಆದರೂ ನಾನು ೨೦ ನಿಮಿಷಗಳ ಕಾಲ ಅವಕಾಶ ಮಾಡಿಕೊಡುತ್ತಿದ್ದೇನೆ.

ಶ್ರೀ ಡಿ. ಟಿ. ರಾಮು ,—ಇನ್ನು ರಾಷ್ಟ್ರೀಕೃತವಾಗಿರುವ ಬ್ಯಾಂಕುಗಳ ಮುಖಾಂತರ ಬಡ ಜನತೆಗೆ ಸಹಾಯ, ಸಾಲವನ್ನು ಕೊಟ್ಟು ಅವರ ಉದ್ಧಾರ ಮಾಡಿ ಅವರ ಆರ್ಥಿಕ ಮಟ್ಟವನ್ನು ಉತ್ತಮ ಪಡಿಸು ವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಸರ್ಕಾರಕ್ಕೆ ಸಲಹೆ ಕೊಡುತ್ತೇನೆ.

ಇನ್ನು ಕೊನೆಯದಾಗಿ ಸಾಮಾನ್ಯ ಆಡಳಿತ. ಸಾಮಾನ್ಯ ಆಡಳಿತದ ವಿಚಾರದಲ್ಲಿ ಹೇಳಬೇಕೆಂದರೆ ತಹಶೀಲ್ದಾರ್‌ರವರಿಗೆ ಜೀಪುಗಳನ್ನು ಕೊಡಬೇಕು ಜೊತೆಗೆ ಎಲ್ಲಾ ಕಮಿಟಿಗಳಿಗೂ ಡಿ.ಸಿ ಯವರೇ ಛೇರ್ಮ ನ್ ಛೇರ್ಮನ್ ಅಂತ ಹೇಳುತ್ತೀರಿ. ಇದರಿಂದ ಅವರ ಅಮೂಲ್ಯವಾದವೇಳೆ ನಷ್ಟವಾಗುತ್ತಿದೆ. ಆದುದ ರಿಂದ ನಮಗೆ ಉದಾಹರಣೆಗೆ ಹೇಳುವುದಾದರೆ ಹಾಸ್ಟೆಲ್‌ಗಳ ಸೀಟುಗಳನ್ನು ಹಂಚತಕ್ಕ ಕೆಲಸವೇನಿದೆ ಅದನ್ನು ಬೇರೆಯಾರಿಗಾದರು ವಹಿಸಿಕೊಡಿ ಡೆಪ್ಯುಟಿ ಡೈರೆಕ್ಟರ್ ಫಾರ್ ಪಬ್ಲಿಕ್ ಇನ್ಸ್‌ಸ್ಟ್ರಕ್ಷನ್ ರವರಿಗೆ ಆ ಅಧಿಕಾರ ಕೊಡಿ, ಇಲ್ಲದಿದ್ದರೆ ಎಗ್ಸಿಕ್ಯೂಟಿವ್ ಇಂಜನಿಯರ್‌ರವರಿಗೆ ಕೊಡಿ ಆ ರೀತಿ ಮಾಡಿದರೆ ಅವರ ಕಾಲ ಅಪವ್ಯಯವಾಗುವುದಿಲ್ಲ. ಮತ್ತೆ ಪಿ.ಎಸ್.ಸಿ.ಯಲ್ಲಿ ಥರ್ಡ್‌ಕ್ಲಾಸ್ ಜಾಬ್ ಏನಿದೆ, ಅಂದರೆ ಥರ್ಡ್‌ಕೆಟಗರಿ ಜಾಬನ್ನು ಕೂಡ ಸರ್ಕಾರ ಕೊಡುವಂತೆ ಮಾಡಬೇಕೆಂದು ಹೇಳುತ್ತಾ ಇನ್ನೊಂದು ವಿಷಯ ಹೇಳಬಯಸುತ್ತೇನೆ. ಐ.ಎ.ಎಸ್. ಐಪಿಎಸ್ 'ಆಫೀಸರ್ಸ್‌ಗಳ ಬಗ್ಗೆ ಮಾನ್ಯ ಶ್ರೀ ಆರ್ಮುಗಂ ರವರು ದೊಡ್ಡದಾಗಿ ಹೇಳಿದ್ದಾರೆ. ಇವತ್ತು ಎಲ್ಲಾ ಐ.ಎ.ಎಸ್. ಅಧಿಕಾರಿಗಳೂ ಕೆಟ್ಟವರು ಅಲ್ಲ. ಎಲ್ಲಾ ಐ.ಪಿ.ಎಸ್ ಅಧಿಕಾರಿಗಳೂ ಕೆಟ್ಟವರು ಅಲ್ಲ. ಒಬ್ಬೊಬ್ಬರು ಕೆಟ್ಟವರು ಇರಬಹುದು ಆದರ ಬಗ್ಗೆ ತಮ್ಮ ಗೊಂದು ಉದಾಹರಣೆಯನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ಸಾರಿ ಮುಖ್ಯ ಕಾರ್ಯದರ್ಶಿ ಯವರನ್ನು ನೋಡುವುದಕ್ಕೆ ನಾನು ಹೋಗಿದ್ದೆ. ಹೋಗಿದ್ದಾಗ ಒಂದು ಚೀಟಿ ಕಳುಹಿಸಿ ಕೊಟ್ಟೆ, ಒಂದು ನಿಮಿಷದಲ್ಲಿ ನನಗೆ ಕರೆ ಬಂತು ಒಂದು ನಿಮಿಷದಲ್ಲಿ ನಾನು ನನ್ನ ವಿಷಯ ಹೇಳಿದೆ, ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಷಯ ಹೇಳಿದೆ ಅವರು ಗಮನದಲ್ಲಿಟ್ಟುಕೊಂಡು ಕೇಳಿದಾಕ್ಷಣವೇ ಒಂದು ಮಿನಿಟ್ ಹಾಕಿ ಕಳುಹಿಸಿಕೊಟ್ಟರು, ಆ ಕೂಡಲೇ ಆ ಕೆಲಸ ಆಗಿ ಸರಿ ಹೋಯಿತು. ಇದು ಒಬ್ಬ ಐ.ಎ.ಎಸ್ ಅಧಿ ಕಾರಿಯದು ಆದರೆ ಇನ್ನೊಬ್ಬ ಐ.ಎ.ಎಸ್. ಅಧಿಕಾರಿಗೆ ನನ್ನ ಕ್ಷೇತ್ರದಿಂದ ನನ್ನ ತಾಲ್ಲೂಕ್ ಹೆಡ್‌ಕ್ವಾ ಟರ್ಸ್‌ನಿಂದ ಟ್ರಂಕ್‌ಕಾಲ್ ಮಾಡಿದರೆ ಆ ಅಧಿಕಾರಿ ಟ್ರಂಕ್‌ಕಾಲ್ ರೀಸೀವ್ ಮಾಡಿಕೊಳ್ಳಲಿಲ್ಲ. ಆಗ

ನಾನು ಅಲ್ಲಿಂದ ಓಡಿ, ಓಡಿ ಬೆಂಗಳೂರಿಗೆ ಬಂದು ಒಂದು ಚೀಟಿಯನ್ನು ಸಾಹೇಬರವರನ್ನು ನೋಡೋಣವೆಂದು ಕಳುಹಿಸಿಕೊಟ್ಟೆ. ೪ ಗಂಟೆಗಳಾದರೂ ನನಗೆ ಒಳಗಡೆಯಿಂದ ಸೂಚನೆ ಬರಲಿಲ್ಲ. ನನಗೆ ಅವತ್ತು ಊಟವೇ ಇಲ್ಲ ೪ ಗಂಟೆಗಳ ಕಾಲ ಕಳೆದ ಮೇಲೆ ನಾನು ಒಳಗಡೆ ಹೋದರೆ ದಿವಾಕನ್ನು ಮಾಡಿಕೊಂಡು ಏನ್ರೀ ಅಂತ ಕೇಳಿದರು, ಆಗ ನಾನು ಈ ರೀತಿ ಸಮಸ್ಯೆಯಾಗಿದೆ. ಅಂತ ಹೇಳಿದಾಗ, ಹ..ಂ ಹೋಗಿ ಆಯಿತು ಅಂತ ಹೇಳಿದರು—ಇಂಥಾ ಧೋರಣೆ ಬೇಡ. ಒಂದು ನಿಮಿಷ ಇಷ್ಟು ಉತ್ತರಕ್ಕೋಸ್ಕರವಾಗಿ ಒಬ್ಬ ಶಾಸಕ ಒಂದು ಲಕ್ಷ ಜನರನ್ನು ಪ್ರತಿನಿಧಿಸುವವರನ್ನು ಕಾಯಿಸುವುದು ಏನೆಂದರೆ ಏನು ಇಂಥಾ ಐಎಎಸ. ಅಧಿಕಾರಿಗಳೂ ಇದ್ದಾರೆ. ಆದುದರಿಂದ ನಾನು ಆಗಲೇ ಮೊದಲೇ ಹೇಳಿದ ಐಎಎಸ್. ಅಧಿಕಾರಿಗೂ ಇವರಿಗೂ ತೂಗಿಸಿ ನೋಡುವುದಕ್ಕೆ ಆಗುವುದಿಲ್ಲ. ಅದೇ ಇನ್ನೊಬ್ಬ ಐ.ಪಿ.ಎಸ್ ಅಧಿಕಾರಿಗೆ ಪೋನ್ ಮಾಡಿದೆ. ಡಿ.ಐ.ಜಿ. ಆಫ್ ಪೋಲೀಸ್ ಸದರನ್ ರೇಂಜರವರಿಗೆ ಪೋನ್ ಮಾಡಿದಾಗ ಅವರು ಏನ್ರೀ ರಾಮು ಏನು ಸಮಸ್ಯೆ ಅಂತ ಕೇಳಿದರು. ಆಗ ನಾನು ಈ ರೀತಿಯಾಗಿ ಟೂರಿನಲ್ಲಿದ್ದೇನೆ ನನ್ನ ಕ್ಷೇತ್ರದಲ್ಲಿ ಗಲಾಟೆ ಇದೆಯಂತೆ ಅದು ಏನು ಸಮಾಚಾರ ತಿಳಿದು ನನಗೆ ತಿಳಿಸಿ ಇಲ್ಲದಿದ್ದರೆ ನಾನು ನನ್ನ ಟೂರನ್ನು ಕ್ಯಾನ್ಸಲ್ ಮಾಡಿ ವಾಪಸ್ಸು ಬಂದು ಬಿಡುತ್ತೇನೆ ಅಂದಾಗ ಅವರು ತಕ್ಷಣವೆ ನೀವು ದಯವಿಟ್ಟು ಲೈನಿನಲ್ಲಿಯೇ ಇರ್ರಿ ವಿಷಯ ಕೇಳಿತಿಳಿಸಿಬಿಡುತ್ತೇನೆಂದು ಹೇಳಿ ಕೂಡಲೇ ನನ್ನ ಕ್ಷೇತ್ರಕ್ಕೆ ವೈರಲೆಸ್ ಮಾಡಿ ಅಲ್ಲಿಯ ಸಮಾಚಾರವನ್ನು ತಿಳಿಸಿದರು. ಕೇವಲ ಒಂದು ನಿಮಿಷದಲ್ಲಿಯೇ ವಿಷಯವನ್ನು ತಿಳಿದುಕೊಂಡು ಉತ್ತರ ಕೊಟ್ಟು ರಾಮು ಎಲ್ಲವೂ ಸರಿಯಾಗಿದೆ ನಿಮ್ಮ ಕ್ಷೇತ್ರದ ಕಡೆಗೆ ನಾನು ಗಮನವನ್ನು ಕೊಡುತ್ತೇನೆ ನೀವು ಪ್ರವಾಸವನ್ನು ಮುಂದುವರೆಸಿ ಸುಖವಾಗಿ ಪ್ರವಾಸ ಮುಗಿಸಿಕೊಂಡು ಬನ್ನಿ

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಅಂತ ಚೆನ್ನಾಗಿ ಉತ್ತರ ಕೊಟ್ಟರು. ಅಂದರೆ ಒಬ್ಬ ಐಎಎಸ್. ಮತ್ತು ಐಪಿಎಸ್. ಅಧಿಕಾರಿಗಳು ಒಂದು ನಿಮಿಷದಲ್ಲಿ ಉತ್ತರ ಕೊಡುವುದೆಂದರೇನು? ಆದೇ ಇನ್ನೊಬ್ಬ ಐ.ಎ ಎಸ್. ಅಧಿಕಾರಿ ಇಂಟರ್ ವ್ಯೂ ಕೂಡ ಕೊಡುವುದಿಲ್ಲವೆಂದರೇನು? ಅವರು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ಡೆಪ್ಯೂಟಿ ಕಾರ್ಯದರ್ಶಿಗಳಾಗಿದ್ದಾರೆ ಅವರ ಹೆಸರನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಏತಕ್ಕೆಂದರೆ ಅವರು ಈ ಸದನದಲ್ಲಿ ಇಲ್ಲ ಆದುದರಿಂದ ಅದು ಆಗಬಾರದು ಅಂಥಾ ಅಧಿಕಾರಿಗಳಿಗೆ ಸೂಕ್ತವಾದ ಶಿಕ್ಷೆ ಕೊಡಬೇಕು ಅವರ ಬಗ್ಗೆ ಕಾನ್‌ಫಿಡೆನ್ಸಿಯಲ್ ರಿಪೋರ್ಟ್ ಬರೆಯಬೇಕೆಂದು ಹೇಳುತ್ತೇನೆ. ಇನ್ನು ಸಾಮಾಜಿಕ ನ್ಯಾಯ ದೊರೆಯಬೇಕು ಎಂದು ಹೇಳುವಾಗ ಕೆಲವು ವೇಳೆ ನ್ಯಾಯ ಮೂರ್ತಿಗಳು ಸಹ ಅವರ ಒಂದು ಹೊಸ ದೃಷ್ಟಿಕೋನವನ್ನು ಇಡಬೇಕಾಗುತ್ತದೆ ಏತಕ್ಕೆಂದರೆ ತಮಗೊಂದು ಉದಾಹರಣೆಯನ್ನು ಕೊಟ್ಟು ಹೇಳುವುದಾದರೆ ನಮ್ಮ ತಾಲ್ಲೂಕಿನಲ್ಲಿ ಸುಮಾರು ೩೦ ಗುಂಟೆ ಅಕ್ವೈರ್ ಆಯಿತು, ಆ ೩೦ ಗುಂಟೆಯಲ್ಲಿ ಏನಾಗಿತ್ತು ಎಂದರೆ ಒಬ್ಬನ ಹತ್ತಿರ ೬ ಎಕರೆ ಇದ್ದವನ ಹತ್ತಿರ ೪ ಗುಂಟೆ ತೆಗೆದುಕೊಂಡಿದ್ದಾರೆ. ಇನ್ನೊಬ್ಬನ ೫ ಎಕರೆ ಇದ್ದರೆ ಅವನ ಹತ್ತಿರ ೬ ಗುಂಟೆ ಇನ್ನೊಬ್ಬನ ಹತ್ತಿರ ೪ ಗುಂಟೆ ಇನ್ನೊಬ್ಬನ ಹತ್ತಿರ ೫ ಗುಂಟೆ ಹೀಗೆ ಒಟ್ಟು ೩೦ ಗುಂಟೆ ತೆಗೆದುಕೊಂಡಿದ್ದಾರೆ ಅದು ಹೈಕೋರ್ಟಿಗೆ ಹೋಯಿತು, ಆಗ ಅವನು ಮಾಡಿರತಕ್ಕದ್ದು ತಪ್ಪು ಅಂತ ಹೇಳಿ ಅದು ವಾಪಸ್ಸು ಬಂತು. ಆದಕ್ಕೆ ನಾನಾದರೂ ಹೇಳುತ್ತೇನೆ ಬಡವರಿಗೆ ಮನೆ ಹಂಚಬೇಕು, ದುರ್ಬಲವರ್ಗದವರಿಗೆ ಸೈಟ್‌ಗಳನ್ನು ಕೊಡಬೇಕು ಅಂತ ಮಾಡಿದಾಗ, ಕೊಂಚವೊಮ್ಮೆ ಕಾನೂನು ಮೀರಿ ಸಹಾಯ ಮಾಡಬೇಕಾಗುತ್ತದೆ. ಅದಕ್ಕೆ ನ್ಯಾಯಾಧಿಪತಿಗಳು ಉದಾರ ನೀತಿಯನ್ನು ಉದಾರ ಧೋರಣೆಯನ್ನು ಅವರು ಅಪ್ಲೈ ಮಾಡಬೇಕಾಗುತ್ತದೆ. ಆಗಲೇ ಮಾತ್ರ ರಾಷ್ಟ್ರದಲ್ಲಿ ರಾಜ್ಯದಲ್ಲಿ ಬಡಜನರ ಒಂದು ಸಾಮಾಜಿಕ ನ್ಯಾಯ ದೊರೆಯುವುದಕ್ಕೆ ಸಹಾಯಕವಾಗುತ್ತದೆ, ಮತ್ತು ಕಲ್ಯಾಣ ರಾಜ್ಯವಾಗುತ್ತದೆ. ಇಷ್ಟನ್ನು ಹೇಳುತ್ತಾ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಪಿ. ರಾಮದೇವ್ (ಮಲ್ಲೇಶ್ವರಂ).—ಸನ್ಮಾನ್ಯ ಅಧ್ಯಕ್ಷರೇ ಮಾನ್ಯಗಟ್ಟಿ ಚಂದ್ರಶೇಖರ್‌ರವರು ಮಾತನಾಡುತ್ತಾ ಅವರು ಇಲ್ಲಿ ಬಹುಶಃ ಇದ್ದಿದ ರೆ ಚನ್ನಾಗಿರುತ್ತಿತ್ತೇನೋ. ಅವರು ಕೆಲವು ವಾಕ್ಯಗಳನ್ನು ಇಲ್ಲ ಉದಹರಿಸಿದರು, ೬, ೭. ವರ್ಷಗಳ ಅನುಭವವಿರತಕ್ಕವರು ಆ ಮಾತನ್ನು ಆಡಿದ್ದು ಸರಿಯಲ್ಲವೆಂದು ನನಗಾದರೂ ಅನ್ನಿಸುತ್ತಿದೆ. ಅವರು ಯಾವ ಮಾತನ್ನು ಹೇಳಬಾರದಾಗಿತ್ತೋ ಅಂಥಾ ಕೆಲವು ವಾಕ್ಯಗಳನ್ನು ಹೇಳಿರತಕ್ಕಂಥಾದ್ದು ಅದು ಸರಿಯಲ್ಲವೆಂದು ಅನ್ನಿಸುತ್ತಿದೆ. ಅವರು ಮಾತನಾಡುತ್ತಾ ಮಾತನಾಡುತ್ತಾ ಮಾನ್ಯ ಮುಖ್ಯ ಮಂತ್ರಿಗಳವರನ್ನು ಬಹಳ ಚನ್ನಾಗಿ ಹಾಡಿ ಹೊಗಳಿದರು.

ಒಂದು ಮಾತನ್ನು ಹೇಳಬೇಕೆಂದರೆ, ಹಾಡಿ ಹಾಡಿ ಹೊನ್ನೆ ಶೂಲಕ್ಕೆ ಮಾನ್ಯ ಮುಖ್ಯ ಮಂತ್ರಿಗಳವರನ್ನು ಅವರು ಏರಿಸಿದರು. ಬಹುಶಃ ಕಾರಣವಾದರೂ ನನಗನ್ನಿಸುತ್ತಿದೆ ಇವತ್ತಿನ ದಿವಸ ನ್ಯೂಸ್ ಐಟಂನಲ್ಲಿ ಬಂದಿದ್ದ ಮಂತ್ರಿಮಂಡಲವನ್ನು ವಿಸ್ತರಣ ಮಾಡುವುದಕ್ಕಾಗಿ ಮಾನ್ಯ ಮುಖ್ಯ ಮಂತ್ರಿಗಳವರು ಒಂದು ಮಾತನ್ನು ಹೇಳಿದ್ದಾರೆ, ಆದ್ದರಿಂದ ನಮ್ಮ ಶ್ರೀ ಗಟ್ಟಿಯವರು ಆ ಒಂದು ದೃಷ್ಟಿಯಿಂದ ಮುಖ್ಯ ಮಂತ್ರಿಗಳವರನ್ನು ಹಾಡಿ ಹೊಗಳಿದ್ದಾರೆಂದು ಅಂದುಕೊಂಡಿದ್ದೇನೆ. ಆದುದರಿಂದ ಮುಖ್ಯ ಮಂತ್ರಿಗಳಾರಾದರೂ ಇಂಥಾ ಅಡ್ವೈಜರ್ಸ್ ಏನಿದ್ದಾರೆ ಅಂಥವರನ್ನು ಸ್ವಲ್ಪ ದೂರ ಇಡತಕ್ಕಂಥದ್ದು ಒಳ್ಳೆಯದೇನೋ ಅಂತ ಕಾಣುತ್ತದೆ.

ಇನ್ನು ಮಾನ್ಯ ಮುಖ್ಯ ಮಂತ್ರಿಗಳವರಿಗೆ ೧೬ ಡಿಮ್ಯಾಂಡ್‌ಗಳು ಇವೆ, ಅವರು ಸರಿಯಾಗಿ ೧೬ ಖಾತೆಗಳ ಬಗ್ಗೆ ಗಮನ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲವೆಂದು ತಮಗೆಲ್ಲಾ ಗೊತ್ತಿದೆ. ಅದು ಸಾರ್ವಜನಿಕರಿಗೂ ಗೊತ್ತಿದೆ. ಚುನಾವಣಾ ಕಾಲದಲ್ಲಿ ಗೆಲ್ಲತಕ್ಕ ತಂತ್ರಜ್ಞಾನವೇ ಬೇರೆ ಆಡಳಿತ ನಡೆಸತಕ್ಕ ತಂತ್ರಜ್ಞಾನವೇ ಬೇರೆ. ಆದರ ೧೬ ಡಿಮ್ಯಾಂಡ್‌ಗಳನ್ನು ಮುಖ್ಯಮಂತ್ರಿಗಳವರೇನು ಇಟ್ಟುಕೊಂಡಿದ್ದಾರೆ ಅದರಿಂದ ಸಂಪೂರ್ಣವಾಗಿ ಜನಗಳಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ಖಾತೆಗಳನ್ನು ನಡೆಸಿಕೊಂಡು ಹೋಗುವುದಕ್ಕಾಗುತ್ತಿಲ್ಲ. ಬಹುಶಃ ನೆನ್ನೆ ಮಾತನಾಡಿದಂಥ ನಮ್ಮ ಕೆಲವು ಸ್ನೇಹಿತರು ಏನು ಹೇಳಿದರು ಎಂದರೆ ಕೆಲವು ಖಾತೆಗಳನ್ನಾದರೂ ಕೆಲವರಿಗೆ ಬೇರೆಯವರಿಗೆ ವಹಿಸಿಕೊಡಿ ಅಂತ ಒಂದು ಸಲಹೆ ಕೊಟ್ಟಿದ್ದಾರೆ. ಆದರೆ ಇವತ್ತಿನ ಪತ್ರಿಕೆಯನ್ನು ನೋಡಿದರೆ, ಅವರು ಮಂತ್ರಿಮಂಡಲವನ್ನು ವಿಸ್ತರಣೆ ಮಾಡಿ, ಇನ್ನೂ ಕೆಲವರನ್ನು ತೆಗೆದುಕೊಂಡು ಅವರಿಗೆ ಈ ಇಲಾಖೆಗಳನ್ನು ಕೊಡತಕ್ಕ ಯೋಚನೆಯನ್ನಿಟ್ಟುಕೊಂಡಿದ್ದಾರೆಂಬುದು ಗೊತ್ತಾಗುತ್ತಿದೆ. ಆದರೆ ಇದು ಸರಿಯಲ್ಲ ಅನ್ನಿಸುತ್ತಿದೆ. ಸಾರ್ವಜನಿಕರ ಹಣವನ್ನು ಸಿಕ್ಕಾಬಟ್ಟೆ ಪೋಲಾಗದಂತೆ ನೋಡಿಕೊಳ್ಳುವುದು ನಮ್ಮ ಜವಾಬ್ದಾರಿ. ಇವತ್ತು ಹಲವಾರು ಮಂತ್ರಿಗಳನ್ನು ನೋಡಿದ್ದೇವೆ, ದಿನಕ್ಕೆ ಒಂದು ಫೈಲೂ ಬಾರದೆ ಇರುವವರು ಇದ್ದಾರೆ. ಹಾಗಿರುವಾಗ ಇನ್ನೂ ಹೆಚ್ಚಿನ ಮಂತ್ರಿಗಳನ್ನು ತೆಗೆದುಕೊಂಡು (ಇದು ಅವರಿಗೆ ಬಿಟ್ಟಿದ್ದಾದರೂ) ತಮ್ಮ ಸ್ಥಾನ ಬಲಪಡಿಸಿಕೊಳ್ಳುವ ದೃಷ್ಟಿಯಿಂದ ತೆಗೆದುಕೊಳ್ಳತಕ್ಕದ್ದು ಸರಿಯಲ್ಲ, ಬಡ ಬೋರೇಗೌಡ ಏನು ತೆರಿಗೆ ಕೊಡುತ್ತಾನೆ ಅದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಗ್ರೋವರ್ ಕಮೀಷನ್ ಏನಿದೆ ಅದರ ಕಳಂಕವನ್ನು ನಿವಾರಿಸಿಕೊಳ್ಳುವ ದೃಷ್ಟಿಯಿಂದ ಕೆಳಕ್ಕೆ ಎಳೆದರೂ ಇಳಿಯದೆ ಇರಬೇಕೆಂಬ ಅಭಿಪ್ರಾಯವನ್ನು ಮಾನ್ಯ ಮುಖ್ಯ ಮಂತ್ರಿಗಳು ಹೊಂದಿದ್ದಾರೆಂದು ಪತ್ರಿಕೆಗಳಲ್ಲಿ ಬಂದಿತ್ತು, ನಾನು ಕೇಳಿಕೊಳ್ಳುವುದು ಇಷ್ಟೆ. ಈ ಕಳಂಕವನ್ನು ನಿವಾರಿಸುವ ಸಲುವಾಗಿ ಹೊಗಳ ಭಟ್ಟರ ಮಾತಿಗೆ ಮನ್ನಣೆ ಕೊಡಬಾರದು ಎಂದು. ಕರಪ್ಷನ್ ಚಾರ್ಜಸ್ ಇಲ್ಲದೆ ಇರಬಹುದು ; ಆದರೆ ನೆಪೋಟೀಸಂ, ಫೇವರಿಟಿಸಂ ಇದೆ. ಇದು ಏನು ಕಡಿಮೆಯಲ್ಲ. ಇದನ್ನು ನಿವಾರಿಸಿಕೊಳ್ಳುವ ಸಲುವಾಗಿ ಕೆಲವು ಕಾಲವಾದರೂ ಅವರು ತಮ್ಮ ಪದವಿಯನ್ನು ಬಿಟ್ಟುಕೊಡುವುದು ಒಳ್ಳೆಯದೆಂದು ಸಲಹೆ ಮಾಡುತ್ತೇನೆ. ಶ್ರೀಮತಿ ಇಂದಿರಾ ಗಾಂಧಿಯವರ ಮೇಲೆ ಇಂಥ ಆಪಾದನೆ ಬಂದಾಗ ಏನಾಯಿತೆಂಬುದು ಗೊತ್ತಿದೆ ; ಮತ್ತು ಅವರು ಯಾವ ರೀತಿ ಸಮಸ್ಯೆಗಳನ್ನು ಎದರಿಸುತ್ತಿದ್ದಾರೆಂಬುದು ಗೊತ್ತಿದೆ. ಅದೇ ರೀತಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಆಗಬಾರದೆಂಬ ದೃಷ್ಟಿಯಿಂದ ನಾನು ಒತ್ತಾಯ ಹಾಕಿದ್ದೇನೆ. ಆದ್ದರಿಂದ ಅವರು ಈ ಒಂದು ತಮ್ಮ ಪದವಿಯನ್ನು ತ್ಯಾಗ ಮಾಡತಕ್ಕದ್ದು ಒಳ್ಳೆಯದೆಂದು ಹೇಳುತ್ತೇನೆ. ಇವತ್ತಿನ ದಿವಸ ಹಲವಾರು ಬೇಡಿಕೆಗಳನ್ನು ನಮ್ಮ ಮುಂದೆ ಏನು ಇಟ್ಟಿದ್ದಾರೆ ಅವುಗಳಲ್ಲಿ ಬಹಳ ಪ್ರಾಮುಖ್ಯವಾದುದು ಪೋಲೀಸ್ ಬೇಡಿಕೆ. ಸುಮಾರು ೨೪ ಕೋಟಿ ರೂಪಾಯಿಗಳ ಬೇಡಿಕೆಗಳನ್ನು ಒಪ್ಪಿಕೊಳ್ಳಬೇಕೆಂದು ನಮ್ಮ ಮುಂದಿಟ್ಟಿದ್ದಾರೆ, ಯಾವುದೇ ಸರ್ಕಾರವಾಗಲೀ ಒಂದು ಪೋಲೀಸ್ ವ್ಯವಸ್ಥೆ ಬೇಕೇ ಬೇಕು. ಅದು ಎಲ್ಲೆಲ್ಲಿಯೂ ಇದ್ದೇ ಇದೆ. ೨೪ ಕೋಟಿ ರೂಪಾಯಿಗಳೆಂದರೆ ಪ್ರತಿಯೊಬ್ಬ ನಾಗರೀಕನು ಆ ಹೊರೆಯನ್ನು ಹೊರಬೇಕಾಗುತ್ತದೆ. ಈ ರೀತಿಯಾಗಿ ತೆರಿಗೆ ಕೊಡತಕ್ಕ ನಾಗರೀಕನಿಗೆ ಪೋಲಿಸರಿಂದ ಸರಿಯಾದ ಒಂದು ರಕ್ಷಣೆಯಾಗುತ್ತದೆಯೋ, ನ್ಯಾಯ ದೊರಕುತ್ತದೆಯೋ ಅಥವಾ ಕಾನೂನು ವ್ಯವಸ್ಥೆಯಾಗುತ್ತದೆಯೋ ಎಂಬುದನ್ನು ನೋಡಬೇಕು. ಇತ್ತೀಚಿನ ಒಂದು ಘಟನೆಯನ್ನು ತಮ್ಮ ಗಮನಕ್ಕೆ ಈ ಸಂದರ್ಭದಲ್ಲಿ ತರಬೇಕಾಗಿದೆ. ದಾರಿಯಲ್ಲಿ ಹುಡುಗಿಯರನ್ನು ಚುಡಾಯಿಸಿದರೆಂದು ೫ ಜನ ಯುವಕರನ್ನು ಪೋಲೀಸಿನವರು ಇದೇ ಬೆಂಗಳೂರಿನ ಕೋರ್ಟಿಗೆ ಎಳೆದುಕೊಂಡು ಹೋದರು ; ಮತ್ತು ಅಲ್ಲಿ ಹುಡುಗಿಯರನ್ನು ಚುಡಾಯಿಸಿದ್ದಾರೆಂದು ಚಾರ್ಜ್ ಷೀಟ್ ಹಾಕಿದರು. ಅವರಲ್ಲಿ ನಾಲ್ಕು ಮಂದಿ ಚುಡಾಯಿಸಿಲ್ಲವೆಂದರೂ ಫೈನ್ ಆಯಿತು. ಐದನೆಯವನು

ಹೇಳಿದ, ನನಗೆ ಕಣ್ಣೇ ಇಲ್ಲ, ಕುರುಡನಾಗಿದ್ದೇನೆ, ನನ್ನನ್ನು ಈ ಪೋಲೀಸರು ಅನವಶ್ಯಕವಾಗಿ ಎಳೆದು ಕೊಂಡು ಬಂದಿದ್ದಾರೆ ಎಂದು. ಅದು ನಿಜ ; ಆತ ನಿಜವಾಗಿಯೂ ಕುರುಡನಾಗಿದ್ದ. ಪೋಲೀಸರೇ ಈ ಈ ರೀತಿ ಮಾಡುವುದಾದರೆ, ಲಾ ಅಂಡ್ ಆರ್ಡರ್ ಕಾಪಾಡುವುದು ಆದರೂ ಹೇಗೆ ? ಕಾಪಾಡುವವ ರಾದರು ಯಾರು ? ಹಿಂದೆ, ಪೋಲೀಸರ ಬಗ್ಗೆ ಬಹಳ ಪ್ರಖ್ಯಾತಿ ಇತ್ತು ; ಮಧ್ಯದಲ್ಲಿ ಕಡಿಮೆಯಾಯಿತು. ಈಗ ಪುನಃ ಅನ್ನಿಸುತ್ತಿದೆ, ಆ ಹಾದಿಯಲ್ಲಿ ನಮ್ಮ ಪೋಲೀಸ್ ಫೋರ್ಸ್ ನಡೆದುಕೊಂಡು ಹೋಗುತ್ತದೆಂಬ ಭರವಸೆ ನನ್ನ ಮನಸ್ಸಿನಲ್ಲಿ ಇದೆ. ಅವರಿಗೆ ಹೇಳಬೇಕಾದರೆ, ಜಸ್ಟೀಸ್ ಷಾ ಕಮೀಷನ್ನಿನ ಅಂತಿಮ ವರದಿಯಲ್ಲಿ ಪೋಲೀಸ್ ಫೋರ್ಸ್ ಬಗ್ಗೆ ಅಬ್‌ಸರ್ವೇಷನ್ ಮಾಡಿದ್ದಾರೆ ; ಅದನ್ನು ಮಾನ್ಯ ಮುಖ್ಯ ಮಂತ್ರಿಗಳು ಓದಿರಬಹುದು ; ಓದದಿದ್ದರೆ ಒಂದೆರಡು ಮಾತುಗಳನ್ನು ಇಲ್ಲಿ ಉದಹರಿಸುತ್ತೇನೆ.

> "A large number of Officers, District Magistrates and Commissioner of Police, who exercised the powers of District Magistrates Ex-Officio, obediently carried out the instructions emanating from politicians and administrative heads issued on personal or political considerations".

ಇದರ ಜೊತೆಯಲ್ಲಿ ಇನ್ನೊಂದು ಮಾತನ್ನು ಹೇಳುತ್ತಾರೆ,

> "This, however, does not minimise the basic fact that such conduct on the part of responsible officers is not in consonance with the best traditions of the services to which they belonged, and of the ethical considerations".

ಪೋಲೀಸ್ ಫೋರ್ಸ್‌ನಲ್ಲಿ ಅವರು ಬೆಸ್ಟ್ ಟ್ರೆಡೀಷನ್ಸ್ ಮೆಯಿಂಟೇನ್ ಮಾಡಿಲ್ಲ, ಮತ್ತು ಅವರ ಕಂಡಕ್ಟ್ ಕೂಡ ಸರಿಯಿಲ್ಲವೆಂದು ಹೇಳುತ್ತಾ, ಇದನ್ನೆಲ್ಲ ತಡೆಗಟ್ಟಬೇಕಾದರೆ ಒಂದು ಪೀರಿಯಾಡಿಕ್ ರೆವ್ಯೂ ಆಫ್ ಪವರ್ಸ್ ಮಾಡಬೇಕು ಎಂದು ಹೇಳುತ್ತೇನೆ. ಎಷ್ಟೋ ಕಾನೂನುಗಳನ್ನು ತಯಾರಿಸುತ್ತಾರೆ ; ಮತ್ತು ಅವುಗಳನ್ನು ಜಾರಿಗೆ ತರುವುದಕ್ಕೆ ಅಧಿಕಾರ ಕೊಡುತ್ತಾರೆ ; ಹಾಗೂ ವೇರಿಯಸ್ ಲೆವೆಲ್ಸ್‌ನಲ್ಲಿ ವೇರಿಯಸ್ ಪವರ್ಸ್ ಡೆಲಿಗೇಟ್ ಮಾಡಿರುತ್ತಾರೆ. ಆದರೆ ಇದೆಲ್ಲ ಮಿಸ್ ಯೂಸ್ ಆಗಿರುವುದನು ನೋಡಿ ಜಸ್ಟೀಸ್ ಷಾ ಅವರು ಈ ರೀತಿ ಹೇಳುತ್ತಾರೆ,

> "It is time that some mechanism is devised to ensure that enactments, which confer on public servants powers exercisable on their subjective satisfaction and which interfere with the normal lives and activities of the citizens, are subjected to a periodical review".

ಇದನ್ನು ಮಾಡಬೇಕೆಂಬ ಮಾತನ್ನು ಹೇಳುತ್ತಿದ್ದೇನೆ. ಇವತ್ತಿನ ದಿವಸ ಅಧಿಕಾರ ಕೊಟ್ಟಿದ್ದೀರಿ, ಆದರೆ ಆ ಅಧಿಕಾರವನ್ನು ಯಾವ ರೀತಿ ಚಲಾಯಿಸುತ್ತಿದ್ದಾರೆ ; ಅದರಿಂದ ಜನಗಳಿಗೆ ಉಪಯೋಗವಾಗು ತ್ತಿದೆಯೋ ಅಥವಾ ದುರುಪಯೋಗವಾಗುತ್ತಿದೆಯೋ ಎಂಬುದನ್ನು ರೆವ್ಯೂ ಮಾಡಬೇಕೆಂದು ಹೇಳುತ್ತಾ ಕೊನೆಯಲ್ಲಿ ಇನ್ನೂ ಒಂದು ಉತ್ತಮವಾದ ಮಾತನ್ನು ಹೇಳಿದ್ದಾರೆ, ಅದು ಈ ರೀತಿ ಇದೆ —

> "When unscrupulous and unprincipled politicians and their associates are in a position to harm the public servants refusing to fall in line with wrong and illegal orders, it becomes necessary in the interest of the basic unity and integrity of the country, as also of the fundamentals of the constitution and the rule of law, to protect the officials who are called upon to function at different administrative levels".

ಒಮ್ಮೆ ನಮ್ಮ ಭಾಗದಲ್ಲಿ ಹೇಳಿದ್ದರು. ಇವತ್ತು ಅವರು ಸಚಿವರಾಗಿಲ್ಲ; ಇನ್ನು ಮುಂದೆ ಅವರು ಏನು ಮಾಡುವುದಕ್ಕಾಗುವುದಿಲ್ಲ. ನಾನು ಆಗ ಆಸ್ಪತ್ರೆಯಲ್ಲಿ ಇದ್ದೆ, ಅಲ್ಲಿಂದ ಡಿಸ್‌ಚಾರ್ಜ್ ಮಾಡಿಸಿಕೊಂಡು ಬಂದ ಮೇಲೆ "ಮೊದಲು ರೊಕ್ಕ ಕೊಡಬೇಕು, ಆಮೇಲೆ ಜಮೀನಿನಲ್ಲಿ ಮೇಲೆ ಕಾಲಿಡಬೇಕು" ಎಂದು ಸಂಬಂಧಪಟ್ಟವರಿಗೆ ಹೇಳಿದ್ದೇನೆ. ನಮ್ಮ ತಾಲ್ಲೂಕಿನಲ್ಲಿ ರೈತರಿಗೆ ಪರಿಹಾರಧನವನ್ನು ಕೊಟ್ಟಿಲ್ಲದೇ ಇರುವುದರಿಂದ ರೈತರು ಬಹಳ ಕಷ್ಟದಿಂದ ಜೀವನ ಮಾಡುತ್ತಿದ್ದಾರೆ. ಆದ್ದರಿಂದ ದಯಮಾಡಿ ಮಾನ್ಯ ಸಚಿವರು ಈ ಬಗ್ಗೆ ಗಮನ ಹರಿಸಿ ನಮ್ಮ ಕಡೆಯ ರೈತರಿಗೆ ಪರಿಹಾರವನ್ನು ಜಾಗ್ರತೆಯಾಗಿ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಸ್ವಾಮಿ, ಒಂದು ವಿಚಾರ ಹೇಳಬೇಕೆಂದರೆ ಈ ನೀರಾವರಿ ಯೋಜನೆಗಳಿಂದ ನಮ್ಮ ಕ್ಷೇತ್ರದಲ್ಲಿ ಅದು ವರವಾಗದೇ ಶಾಪವಾಗಿದೆ ಎಂದು ಹೇಳಿದರೆ ಅದೇನೂ ತಪ್ಪಾಗುವುದಿಲ್ಲ. ನಮ್ಮ ಕ್ಷೇತ್ರದಲ್ಲಿ ೩ ಕೆರೆಗಳು ಇವೆ, ಆ ಕೆರೆಗಳಲ್ಲಿ ಒಂದು ಬಾರಿಯೂ ನೀರು ನಿಂತಿದ್ದು ಇಲ್ಲ. ಜಮೀನುಗಳಿಗೆ ನೀರು ಒದಗಿದ್ದು ಇಲ್ಲ. ನಮ್ಮ ಭಾಗದಲ್ಲಿ ಒಂದು ಕಡೆ ಅಪ್ಪರ್ ಕೃಷ್ಣ ಪ್ರಾಜೆಕ್ಟ್, ಇನ್ನೊಂದು ಕಡೆ ತುಂಗಭದ್ರಾ ಪ್ರಾಜೆಕ್ಟ್, ಮತ್ತೊಂದು ಕಡೆ ಘಟಪ್ರಭಾ, ಮಲಪ್ರಭಾ ಪ್ರಾಜೆಕ್ಟ್ ಇದ್ದರೂ ಕೂಡ ಆ ಯೋಜನೆಗಳಿಂದ ನಮ್ಮ ಕ್ಷೇತ್ರದಲ್ಲಿ ಒಂದು ಹನಿಯಷ್ಟೂ ನೀರು ದೊರೆತಿಲ್ಲ. ಇನ್ನು ೩ ವರ್ಷವಾದರೂ ನೀರು ಸಿಕ್ಕುತ್ತದೆಯೋ ಇಲ್ಲವೋ ಗೊತ್ತಿಲ್ಲ. ಅಂತಹ ಕ್ಷೇತ್ರ ನನಗೆ ಸಿಕ್ಕಿದೆ. ನಮ್ಮ ಕ್ಷೇತ್ರದಲ್ಲಿ ಈ ಆಲಮಟ್ಟಿ ಡ್ಯಾಮ್ ಬಂದಿರುವುದರಿಂದ ಜನರಿಗೆ ಇನ್ನೂ ಕಾಂಪನ್‌ಸೇಷನ್ ಸಿಕ್ಕುತ್ತಾ ಇಲ್ಲ. ನನ್ನ ತಾಲೂಕಿನಲ್ಲಿ ೧೪ ಗ್ರಾಮಗಳು ಇದೆ. ಅಲ್ಲಿ ಬಿ.ಕಾಂ, ಬಿ.ಎ. ಮಾಡಿರತಕ್ಕಂಥ ಗ್ರಾಜುಯೇಟ್ಸ್ ಬಹಳ ಮಂದಿ ಇದ್ದಾರೆ, ಅವರಿಗೆ ಅದರಲ್ಲಿ ನೌಕರಿ ಕೊಡಿ ಎಂದು ಕೇಳಿದರೆ 'ಇಲ್ಲ' ಎಂದು ಹೇಳುತ್ತಾರೆ. ಬಿಜಾಪುರ ಜಿಲ್ಲೆಯ ಅನೇಕ ಗ್ರಾಜುಯೇಟ್‌ಗಳಿಗೆ ಅಲ್ಲಿ ನೌಕರಿ ಕೊಟ್ಟಿದ್ದಾರೆ. ಅಲ್ಲಿ ಏತಕ್ಕೆ ಈ ರೀತಿ ತಾರತಮ್ಯ ಮಾಡುತ್ತಿದ್ದಾರೆ ಎಂಬುದು ನನಗೆ ತಿಳಿಯುತ್ತಾ ಇಲ್ಲ. ನಮ್ಮ ಕಡೆ ತುಂಗಭದ್ರಾ ಕೆನಾಲ್ ರಿಪೇರಿ ಕೆಲಸ ನಡೆಯುತ್ತಾ ಇದೆ. ಅದಾದ ನಂತರ ತಕ್ಷಣ ನೀರನ್ನು ಬಿಡುತ್ತಾರೆ. ಇದರಿಂದ ಸಿಮೆಂಟ್ ಮಾಡಿದ್ದು ಎಲ್ಲಾ ಕೊಚ್ಚಿ ಹೋಗುತ್ತಿದೆ, ಪುನಃ ರಿಪೇರಿ ಕೆಲಸ ಮಾಡುತ್ತಾರೆ. ನಂತರ ತಕ್ಷಣ ನೀರು ಬಿಟ್ಟುಬಿಡುತ್ತಾರೆ. ಹೀಗೆ ಮಾಡುತ್ತಿರುವುದರಿಂದ ಸರ್ಕಾರದ ಹಣ ಸುಮ್ಮನೆ ಖರ್ಚಾಗುತ್ತಿದೆ. ಇದನ್ನು ತಡೆಗಟ್ಟಬೇಕಾದರೆ ಅದನ್ನು ರಿಪೇರಿ ಮಾಡಿ ಒಂದು ವಾರ ಆದ ಮೇಲೆ ನೀರನ್ನು ಬಿಟ್ಟರೆ ಅದರಿಂದ ಅನುಕೂಲವಾಗುತ್ತದೆ. ಈ ಬಗ್ಗೆ ತಾವು ಗಮನ ಕೊಡಬೇಕು. ಮತ್ತೆ ನನ್ನ ತಾಲ್ಲೂಕಿನಲ್ಲಿ ಒಂದು ಪ್ರಾಜೆಕ್ಟ್ ಇದೆ. ಹಿಂದೆ ಮಾನ್ಯ ಶ್ರೀ ಉಮಾಶಂಕರ್ ದೀಕ್ಷಿತ್‌ರವರು ಅದರ ಶಂಕುಸ್ಥಾಪನೆ ಮಾಡಿದ್ದಾರೆ. ಇಲ್ಲಿಯವರೆಗೆ ಕೂಡ ಅಲ್ಲಿಯ ಜನರಿಗೆ ಪರಿಹಾರ ಸಿಕ್ಕಿಲ್ಲ. ಅವರಲ್ಲಿ ಮಾರ್ಜಿನಲ್ ಫಾರ್ಮರ್ಸ್ ಬಹಳ ಜನ ಇದ್ದಾರೆ; ಅವರಿಗೆ ಪರಿಹಾರಧನವನ್ನು ಕೊಡುವ ಬಗ್ಗೆ ಮಾನ್ಯ ಸಚಿವರು ತ್ವರಿತ ಕ್ರಮಗಳನ್ನು ಕೈಕೊಂಡು ಅವರಿಗೆ ಜಾಗ್ರತೆ ಪರಿಹಾರಧನ ಸಿಕ್ಕುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

೪-೩೦ ಪಿ.ಎಂ.

ಇನ್ನು ಪಶುಸಂಗೋಪನೆ ಕುರಿತು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ಸಮಾಜದಲ್ಲಿ ಬಹಳ ಹಿಂದೆ ಕಣ್ಣಿಗೆ ಕಣ್ಣು, ಕಾಲಿಗೆ ಕಾಲು— ಪ್ರಕಾರವಾಗಿ ಶಿಕ್ಷೆ ವಿಧಿಸುತ್ತಿದ್ದರು. ಆ ಕಾಲದಲ್ಲಿ ವಿನಿಮಯ ಮಾಧ್ಯಮವಾಗಿ ರೊಕ್ಕ ಇರಲಿಲ್ಲ. ಆಗ ವಸ್ತುಗಳು ವಿನಿಮಯ ಮಾಧ್ಯಮವಾಗಿದ್ದವು. ಆಗ ಹಸುಗಳೂ ಕೂಡ ವಿನಿಮಯ ಮಾಧ್ಯಮವಾಗಿದ್ದವು. ಆದರೆ, ಈಗ ಹಸುಗಳಿಗೆ ಹೆಚ್ಚು ಬೆಲೆ ಇದೆ. ರಾಯಚೂರಿನ ಪಶುಸಂಗೋಪನಾ ವಿಭಾಗದಲ್ಲಿ ೪೫ ಜಾಗಗಳು ಖಾಲಿ ಇವೆ; ಗುಲ್ಬರ್ಗ ವಿಭಾಗದಲ್ಲಿ ೨೫ ಜಾಗಗಳು ಖಾಲಿ ಇವೆ. ಈ ಕುರಿತು ಸರ್ಕಾರ ಒಂದು ಸುತ್ತೋಲೆ ಹೊರಡಿಸಿ ನಿವೃತ್ತಿಯಾಗಿರುವವರನ್ನು ಪುನರ್ ನೇಮಕ ಮಾಡಿಕೊಳ್ಳಲಾಗುವುದು. ಇಚ್ಛೆಯುಳ್ಳವರು ಅರ್ಜಿ ಹಾಕಿಕೊಳ್ಳಬೇಕೆಂದು ತಿಳಿಸಿದೆ. ಎಷ್ಟೋ ಜನ ವಿದ್ಯಾವಂತರು ನೌಕರಿ ಇಲ್ಲದೆ ಒದ್ದಾಡುತ್ತಾ ಇರುವಾಗ, ಇಂತಹ ಸುತ್ತೋಲೆಯ ಪ್ರಮೇಯವೇನಿತ್ತು? ನಿರುದ್ಯೋಗಿಗಳಿಗೆ ಈ ಜಾಗಗಳನ್ನು ಏತಕ್ಕೆ ಕೊಡಬಾರದು? ನನ್ನ ಕ್ಷೇತ್ರದಲ್ಲಿರುವ ಎಂಟು ದನದ ಆಸ್ಪತ್ರೆಗಳಲ್ಲಿ ಕೇವಲ ಮೂರು ಆಸ್ಪತ್ರೆಗಳು ಮಾತ್ರ ಕೆಲಸ ಮಾಡುತ್ತಿವೆ. ಅಲ್ಲದೆ ಅಲ್ಲಿ ಹೊಸದಾಗಿ ಪಶು ವೈದ್ಯಶಾಲೆಗಳನ್ನು ತೆರೆಯುತ್ತಿಲ್ಲ; ಇರುವ ವೈದ್ಯಶಾಲೆಗಳನ್ನು ಚೆನ್ನಾಗಿ ವ್ಯವಸ್ಥೆ ಮಾಡುತ್ತಿಲ್ಲ. ಈ ಬಗ್ಗೆ ಸರ್ಕಾರ ತೀವ್ರ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿರುವ ವೆಟರ್ನರಿ ಇಲಾಖೆಯಲ್ಲಿ ಇಬ್ಬರು ಅಧಿಕಾರಿಗಳು ಒಂದೇ ಗ್ರೇಡ್

ನಷ್ಟರಂ ಇರುವುದರಿಂದ, ಯಾರನ್ನು ಯಾರು ಕಂಟ್ರೋಲ್ ಮಾಡಬೇಕೆಂದು ಗೊತ್ತಾಗುತ್ತಿಲ್ಲ. ಅವರನ್ನು ರೀ–ಡಿಸಿಗ್ನೇಟ್ ಮಾಡಬೇಕೆಂದು ಹೇಳುತ್ತೇನೆ. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಈ ಇಲಾಖೆಯ ಕೆಲಸ ಸುಗಮವಾಗಿ ಸಾಗಬೇಕಾದರೆ ಜಿಲ್ಲೆಗೊಬ್ಬರಂತೆ ಡೆಪ್ಯುಟಿ ಡೈರೆಕ್ಟರ್ ಅವರನ್ನು ನೇಮಕ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಗಣಿ ಮತ್ತು ಭೂಗರ್ಭ ಶಾಸ್ತ್ರ ಇಲಾಖೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಕೋಲಾರ ಮತ್ತು ಹಟ್ಟಿ ಚಿನ್ನದ ಗಣಿ ಪ್ರದೇಶದಲ್ಲಿ ಇನ್ನು ಹತ್ತು ವರ್ಷಗಳವರೆಗೆ ಚಿನ್ನ ಸಿಕ್ಕುತ್ತದೆಂದು ವರದಿಯಾಗಿರುವುದನ್ನು ಈಗೆ ಹದಿನೈದು ದಿವಸಗಳ ಹಿಂದೆ ಪತ್ರಿಕೆಗಳಲ್ಲಿ ಓದಿದೆ. ಹಟ್ಟಿ ಚಿನ್ನದ ಗಣಿ ನನ್ನ ಕ್ಷೇತ್ರದಲ್ಲಿದೆ. ಅಲ್ಲದೆ ಗುಲ್ಬರ್ಗ ಜಿಲ್ಲೆಯ ಸುರಪುರ ತಾಲ್ಲೂಕಿನಲ್ಲಿರುವ ಮೂಗನ ಗವಿಯಲ್ಲಿ ಚಿನ್ನ ಸಿಗುತ್ತದೆಂದು ನಿಜಾಮ ಸರ್ಕಾರದವರು ಕಂಡುಹಿಡಿದು ಹೇಳುತ್ತಿದ್ದರು. ಅಲ್ಲದೆ ಅಲ್ಲಿ ಸಿಕ್ಕುವ ಚಿನ್ನ ಲಾಭದಾಯಕವೆಂತಲೂ ಕೇಳಿದ್ದೇನೆ. ಅದರ ಬಗ್ಗೆ ಸರ್ಕಾರದವರು ತೀವ್ರ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಗುಲ್ಬರ್ಗ ಜಿಲ್ಲೆಯ ತಾಲ್ಲೂಕೊಂದರಲ್ಲಿ ಸುಣ್ಣಕಲ್ಲು ಹೇರಳವಾಗಿ ಸಿಗುತ್ತದೆಂದು ಕೇಳಿದ್ದೇನೆ. ಅಲ್ಲಿ ಒಂದು ಮಿನಿ ಸಿಮೆಂಟ್ ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕೆಂದು ಹೇಳುತ್ತೇನೆ. ವಿಜಯನಗರ ಉಕ್ಕಿನ ಕಾರ್ಖಾನೆ ಸ್ಥಾಪನೆಯಾಗಲೇಬೇಕು. ಮಂಗಳೂರಿನಲ್ಲೊಂದು ಉಕ್ಕಿನ ಕಾರ್ಖಾನೆ ಸ್ಥಾಪಿಸಲಾಗುವುದೆಂದು ಕೇಂದ್ರದವರು ಹೇಳುತ್ತಿದ್ದಾರೆ. ಅಲ್ಲೂ ಒಂದು ಇರಲಿ, ವಿಜಯನಗರದಲ್ಲೂ ಒಂದು ಇರಲಿ ಎಂದು ನಾನು ಹೇಳಬಯಸುತ್ತೇನೆ.

ಕೃಷ್ಣ ಮೇಲ್ದಂಡೆ ಯೋಜನೆಗೆ ವಿಶ್ವಬ್ಯಾಂಕಿನವರು ಕೋಟ್ಯಾಂತರ ರೂಪಾಯಿಗಳ ಸಹಾಯ ಕೊಟ್ಟಿದ್ದಾರೆ. ಆದರೆ, ಕೃಷ್ಣ ಬಲದಂಡೆ ನಾಲೆಗೆ ದುಡ್ಡು ಸಿಗುತ್ತಿಲ್ಲ. ನಮ್ಮ ಜಿಲ್ಲೆಯ ನೀರಾವರಿ ಇಲಾಖೆಯಲ್ಲಿರುವ ಸಲಹಾ ಸಮಿತಿಯ ಸದಸ್ಯನಾಗಿದ್ದೇನೆ. ಅಲ್ಲಿ ನಡೆಯುವ ಸಭೆಯೊಂದರಲ್ಲಿ ನಾನು ಈ ಬಗ್ಗೆ ಪ್ರಸ್ತಾಪ ಮಾಡಿದಾಗ ಇದಕ್ಕೆ ವಿಶ್ವ ಬ್ಯಾಂಕಿನಿಂದ ಸಹಾಯ ಬಂದಿಲ್ಲವೆಂದು ಹೇಳಿದರು. ಆದುದರಿಂದ, ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದಿಂದಲಾದರೂ ಹಣ ಸಹಾಯ ಪಡೆದು ಈ ಯೋಜನೆಯನ್ನು ಮುಗಿಸಬೇಕೆಂದು ಹೇಳುತ್ತೇನೆ.

ಲೋಕಸೇವಾ ಆಯೋಗದ ಬಗ್ಗೆ ಹೇಳುವುದಾದರೆ, ಕಳೆದ ಎರಡು ವರ್ಷಗಳಿಂದ ೫೦೦ ವೈದ್ಯರ ಹುದ್ದೆಗಳಿಗೆ ಅವರಿನ್ನೂ ಆಯ್ಕೆಯನ್ನೇ ಮಾಡಿಲ್ಲ. ಕಳೆದ ತಿಂಗಳು ಈ ಹುದ್ದೆಗಳಿಗೆ ಸಂದರ್ಶನ ಮುಗಿಸಿದ್ದಾರೆ. ಆದರೆ ಆಯ್ಕೆನ್ನು ಮಾಡುವುದಕ್ಕೆ ಇನ್ನೆಷ್ಟು ತಿಂಗಳು ತೆಗೆದುಕೊಳ್ಳುವರೋ ಕಾಣೆ. ನಾನು ಡಿಸೆಂಬರ್ ೧೯೭೭ರಲ್ಲಿ ಲೋಕಸೇವಾ ಆಯೋಗದ ಮೂಲಕ ಕ್ಲಾಸ್ (೧) ಮತ್ತು (೨) ಪರೀಕ್ಷೆಗಳನ್ನು ತೆಗೆದುಕೊಂಡಿದ್ದೆ. ಮತ್ತೆ ಮೊನ್ನೆ ಇದೇ ಪರೀಕ್ಷೆ ನಡೆದಾಗ ನಾನು ಆಸ್ಪತ್ರೆಯಲ್ಲಿದ್ದೆ. ನನಗೇನೂ ಪರವಾಗಿಲ್ಲ, ನನಗಿನ್ನೂ ವಯಸ್ಸಿದೆ. ರಿಜರ್ವೇಷನ್ ಖೋಟಾ ಇದೆ. ಎಂ.ಎಲ್.ಎ.ಗಿರಿ ಮುಗಿಸಿದ ಮೇಲೆ ಸುಲಭವಾಗಿ ಹೋಗಬಹುದು.

ಆಡಳಿತಾಧಿಕಾರಿಗಳನ್ನು ನೇಮಕ ಮಾಡಿರುವ ಮುನಿಸಿಪಾಲಿಟಿಗಳಲ್ಲಿ ಸಲಹಾ ಸಮಿತಿಗಳನ್ನು ಸರ್ಕಾರದವರು ನೇಮಕ ಮಾಡಿರುವರು. ನಮ್ಮ ಮುದ್ಗಲ್ ಮುನಿಸಿಪಾಲಿಟಿಯ ಸಲಹಾ ಸಮಿತಿಯ ಸದಸ್ಯರೊಬ್ಬರು ತೀರಿಕೊಂಡಾಗ ಅವರ ಬದಲಿಗೆ ಇನ್ನೊಬ್ಬರನ್ನು ಸದಸ್ಯರನ್ನಾಗಿ ಮಾಡಿ ಎಂದು ಹೇಳಲಾಯಿತು. ಅದು ಬಹಳ ದಿನಗಳಾದರೂ ಆಗಲಿಲ್ಲ. ಜಿಲ್ಲಾಧಿಕಾರಿಯವರನ್ನು ಈ ಬಗ್ಗೆ ಕೇಳಿದ್ದಕ್ಕೆ, ಅದನ್ನು ಸೆಕ್ರೆಟರಿಯೇಟ್‌ಗೆ ಕಳುಹಿಸಿಕೊಡಲಾಗಿದೆ ಎಂದು ಹೇಳಿದರು. ಈಗ ಆ ಮುನಿಸಿಪಾಲಿಟಿಗೆ ಚುನಾಯಿತ ಪ್ರತಿನಿಧಿಗಳು ಬಂದಿದ್ದರೂ ತೀರಿಕೊಂಡಿದ್ದವರ ಸ್ಥಳಕ್ಕೆ ಇನ್ನೊಬ್ಬರನ್ನು ನೇಮಿಸುವ ಆಜ್ಞೆ ಮಾತ್ರ ಬರಲಿಲ್ಲ. ಇನ್ನು ನಮ್ಮ ಸೆಕ್ರೆಟರಿಯೇಟ್‌ನಲ್ಲಿ ಕೆಲಸ ಮಾಡುವವರು ಹತ್ತೂವರೆಯಾದರೂ ಕಛೇರಿಗೆ ಬಂದಿರುವುದಿಲ್ಲ. ಆದರೆ ಐದು ಗಂಟೆಯ ಹೊತ್ತಿಗೆಲ್ಲ ವಿಧಾನ ಸೌಧ ಬಳಿ ಬಸ್ಸಿಗೆ ಕಾದು ನಿಂತಿರುತ್ತಾರೆ. ಇದು ನಮ್ಮ ಸೆಕ್ರೆಟೇರಿಯಟ್‌ನಲ್ಲಿ ನಡೆಯುತ್ತಿರುವ ಕಾರ್ಯ ವಿಧಾನ.

ಇನ್ನು ವಿದ್ಯುಚ್ಛಕ್ತಿ ಬಗ್ಗೆ ಹೇಳುವುದಾದರೆ, ಥರ್ಮಲ್ ಪ್ರಾಜೆಕ್ಟನ್ನು ನಮ್ಮ ರಾಯಚೂರಿಗೆ ಕೊಟ್ಟಿದ್ದಾರೆ. ಈ ಯೋಜನೆಗೆ ಈ ವರ್ಷ ೧೫ ಕೋಟಿ ರೂಪಾಯಿಗಳನ್ನು ಇಡಲಾಗಿದೆ. ಅಲ್ಲಿ ಚೆನ್ನಾಗಿ ಕೆಲಸ ನಡೆಯುತ್ತಿವೆ. ನಮ್ಮ ರಾಜ್ಯದಲ್ಲಿ ಸುಮಾರು ೨೬,೮೦೦ ಹಳ್ಳಿಗಳಿವೆ. ಇವುಗಳಲ್ಲಿ ಸುಮಾರು ೧೬,೦೦೦ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿದೆ. ಗ್ರಾಮಾಂತರ ವಿದ್ಯುದ್ದೀಕರಣ ಯೋಜನೆಯಲ್ಲಿ ನಮ್ಮ ತಾಲ್ಲೂಕು ಕೂಡ ಸೇರಿದೆ. ಆದರೆ, ಅಗತ್ಯ ವಸ್ತುಗಳ ಸರಬರಾಜಾಗದೆ ಇರುವುದರಿಂದ

ಕೆಲವು ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಸೌಲಭ್ಯವನ್ನು ಒದಗಿಸುತ್ತಿಲ್ಲ. ನಮ್ಮ ಕಡೆ ಮೂರು ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಕೊಡುತ್ತೇವೆ ಎಂದು ಹೇಳಿದ್ದರೂ ಇದುವರೆವಿಗೂ ಒಂದು ಹಳ್ಳಿಗೂ ಕೊಟ್ಟಿಲ್ಲ. ಆದುದರಿಂದ, ನನ್ನ ತಾಲ್ಲೂಕಿನಲ್ಲಿರುವ ಹಳ್ಳಿಗಳಿಗೆ ಆದಷ್ಟು ಬೇಗನೆ ವಿದ್ಯುಚ್ಛಕ್ತಿ ಸೌಲಭ್ಯವನ್ನು ಒದಗಿಸಿ ಕೊಡಬೇಕೆಂದು ಹೇಳುತ್ತೇನೆ.

ಉದ್ಯೋಗ ಭರವಸಾ ಯೋಜನೆಯಡಿಯಲ್ಲಿ ನನ್ನ ಸ್ವಂತ ತಾಲ್ಲೂಕನ್ನೂ ಕೂಡ ಸೇರಿಸಲಾಗಿದೆ. ಆದರೆ ಅಲ್ಲಿ ಸರಿಯಾಗಿ ಕೆಲಸವಾಗುತ್ತಿಲ್ಲ. ನಮ್ಮ ಭಾಗಕ್ಕೆ ಒದಗಿಸಿದ್ದ ಸುಮಾರು ೨೧ ಲಕ್ಷ ರೂಪಾಯಿಗಳಲ್ಲಿ ಕೇವಲ ಸುಮಾರು ೧೦ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಲಾಗಿದೆ. ಈ ಯೋಜನೆಯಡಿಯಲ್ಲಿ ಕೆಲಸ ಮಾಡುವವರಿಗೆ ಧಾನ್ಯದ ರೂಪದಲ್ಲಿ ಕೂಲಿಯನ್ನು ಕೊಡಲಾಗುತ್ತಿದೆ. ನಮ್ಮ ಭಾಗದಲ್ಲಿ ಗೋಧಿ ಧಾನ್ಯವನ್ನು ಕೂಲಿ ಮಾಡುವವರಿಗೆ ಕೊಡಲಾಗುತ್ತಿದೆ. ಇದು ಬೇಸಿಗೆ ಕಾಲವಾದ್ದರಿಂದ ಗೋಧಿಯಿಂದ ಮಾಡಿದ ಪದಾರ್ಥಗಳನ್ನು ತಿಂದರೆ ದಿನಕ್ಕೆ ಮೂರು–ನಾಲ್ಕು ಸಲ ನೀರು ಕುಡಿಯಬೇಕಾಗುತ್ತದೆ. ಆದರೆ, ನಮ್ಮ ಭಾಗದಲ್ಲಿ ಕುಡಿಯಲಿಕ್ಕೂ ನೀರಿಲ್ಲ. ಈಗ ನಮ್ಮಲ್ಲಿ ಬೇಕಾದಷ್ಟು ಜೋಳವಿದೆ. ಆದುದರಿಂದ, ಗೋಧಿಗೆ ಬದಲಾಗಿ ಜೋಳವನ್ನು ಕೆಲಸ ಮಾಡುವವರಿಗೆ ಒದಗಿಸಿಕೊಡಬೇಕೆಂದು ಹೇಳುತ್ತೇನೆ.

ಸಾರ್ವಜನಿಕ ಆರೋಗ್ಯ ಇಂಜಿನಿಯರಿಂಗ್ ಇಲಾಖೆಯವರೋ ಎಲ್ಲಿದ್ದಾರೋ ನಮಗೆ ಗೊತ್ತೇ ಇಲ್ಲ; ನಮ್ಮ ಕಡೆ ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರೇ ಇಲ್ಲ. ನಾನು ಈ ಸಾರಿ ಊರಿಗೆ ಹೋಗುವುದೇ ದುಃಸ್ಥಿತಿಯಾಗಿದೆ; ನನ್ನ ಸ್ವಂತ ಗ್ರಾಮದಲ್ಲಿ ಕೂಡ ಕುಡಿಯುವುದಕ್ಕೆ ನೀರು ಇಲ್ಲದಂತಾಗಿದೆ. ನಾವು ಇಲಾಖೆಯವರನ್ನು ಹೋಗಿ ಕೇಳಿಕೊಂಡರೆ; ಇವತ್ತು ಬರುತ್ತೇವೆ; ನಾಳೆ ಬರುತ್ತೇವೆಂದು ಹೇಳಿಕಳುಹಿಸಿ ಕೊಡುತ್ತಾರೆ. ಪುರಸಭಾ ಮಂತ್ರಿಗಳು ಒಂದು ಲಕ್ಷ ರೂಪಾಯಿಗಳನ್ನು ಅಭಿವೃದ್ಧಿ ಕಾರ್ಯಕ್ಕಾಗಿ ಏನು ಕೊಟ್ಟಿದ್ದೇವೆ; ಅದನ್ನು ನೀರಿನ ಅನುಕೂಲತೆಗಾಗಿ ಉಪಯೋಗ ಮಾಡಿಕೊಳ್ಳಿ ಎಂದು ಹೇಳಿದರು. ನಮ್ಮಲ್ಲಿ ರಿಗ್ ಮಿಷನ್ ಇಲ್ಲ; ಇಂಜಿನಿಯರ್ಸ್ ಇಲ್ಲ. ಅಸಿಸ್ಟೆಂಟ್ ಇಂಜಿನಿಯರ್ ರವರನ್ನು ಕೇಳಿದರೆ ನಾನು ೯ ತಾಲ್ಲೂಕು ಮಾಡಬೇಕೂಂತ ಹೇಳುತ್ತಾನೆ. ಆದಷ್ಟು ಜಾಗ್ರತೆ ಸಂಬಂಧಪಟ್ಟ ಇಲಾಖೆಯವರಿಗೆ ತಿಳಿಸಿ ನಮಗೆ ಕುಡಿಯುವ ನೀರಿನ ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ನಮ್ಮ ಭಾಗದಲ್ಲಿ ಮನ್ನಾಸಾಹೇಬ್ ಎನ್ನುವವರು ಇದ್ದರು; ಅವರು ಕರ್ನಾಟಕದಲ್ಲಿ ಎಲ್ಲೆಲ್ಲಿ ನೀರು ದೊರೆಯುತ್ತದೆನ್ನುವ ಬಗ್ಗೆ ಸರ್ವೆ ಮಾಡಿದ್ದಾರೆ. ಒಂದು ಪುಸ್ತಕದಲ್ಲಿ ಅದನ್ನು ಬರೆದಿದ್ದಾರೆ. ಆ ಒಂದು ಪುಸ್ತಕ ತರಿಸಿಕೊಳ್ಳಿ ಎಂದು ಹೇಳಿದ್ದೆ; ಹಿಂದೆ ಇದ್ದಂಥ ಜಿಲ್ಲಾಧಿಕಾರಿಗಳು ಆ ಪುಸ್ತಕವನ್ನು ತರಿಸಿಕೊಂಡಿದ್ದರು; ಆ ಪುಸ್ತಕವನ್ನು ಸರ್ಕಾರದವರು ತರಿಸಿಕೊಂಡು ಕುಡಿಯುವ ನೀರಿನ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಬರಗಾಲ ಪೀಡಿತ ಅಭಿವೃದ್ಧಿ ಕಾರ್ಯಕ್ರಮ ಯೋಜನೆಯಲ್ಲಿ ಉದ್ಯೋಗ ದೃಢೀಕರಣ ಯೋಜನೆ; ಭೂಸಾರ ರಕ್ಷಣ ಯೋಜನೆ; ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ಒಬ್ಬೊಬ್ಬರಿಗೆ ೧೫೦೦ ರೂಪಾಯಿ ೧೨೦೦ ರೂಪಾಯಿಗಳನ್ನು ಸಹಾಯ ಧನವಾಗಿ ಕೊಡುತ್ತಿದ್ದಾರೆ. ನಮ್ಮ ಭಾಗದಲ್ಲಿ ಬ್ಯಾಂಕಿನವರು ಒಂದು ಪೈಸೆ ಕೊಡುತ್ತಿಲ್ಲ. ಕುಷ್ಟಗಿ ಮತ್ತು ಲಿಂಗಸೂಗೂರು ತಾಲ್ಲೂಕಿಗೆ ಕೊಟ್ಟಿದಂತ ಹಣದಲ್ಲಿ ೧೦,೦೦೦ ರೂಪಾಯಿ ಖರ್ಚಾಗಿಲ್ಲ; ಸುಮ್ಮನೆ ಲುಕ್ಸಾನು ಆಗುತ್ತಿದೆ. ಒಂದುಸಾವಿರ ರೂಪಾಯಿ ಸಬ್ಸಿಡಿ ಕೊಡುವುದಕ್ಕೆ ಬದಲು ಇನ್ನು ಹೆಚ್ಚಿಗೆ ಸಾಲ ಕೊಡುವ ವ್ಯವಸ್ಥೆ ಮಾಡಿದರೆ ರಾಷ್ಟ್ರೀಕೃತ ಬ್ಯಾಂಕುಗಳಿಗೆ ಮೊರೆ ಇಡುವುದು ತಪ್ಪುತ್ತದೆಂದು ಹೇಳುತ್ತೇನೆ. ನಮ್ಮ ಭಾಗದಲ್ಲಿ ಬೆಟರ್‌ಮೆಂಟ್ ಲೆವಿ ತುಂಬಾ ಇದೆ; ನೀರಾವರಿಯ ಅನುಕೂಲ ಇಲ್ಲದೇ ಇರುವಂತ ಭಾಗದಲ್ಲಿ ಬೆಟರ್‌ಮೆಂಟ್ ಲೆವಿ ಹಾಕಿರುವುದು ಸೂಕ್ತವಲ್ಲ; ಇದರ ಮೇಲೆ ಸುಸ್ತಿ ಬಡ್ಡಿ ಬೇರೆ ಹಾಕುತ್ತಾರೆ; ಆದ್ದರಿಂದ ಇದನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಮಗೆ ನೀರಾವರಿ ಅನುಕೂಲ ಶಾಪವಾಗಿದೆ. ಅದನ್ನು ವರವಾಗಿ ಮಾಡಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ನಮ್ಮ ಭಾಗದಲ್ಲಿ ಮಟ್ಕಾ ಬಹಳ ಜಾಸ್ತಿ ಇದೆ. ಮಾನ್ಯ ಮುಖ್ಯಮಂತ್ರಿಗಳು ಮಟ್ಕಾ ನಡೆಯದಂತೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಗರುಡಾಚಾರ್, ಸಾಂಗ್ಲಿಯಾನ ಹಾಗೂ ನಮ್ಮ ಭಾಗದ ಡಿ.ಐ.ಜಿ. ಯವರು ಕೂಡಾ ಉತ್ತಮ ಅಧಿಕಾರಿಗಳಾಗಿದ್ದಾರೆ. ಕೆಳಗಿನ ಅಧಿಕಾರಿಗಳು ಮರ್ಯಾದೆ ಕೊಡುವುದಿಲ್ಲ. ಏನೇ ಆಗಲಿ; ನಮ್ಮ ಭಾಗದಲ್ಲಿ ವಿಶೇಷವಾಗಿರತಕ್ಕ ಮಟ್ಕಾ

ಜೂಜನ್ನು ಕಡಿಮೆ ಮಾಡುವುದಕ್ಕೆ ಕಟ್ಟು ನಿಟ್ಟಿನ ನಿರ್ದೇಶನವನ್ನು ಮಾನ್ಯ ಮುಖ್ಯ ಮಂತ್ರಿಗಳು ಕೊಡಬೇಕೆಂದು ಹೇಳಿ, ನನ್ನ ಕೊದಲು ನುಡಿಗಳನ್ನು ತಮ್ಮ ಮುಂದೆ ಇಟ್ಟಿದ್ದೇನೆ; ನಮ್ಮ ಉಪನ್ಯಾಸಕರಾದ ಶ್ರೀಮತಿ ಪ್ರಮಿಳಾರವರು ನಮ್ಮ ಎದುರಿಗೇ ಕೂತಿದ್ದಾರೆ; ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ವೈ. ಪಾಟೀಲ್. (ಅಫಜಲ್‌ಪುರ)—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ನೀರಾವರಿ ಮಂತ್ರಿಗಳು ಮಂಡಿಸಿದಂಥ ಬೇಡಿಕೆಗಳ ಚರ್ಚೆಯಲ್ಲಿ ಭಾಗವಹಿಸುತ್ತಾ ಉದ್ಯೋಗ ದೃಢೀಕರಣ ಯೋಜನೆಯ ಬಗ್ಗೆ ೪-೬ ಸಲಹೆಗಳನ್ನು ತಮ್ಮ ಮುಂದೆ ಇಡುತ್ತೇನೆ. ಕೇಂದ್ರ ನಿಯೋಜಿತ ಯೋಜನೆಯಾದ ಈ ಯೋಜನೆಯನ್ನು ನಮ್ಮ ಸರ್ಕಾರದವರು ಅಳವಡಿಸಿಕೊಂಡು ನಮ್ಮ ರಾಜ್ಯದಲ್ಲಿ ಈ ಯೋಜನೆಯನ್ನು ಜಾರಿಗೆ ತಂದಿದ್ದಾರೆ ಇದು ಸ್ವಾಗತಾರ್ಹವಾದ ಸಂಗತಿ ನಮ್ಮ ರಾಜ್ಯದಲ್ಲಿ ಸುಮಾರು ೩೦ ಲಕ್ಷ ಕೃಷಿಕಾರ್ಮಿಕರಿದ್ದಾರೆ, ಮತ್ತು ೧೧ ಲಕ್ಷ ಸಣ್ಣ ಹಿಡುವಳಿದಾರರಿದ್ದಾರೆ. ಅಲ್ಲದೆ ಸುಮಾರು ೬ ಲಕ್ಷ ಜನರು ಕುಶಲಕರ್ಮಿಗಳಿದ್ದಾರೆ. ಇವರೆಲ್ಲರಿಗೂ ೬ ತಿಂಗಳು ಮಾತ್ರ ಕೆಲಸ ಇಲ್ಲಿಯವರೆವಿಗೂ ದೊರೆಯುತ್ತಿತ್ತು. ಇದರಿಂದ ಒಂದು ಹೊತ್ತಿನ ಊಟ ದೊರೆತು ಆದರಿಂದ ಜೀವನ ಮಾಡುತ್ತಿದ್ದರು. ಈಯೋಜನೆಯನ್ನು ಕರ್ನಾಟಕಸರ್ಕಾರ ಕೈಗೆ ಎತ್ತಿಕೊಂಡು ಅನುಷ್ಠಾನಕ್ಕೆತಂದಿರುವುದರಿಂದ ಬಹಳ ಜನಕ್ಕೆ ಇದರಿಂದ ಲಾಭವಾಗಿದೆ. ಆದರೂ ಇದರಲ್ಲಿ ಕೆಲವು ದೋಷಗಳು ಇರುವುದನ್ನು ತಮ್ಮ ಮುಂದೆ ಇಡುವುದಕ್ಕೆ ಇಚ್ಛೆಪಡುತ್ತೇನೆ. ಈ ಯೋಜನೆಯ ಕೆಲಸ ಕಾರ್ಯಗಳನ್ನು ಜಾರಿಗೆ ತರುವ ಜವಾಬ್ದಾರಿಯನ್ನು ತಾಲ್ಲೂಕು ಬೋರ್ಡಿಗೆ ಮತ್ತು ಲೋಕೋಪಯೋಗಿ ಇಲಾಖೆಗೆ ವಹಿಸಿದ್ದಾರೆ. ತಾಲ್ಲೂಕು ಬೋರ್ಡಿನವರು ಕೆಲಸ ಮಾಡಿಸುವುದಕ್ಕೆ ಅವರಿಗೆ ಸಿಬ್ಬಂದಿ ಇಲ್ಲ, ತಾಂತ್ರಿಕ ಸಿಬ್ಬಂದಿಯ ಕೊರತೆ ಇದೆ. ತಾಲ್ಲೂಕು ಬೋರ್ಡಿನವರಿಂದ ಕೆಲಸವಾಗುವುದಿಲ್ಲ. ಮತ್ತು ಲೋಕೋಪಯೋಗಿ ಇಲಾಖೆಯವರು ನಮಗೆ ಪ್ರಾಫಿಟ್ ಇಲ್ಲವೆಂದು ಈ ಯೋಜನೆಯ ಕೆಲಸಗಳನ್ನು ಕೈಗೆ ಎತ್ತಿಕೊಂಡಿಲ್ಲ. ಇಂಥ ಒಂದು ಪರಿಸ್ಥಿತಿಯಿಂದ ನಮ್ಮ ತಾಲ್ಲೂಕಿನಲ್ಲಿ ಈ ಯೋಜನೆಗಳ ಕೆಲಸಗಳು ಆಗಿಲ್ಲ ನಮ್ಮ ತಾಲ್ಲೂಕಿಗೆ ಸುಮಾರು ೩-೫ ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ, ಆದರಲ್ಲಿ ಒಂದು ಲಕ್ಷ ರೂಪಾಯಿ ಕೂಡ ಇದುವರೆಗೆ ಖರ್ಚಾಗಿಲ್ಲ ನಮ್ಮ ರಾಜ್ಯದಲ್ಲಿ ಸುಮಾರು ೪೦-೪೫ ತಾಲ್ಲೂಕುಗಳಿಗೆ ಈ ಯೋಜನೆಯ ಲಾಭವಾಗಿದೆ. ಸರ್ಕಾರದವರು ಸಾಕಷ್ಟು ಪ್ರಮಾಣದಲ್ಲಿ ಸಿಬ್ಬಂಧಿಯನ್ನು ಒದಗಿಸಿ ಈ ಯೋಜನೆಯು ಸಮರ್ಪಕವಾದರೀತಿಯಲ್ಲಿ ನಡೆಯುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಈ ಯೋಜನೆಯಲ್ಲಿ ಕೆಲಸ ಮಾಡುವ ಪ್ರತಿಯೊಬ್ಬ ವ್ಯಕ್ತಿಗೆ ಮೂರನೇ ಎರಡು ಭಾಗ ಆಹಾರಧಾನ್ಯ ರೂಪದಲ್ಲಿ ಹಾಗ ಮೂರನೇ ಒಂದು ಭಾಗ ದುಡ್ಡಿನ ರೂಪದಲ್ಲಿ ಕೂಲಿ ಕೊಡುವ ವ್ಯವಸ್ಥೆಯಿದೆ. ಧಾನ್ಯ ಸರಬರಾಜು ಮಾಡುವುದರಲ್ಲಿ ಅನೇಕ ರೀತಿಯ ಲೋಪದೋಷಗಳಿವೆ. ಪರ್ಮಿಟ್ ಹುಬ್ಬಳ್ಳಿಯಿಂದ ತರಬೇಕು, ಮತ್ತು ಧಾನ್ಯವನ್ನು ರಾಯಚೂರಿನಿಂದ ತರಬೇಕು. ಸರಿಯಾಗಿ ವೇಳೆಯಲ್ಲಿ ಧಾನ್ಯ ಸಿಗುತ್ತಿಲ್ಲ, ಸಿಕ್ಕಿದರೂ ಕೂಡ ಮನುಷ್ಯರು ಉಪಯೋಗಿಸುವಂತ ಧಾನ್ಯ ದೊರೆಯುತ್ತಿಲ್ಲ. ಇಂಥ ಒಂದು ಪರಿಸ್ಥಿತಿಯಾದರೆ ರೈತರು ಕಾರ್ಮಿಕರು ಹೇಗೆ ಕೆಲಸಮಾಡುವುದಕ್ಕೆ ಆಗುತ್ತದೆ. ಭೂಸಾರ ರಕ್ಷಣಾ ಇಲಾಖೆಯವರು ನಮ್ಮ ಕೆಲಸಕ್ಕೆ ತೊಂದರೆಯಾಗುತ್ತದೆಂದು ತಿಳಿದು ಈ ಕೆಲಸವನ್ನು ತೆಗೆದುಕೊಂಡಿಲ್ಲ. ಸ್ವಾಮಿ, ಈ ಸ್ಕೀಮಿಗೆ ೫ ಪರ್ಸೆಂಟ್ ಮ್ಯೆನ್‌ಟೆನೆನ್ಸ್ ಚಾರ್ಜ್ ಕೊಡುತ್ತಿದ್ದಾರೆ ಅದು ಸರಿ ಹೋಗುವುದಿಲ್ಲ. ಫ್ರೀ ಟ್ರಾನ್ಸ್‌ಪೋರ್ಟೆಷನ್ ಫೆಸಿಲಿಟೀಸ್ ಕೊಡಬೇಕೆಂದು ಹೇಳುತ್ತೇನೆ. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ರೈತ ಕಾರ್ಮಿಕರಿಗೆ ಏನು ಕೆಲಸ ಒದಗಿಸಿದ್ದೀರಿ ಅದೇ ರೀತಿ ಗ್ರಾಮೀಣ ಮಹಿಳೆಯರಿಗೂ ಕೂಡ ಕೇಂದ್ರ ಸರ್ಕಾರ ಒಂದು ನಿಲುವು ತೆಗೆದುಕೊಂಡು ಕೆಲಸ ಕೊಡಬೇಕೆಂದು ಮಾಡಿದ್ದಾರೆ. ಆದುದರಿಂದ ತಾವು ಕೂಡ ಈ ರಾಜ್ಯದಲ್ಲಿ ಗ್ರಾಮೀಣ ಮಹಿಳೆಯರಿಗೆ ಕೆಲಸ ದೊರೆಯುವಂತಹ ಒಂದು ಯೋಜನೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ, ಇನ್ನು ಮುಖ್ಯ ಮಂತ್ರಿಗಳಿಗೆ ಒಂದು ವಿಚಾರ ಹೇಳಬೇಕು ಅಂದರೆ ತಾವು ಬಂದಮೇಲೆ ಹೈದರಾಬಾದ್ ಕರ್ನಾಟಕಕ್ಕೆ ಬಹಳವು ಅನ್ಯಾಯವಾಗಿದೆ ಎಂದು ನಾನು ಈ ಸದನದಲ್ಲಿ ಹೇಳಬೇಕಾಗಿದೆ. ತಾವು ಯಾವುದೇ ರೀತಿಯಿಂದ ಅಡಿಕ್ವೇಟ್ ರೆಪ್ರುಸೆಂಟೇಷನ್ ಕೊಟ್ಟಿಲ್ಲ ಮತ್ತು ಯಾವುದೇ ಬೋರ್ಡಿನಲ್ಲಿ ನಮ್ಮ ಜನರಿಗೆ ತೆಗೆದುಕೊಂಡಿಲ್ಲ, ಮಂತ್ರಿಗಳಿಗೂ ಕೂಡ ಹೆಚ್ಚಾಗಿ ರೆಪ್ರುಸೆಂಟೇಷನ್ ಕೊಟ್ಟಿಲ್ಲ. ಈ ರೀತಿ ಅನ್ಯಾಯವಾಗಿದೆ. ಇನ್ನು ನೀರಾವರಿ ಯೋಜನೆಗಳ ಬಗ್ಗೆ ಹೇಳಬೇಕೆಂದರೆ ಮೊದಲು ವೀರೇಂದ್ರ ಪಾಟೀಲರ ಆಡಳಿತದಲ್ಲಿ ನೀರಾವರಿ ಬಗ್ಗೆ ಸಾಕಷ್ಟು ಕೆಲಸಗಳು ನಡೆದಿತ್ತು. ತಾವು ಹೋದ ವರ್ಷಕ್ಕಿಂತ ಈವರ್ಷಕಡಿಮೆ ಹಣವನ್ನು

ಒದಗಿಸಿದ್ದೀರಿ. ಇನ್ನು ಈ ಅಪ್ಪರ್ ಕೃಷ್ಣ ಯೋಜನೆ ಏನಿದೆ, ಅಂದರೆ ಇದರ ಒಂದು ಭ್ರಷ್ಟಾಚಾರ ತಪ್ಪು ಎದುರಿಗೆ ಬಂದಿರಬಹುದು. ಹಿಂದಿನ ಇಬ್ಬರು ಮುಖ್ಯ ಮಂತ್ರಿಗಳ ಮೇಲೆ ಶರಾವತಿ ಕರ್ಮಕಾಂಡ ಆದಂತೆ ಅದೇ ಪ್ರಕಾರ ತಮ್ಮ ಮೇಲೆ ಈ ಅಪ್ಪರ್ ಕೃಷ್ಣಾ ಕರ್ಮಕಾಂಡ ಬರಬಹುದು ಎಂದು ತಮಗೆ ಸೂಚನೆ ಕೊಡುತ್ತಿದ್ದೇನೆ ಏಕೆಂದರೆ ಅಲ್ಲಿ ಇಂಜಿನಿಯರ್ಸ್ ಹೋದವರೆಲ್ಲಾ ತಮಗೆ ಬೇಕಾದ ಕಂಟ್ರಾಕ್ಟರ್ಸ್ ಕರೆದುಕೊಂಡು ಹೋಗಿ ಬೇಕಿಲ್ಲದ ಕೆಲಸ ಮಾಡುತ್ತಿದ್ದಾರೆ ಟೆಂಡರ್ಸ್ ತಿದ್ದುವ ಉದಾಹರಣೆಗಳು ಕೂಡ ಇವೆ. ಇದರ ಬಗ್ಗೆ ನಾನು ಹೇಳುತ್ತಿಲ್ಲ, ಪತ್ರಿಕೆಗಳಲ್ಲಿ ಇದರ ಬಗ್ಗೆ ವಿಚಾರಗಳು ಬರುತ್ತಿವೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ಅಪ್ಪರ್ ಕೃಷ್ಣ ಬಗೆ ಸಮಗ್ರವಾಗಿ ಎನ್‌ಕ್ವಯಿರಿಮಾಡಿ ಅಲ್ಲಿ ಏನು ನಡೆದಿದೆ ಎನ್ನುವುದನ್ನು ಈಸದನಕ್ಕೆ ತಿಳಿಸಬೇಕು. ಮಾನ್ಯ ಮುಖ್ಯಮಂತ್ರಿಗಳು ಎಲ್ಲಿ ನೀರು ಕಾಣುತ್ತದೆ ಅಲ್ಲಿ ಯೋಜನೆ ಮಾಡುತ್ತಾರೆಂದು ಬಹಳಷ್ಟು ಸದಸ್ಯರು ಹೇಳಿದರು. ಆದರೆ ನನ್ನ ಕಾನ್‌ಸ್ಟಿಟ್ಯುಯೆನ್ಸಿಯಲ್ಲಿ ಒಂದು ದೊಡ್ಡ ಭೀಮಾನದಿ ಹರಿಯುತ್ತದೆ. ಆದರೆ ಇದುವರೆಗೂ ಯಾವ ಯೋಜನೆಗಳನ್ನು ತೆಗೆದುಕೊಂಡಿಲ್ಲ. ಈಗ ಆರನೇ ಪ್ಲಾನ್‌ನಲ್ಲಿ ಎಸ್ಟಿಮೇಟ್ ತಯಾರು ಮಾಡಿದ್ದೇವೆಂದು ಹೇಳುತ್ತಾರೆ. ನನ್ನ ಕಾನ್‌ಸ್ಟಿಟ್ಯುಯೆನ್ಸಿಯ ಅಬ್ಜಲ್‌ಪುರ ತಾಲ್ಲೂಕಿನ ಸೊನ್ನಾ ಗ್ರಾಮದಲ್ಲಿ ಲಿಫ್ಟ್ ಇರಿಗೇಷನ್ನಿಗೆ ಪ್ರಪೋಸ್ ಆಗಿದೆ. ಎಸ್ಟಿಮೇಟ್ ಕೂಡ ಆಗಿದೆ ಅದಕ್ಕೆ ಹಣ ಮಾತ್ರ ಈ ಬಡ್ಜೆಟ್ಟಿನಲ್ಲಿ ಇಟ್ಟಿಲ್ಲ. ೨೨ ಸಾವಿರ ಎಕರೆ ಭೂಮಿ ನೀರಾವರಿಯಾಗುತ್ತದೆ. ಇದಕ್ಕೆ ೨೦ ಕೋಟಿ ರೂಪಾಯಿ ವೆಚ್ಚ ಇದೆ. ಕೃಷ್ಣಾ ಬೇಸಿನ್ ಮೇಲೆ ನೀರು ಕೂಡ ದೊರೆಯುವ ಸಾಧ್ಯತೆ ಇದೆ. ಈ ಒಂದು ಯೋಜನೆಯನ್ನು ಪೂರ್ತಿಗೊಳಿಸಿದಲ್ಲಿ ಬಯಲು ಸೀಮೆ ಜನರಿಗೆ ಬರಗಾಲಪೀಡಿತ ಜನರಿಗೆ ತಮ್ಮ ಆಡಳಿತ ಅವಧಿಯಲ್ಲಿ ಅನುಕೂಲ ಮಾಡಿಕೊಡುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಇವೊತ್ತು ತಾವು ಎಲ್ಲರಿಗೂ ಕೊಡುಗೈ ಆಗಿದ್ದೀರಿ ಅದೇ ರೀತಿ ಬರಗಾಲ ಪೀಡಿತ ಪ್ರದೇಶದವರಿಗೆ ಕೊಡುಗೈ ಆಗಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈಗ ನಮ್ಮ ರಾಜ್ಯದ ವಿಚಾರ ಹೇಳಬೇಕು ಅಂದರೆ ಈ ಭ್ರಷ್ಟಾಚಾರ ಎನ್ನತಕ್ಕದ್ದು ಎಲ್ಲಾ ರಾಜ್ಯಗಳಿಗಿಂತಲೂ ಹೆಚ್ಚಾಗಿದೆ ಎಂದು ಹೇಳುತ್ತೇನೆ. ಇವೊತ್ತು ಶ್ರೀಮಂತರು ಮಾತ್ರ ಒಳ್ಳೆಯ ಸರ್ಕಾರ ಎಂದು ಬೀದಿಯಲ್ಲಿ ಮಾತನಾಡುತ್ತಿದ್ದಾರೆ. ದುಡ್ಡು ಕೊಟ್ಟರೆ ಆಗಬಾರದ ಕೆಲಸಗಳು ಆಗುತ್ತದೆಂದು ಜನರು ಮಾತನಾಡುತ್ತಿದ್ದಾರೆ. ಈಗ ತಾವು ರಾಷ್ಟ್ರ ನಾಯಕರಾಗಿದ್ದೀರಿ. ಆದುದರಿಂದ ತಾವು ಇಂತಹ ಅಪವಾದಕ್ಕೆ ಗುರಿಯಾಗದೆ ಆಡಳಿತದಲ್ಲಿ ಭ್ರಷ್ಟಾಚಾರ ಕಡಿಮೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ರಾಜ್ಯ ಯಾವರೀತಿ ಇದೆ ಎಂದರೆ ಒಂದು ಕತೆ ಜ್ಞಾಪಕಕ್ಕೆ ಬರುತ್ತದೆ ಒಂದು ಸಾರಿ ನಾಲ್ಕ ಮಂದಿ ಕಳ್ಳರು ಕಲೆತು ಒಬ್ಬ ಜ್ಯೋತಿಷ್ಯನ ಬಳಿ ಹೋಗಿ ಏನು ಸ್ವಾಮಿ, ಈ ರಾಜ್ಯದಲ್ಲಿ ಬ್ರಾಹ್ಮಣರು ರಾಜ್ಯಭಾರ ಮಾಡಿದರು ಕ್ಷತ್ರಿಯರು ರಾಜ್ಯಭಾರ ಮಾಡಿದರು ಮುಸಲ್ಮಾನರು ರಾಜ್ಯಭಾರ ಮಾಡಿದರು ಆದರೆ ಕಳ್ಳರ ರಾಜ್ಯ ಯಾವಾಗ ಬರುತ್ತದೆಂದು ಕೇಳಿದರಂತೆ. ಆಗ ಜ್ಯೋತಿಷ್ಯ ಹೇಳಿದ್ದು ೧೯೭೨ನೇ ಇಸವಿಯಲ್ಲಿ ಶ್ರೀಮಾನ್ ದೇವರಾಜ್ ಅರಸ್ ಅವರ ನೇತೃತ್ವದಲ್ಲಿ ರಾಜ್ಯ ಬರುತ್ತದೆ ಆಗ ಕಳ್ಳರಿಗೆ ರಕ್ಷಣೆ ಸಿಕ್ಕುತ್ತದೆಂದು ಹೇಳಿದನಂತೆ. ಆದುದರಿಂದ ತಾವು ಆಡಳಿತವನ್ನು ಸುವ್ಯವಸ್ಥಿತ ರೀತಿಯಲ್ಲಿ ಮಾಡಿ' ಈ ಭ್ರಷ್ಟಾಚಾರ ಕಡಿಮೆ ಮಾಡಿದರೆ ತಮ್ಮ ಕೀರ್ತಿ ಮತ್ತಷ್ಟು ಹೆಚ್ಚುತ್ತದೆ ಎಂದು ಹೇಳಿ ಈಗ ಅಧ್ಯಕ್ಷರು ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜೆ. ಕೆ. ಕಾಳೆ. (ಮುಧೋಳ)—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಸಣ್ಣ ನೀರಾವರಿ ಖಾತಾ ಮಂತ್ರಿಗಳು ನಮ್ಮ ಮುಂದಿಟ್ಟಿರತಕ್ಕ ಬೇಡಿಕೆಗಳನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾ ನನ್ನ ಒಂದೆರಡು ಸಲಹೆಗಳನ್ನು ಕೊಡಬಯಸುತ್ತೇನೆ. ಅಧ್ಯಕ್ಷರೇ, ನಾನು ಘಟಪ್ರಭಾ ಯೋಜನೆಯ ಒಂದು ಕ್ಷೇತ್ರಕ್ಕೆ ಒಳಪಟ್ಟು ಬಂದವನಾಗಿದ್ದೇನೆ. ಈ ಒಂದು ಘಟಪ್ರಭಾ ಯೋಜನೆಗೆ ಸುಮಾರು ೧೫೦ ಕೋಟಿ ರೂಪಾಯಿಗಿಂತಲೂ ಹೆಚ್ಚು ಖರ್ಚುಮಾಡಿ ೩೦–೩೫ ಹಳ್ಳಿಗಳನ್ನು ಮುಳುಗಿಸಿ ಅವರಿಗೆ ಹೆಚ್ಚಿನ ಒಂದು ಪರಿಹಾರ ಧನವನ್ನು ಒದಗಿಸಿ, ನಮ್ಮ ಸರ್ಕಾರ ಬಹಳ ಹುಮ್ಮಸ್ಸಿನಿಂದ ಈ ಯೋಜನೆಯನ್ನು ಪೂರ್ತಿಗೊಳಿಸಬೇಕೆಂದಿದ್ದಾರೆ. ಈ ಕ್ಷೇತ್ರದಲ್ಲಿ ಪ್ರತಿವರ್ಷ ರೈತ ಎರಡು ಬೆಳೆಗಳನ್ನು ಬೆಳೆಯುವಂತಹ ಅನುಕೂಲವಾಗಿದೆ. ಆದರೆ ಈ ಒಂದು ಕ್ಷೇತ್ರದಲ್ಲಿ ರೈತರ ಪರಿಸ್ಥಿತಿ, ಈಗಿನ ಒಂದು ಸಮಸ್ಯೆ ಬಹಳ ಚಿಂತಾಜನಕವಾಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಈ ಕ್ಷೇತ್ರದಲ್ಲಿ ಬರತಕ್ಕ ರೈತರ ಜಮೀನುಗಳಿಗೆ ಬೆಟರ್ಮೆಂಟ್ ಲೆವಿ ವಾಟರ್ ಟ್ಯಾಕ್ಸ್ ಹಾಕುವುದರಲ್ಲಿ ಒಂದು ಸ್ವಲ್ಪ ಲೋಪದೋಷ ಆಗಿದೆ ಎಂದು ನಾನು ಹೇಳಬಯಸುತ್ತೇನೆ. ಮಾರ್ಚ್ ಒಂದನೇ ತಾರೀಖಿನ ದಿವಸ ಮಾನ್ಯ ಮುಖ್ಯ ಮಂತ್ರಿಗಳು

ನಮ್ಮ ಬಿಜಾಪುರ ಜಿಲ್ಲೆಗೆ ಭೇಟಿ ಕೊಟ್ಟಾಗ ನಮ್ಮ ತಾಲ್ಲೂಕಿನ ರೈತರು ಸುಮಾರು ಒಂದು ತಿಂಗಳವರೆಗೆ ಉಪವಾಸ ಸತ್ಯಾಗ್ರಹ ಕೈಗೊಂಡು ಬೆಟರ್‌ಮೆಂಟ್ ಲೆವಿ ಮತ್ತು ನಿರುಪಯುಕ್ತ ಭೂಮಿಗಳ ಬಗ್ಗೆ ಒಂದು ಪರಿಹಾರ ಕಲ್ಪಿಸಿಕೊಡುವಲ್ಲಿ ಸರ್ಕಾರಕ್ಕೆ ಮನವಿ ಮಾಡಿಕೊಂಡು ಸುಮಾರು ಒಂದು ತಿಂಗಳವರೆಗೆ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದರು. ಈ ವಿಷಯವಾಗಿ ಮುಖ್ಯ ಮಂತ್ರಿಗಳು, ಮತ್ತು ಆಫೀಸರ್‌ಗಳ ಜೊತೆ ರೈತರು ೨-೩ ಗಂಟೆಗಳ ಕಾಲ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ್ದಕ್ಕೆ ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ವಿಚಾರ ಮಾಡಿ ಪರಿಹಾರ ಒದಗಿಸುವ ಬಗ್ಗೆ ಹೇಳಿದ್ದರು. ಆದರೆ ಇದುವರೆಗೂ ಯಾವ ಪರಿಣಾಮವಾಗಿಲ್ಲ ಎನ್ನುವುದು ಕಂಡುಬರುತ್ತಿದೆ. ಇನ್ನೊಮ್ಮೆ ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಯ ಪೂರ್ವಕವಾಗಿ ಕೇಳಿಕೊಳ್ಳುವುದೇನೆಂದರೆ ರೈತರ ಸಮಸ್ಯೆಗಳ ಬಗ್ಗೆ ಅವರು ಕಣ್ಣಾರೆ ನೋಡಿ ಬಂದಿದ್ದ ಭಾಗವನ್ನು ನೋಟಿಫೈಡ್ ಏರಿಯಾ ಎಂದು ಮಾಡಿ ಬೆಟರ್‌ಮೆಂಟ್ ಲೆವಿಯನ್ನು ಹಾಕಿದ್ದಾರೆ ಕೆಲವು ಕಡೆ ಜಮೀನು ಹೈಲೆವೆಲ್‌ನಲ್ಲಿದ್ದು ನೀರಾವರಿ ಆಗುವುದಕ್ಕೆ ಅವಕಾಶವೇ ಇರುವುದಿಲ್ಲ. ಸುಮಾರು ೧೫-೨೦ ಎಕರೆ ಜಮೀನು ಒಬ್ಬ ರೈತನಿಗೆ ಇದ್ದರೆ ಅದರ ಪೈಕಿ ಕೇವಲ ೨-೩ ಎಕರೆ ಮಾತ್ರ ನೀರಾವರಿ ಆಗುವಂಥಾದ್ದು ಇರುತ್ತದೆ ಆದರೆ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಇಡೀ ೧೫-೨೦ ಎಕರೆಗೂ ಲೆವಿಯನ್ನು ಹಾಕಿದ್ದಾರೆ. ಆದ್ದರಿಂದ ಈ ಒಂದು ಅಸಮಾನತೆಯನ್ನು ಹೋಗಲಾಡಿಸಲು ಮಾನ್ಯ ಮುಖ್ಯಮಂತ್ರಿಯವರು ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

೫-೦೦ ಪಿ.ಎಂ.

ಮಾನ್ಯ ಅಧ್ಯಕ್ಷರೇ, ಇನ್ನೊಂದು ವಿಚಾರ ಹೇಳುವುದಾದರೆ ಕೃಷ್ಣಾ ಮೇಲ್ದಂಡೆ ಮೇಲೆ ಹಿಪ್ಪರಗಿ ಅಣೆಕಟ್ಟನ್ನು ಕೈಗೊಂಡಿದ್ದಾರೆ. ಮೊದಲು ಈ ಯೋಜನೆಗಾಗಿ ೧೮ ಕೋಟಿ ರೂಪಾಯಿಗಳ ಅಂದಾಜನ್ನು ಮಾಡಲಾಗಿತ್ತು. ಆದರೆ ಇದು ಸಕಾಲದಲ್ಲಿ ಆಗದೇ ಹೋದುದರಿಂದ ಈಗ ಕಬ್ಬಿಣದ ಬೆಲೆ ಸಿಮೆಂಟಿನ ಬೆಲೆ ಜಾಸ್ತಿಯಾಗಿ ಆ ಅಂದಾಜು ಈಗ ೪೪ ಕೋಟಿ ೮೩ ಸಾವಿರಕ್ಕೆ ಬಂದಿದೆ. ಆದ್ದರಿಂದ ನಾನು ಹೇಳುವುದೇನೆಂದರೆ. ಯಾವ ಯೋಜನೆಗಳನ್ನೇ ಸರ್ಕಾರದವರು ಕೈಕೊಂಡರೂ ತಕ್ಷಣ ಸಕಾಲದಲ್ಲಿ ಅದನ್ನು ಮುಗಿಸುವುದಕ್ಕೆ ಪ್ರಯತ್ನಿಸಿದರೆ ಈ ರೀತಿಯಲ್ಲಿ ಹೆಚ್ಚು ಹಣವನ್ನು ಖರ್ಚುಮಾಡುವುದು ಸರ್ಕಾರಕ್ಕೆ ಉಳಿಯುತ್ತದೆಂದು ಹೇಳಬಯಸುತ್ತೇನೆ ಕೃಷ್ಣಾ ಮೇಲ್ದಂಡೆ ಯೋಜನೆ ಕೆಳಗೆ ಆಲಮಟ್ಟಿ ಯೋಜನೆ ಬರುವುದರಿಂದ ಈಗ ಹಿಪ್ಪರಗಿ ಯೋಜನೆಗೆ ಬಹಳ ಕಡಿಮೆ ಹಣವನ್ನು ಅಂದರೆ ಸುಮಾರು ೨೦ ಲಕ್ಷ ರೂಗಳನ್ನು ಒದಗಿಸಿದ್ದಾರೆ. ಈ ಕೆಲಸಮಾಡಲು ಒಂದು ವರ್ಷ ಸಾಕಾಗುವುದಿಲ್ಲ ಎಂದು ನನಗನಿಸುತ್ತದೆ. ಹಿಪ್ಪರಗಿ ಡ್ಯಾಂ ಎತ್ತರಕ್ಕೆ ಈ ಆಲಮಟ್ಟಿ ಡ್ಯಾಂನ್ನು ಎತ್ತರಿಸಬೇಕೆಂದು ತಾವು ಏನು ಯೋಜನೆ ಹಾಕಿಕೊಂಡಿದ್ದೀರಿ. ಇದರಿಂದ ಹಿಪ್ಪರಗಿ ಡ್ಯಾಂನಲ್ಲಿ ನೀರು ನಿಲ್ಲುವುದಕ್ಕೆ ಬಹಳ ಅನಾನುಕೂಲವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸ್ವಾಮಿ, ಇನ್ನೊಂದು ಬೇಡಿಕೆ ಏನೆಂದರೆ, ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ವರ್ಕ್ ಛಾರ್ಜ್ ನೌಕರರ ಬಗ್ಗೆ ೨-೩ ಸಾರಿ ಈ ಸದನದಲ್ಲಿ ಆಶ್ವಾಸನೆ ಕೊಟ್ಟಿದ್ದಾರೆ ಈ ಪ್ರಾಜೆಕ್ಟ್ ಏರಿಯಾದಲ್ಲಿ ಕೆಲಸಮಾಡತಕ್ಕ ಗ್ಯಾಂಗ್‌ಮೆನ್ ಮೆಕಾನಿಕ್ಸ್, ಜೀಪ್ ಡ್ರೈವರ್ಸ್ ಇನ್ನೂ ಇತರೆ ಕೆಲಸಗಳಲ್ಲಿ ಬಿಸಿಲು, ಮಳೆ. ಗಾಳಿಗಳಲ್ಲಿ ಕೆಲಸಮಾಡತಕ್ಕ ಶ್ರಮಜೀವಿಗಳಿಗೆ ಸರಿಯಾದ ಪ್ರತಿಫಲ ಸಿಕ್ಕುತ್ತಿಲ್ಲ. ಅವರನ್ನು ಸಾಕಷ್ಟು ದುಡಿಸಿಕೊಂಡು ಅವರನ್ನು ಖಾಯಂ ಮಾಡದೆ. ಪೆನ್‌ಷನ್ ಕೊಡದೆ ಗ್ರ್ಯಾಚುಯಿಟಿ ಎಂದು ಸ್ವಲ್ಪ ಹಣವನ್ನು ಕೊಟ್ಟು ಕಳುಹಿಸುತ್ತಿದ್ದಾರೆ. ಆದ್ದರಿಂದ ಮಾನ್ಯ ಸಚಿವರು ಈ ನೌಕರರ ಶ್ರಮವನ್ನು ಗಣನೆಗೆ ತೆಗೆದುಕೊಂಡು ಇವರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಇನ್ನು ಕೊನೆಯದಾಗಿ ಒಂದು ವಿಷಯ ಏನೆಂದರೆ ಪೋಲಿಸ್ ಖಾತೆ ವಿಚಾರ ನಮ್ಮ ಸಮಾಜವನ್ನು ಸುವ್ಯವಸ್ಥಿತವಾಗಿ ಕಾದುಕೊಂಡು ಬರಬೇಕಾದರೆ ಪೋಲಿಸ್ ಖಾತೆಯ ಪಾತ್ರ ಮುಖ್ಯವಾದುದು. ಈ ಪೋಲಿಸ್ ಖಾತೆಯ ಬಗ್ಗೆ ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಸಾಕಷ್ಟು ಪ್ರಮಾಣದಲ್ಲಿ ಟೀಕೆ ಹಾಗೂ ಆರೋಪಗಳನ್ನು ಮಾಡಿದ್ದಾರೆ. ಅಂದರೆ ರಾಜಕೀಯ ಟೀಕೆಗಳನ್ನು ಮಾಡಿ ಈ ಖಾತೆಯವರನ್ನು ರಾಜಕೀಯಕ್ಕೆ ಎಳೆಯುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಈ ಒಂದು ಖಾತೆಯನ್ನು ರಾಜಕೀಯಕ್ಕೆ ಎಳೆಯದೆ ಇವರು ದಕ್ಷತೆಯಿಂದ ಸಮಾಜದ ರಕ್ಷಣೆಯನ್ನು ಮಾಡಿಕೊಂಡು ಹೋಗಲು ಮತ್ತು ಸ್ವತಂತ್ರವಾಗಿ ಕೆಲಸಮಾಡಲು ವ್ಯವಸ್ಥೆ ಮಾಡುವುದು ಒಳ್ಳೆಯದೆಂದು ನನಗನಿಸುತ್ತದೆ. ಕಳೆದ ಡಿಸೆಂಬರ್ ೧೯ನೇ ತಾರೀಖು ಶ್ರೀಮತಿ ಇಂದಿರಗಾಂಧಿಯವರನ್ನು ಬಂಧಿಸಿದಾಗ ಜಮಖಂಡಿ, ಬಾಗಲ

ಕೋಟೆ ಇನ್ನು ಕೆಲವು ಕಡೆಗಳಲ್ಲಿ ಹಲವಾರು ಅಕೃತ್ಯಗಳು ನಡೆದುವು. ಆಗ ಪೋಲಿಸರ ಸ್ಥಿತಿಯನ್ನು ನೋಡಿ ನನಗೆ ಅನುಕಂಪವಾಯಿತು. ಕಾರಣ, ಕೆಲವು ಗುಂಪಿನ ಜನ ಉದ್ರೇಕದಿಂದ ಈ ಪೋಲಿಸರನ್ನು ಲಾಠಿಗಳಿಂದ ತಿವಿದು ಅಸಭ್ಯ ಮಾತುಗಳನ್ನಾಡುತ್ತಿದ್ದರು. ಈ ರೀತಿಯ ಹಲ್ಲೆ ಪೋಲಿಸರ ಮೇಲೆ ನಡೆದಾಗ ಇದನ್ನೆಲ್ಲಾ ಸಹಿಸಿಕೊಂಡಿದ್ದ ಪೋಲಿಸರು ೨೦ನೇ ತಾರೀಖು ನೊಂದ ಮನಸ್ಸಿನಿಂದ ಏನು ಹೇಳುತ್ತಿದ್ದರು ಎಂದರೆ ನಾವು ಹಿಂದಿನ ಜನ್ಮದಲ್ಲಿ ಏನೋ ಪಾಪ ಮಾಡಿದುದ್ದರಿಂದ ಈಗ ಈ ಖಾತೆಗೆ ಸೇರಿದ್ದೇವೆ ಎಂದು. ಇನ್ನೊಂದು ಗುಂಪಿನವರು ಏನು ಹೇಳುತ್ತಿದ್ದರು ಎಂದರೆ ಈ ರೀತಿ ಅತಿಕ್ರಮಗಳು ಅಕೃತ್ಯಗಳು ನಡೆಯುತ್ತಿದ್ದರೂ ಪೋಲಿಸರು ಯಾವಕ್ರಮವನ್ನೂ ತೆಗೆದುಕೊಳ್ಳಲಿಲ್ಲ ಎಂದು ಮತ್ತೊಂದು ಗುಂಪಿನವರು ಹೇಳಿದ್ದು ಈ ಗುಂಪನ್ನು ನೀವು ಹೆದರಿಸಿದರೆ ಬೆಂಕಿಇಟ್ಟುಸುಟುಬಿಡುತ್ತೇವೆ ಎಂದು ಆದ ರಿಂದ ನಾನು ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುವುದೇನೆಂದರೆ ಈ ಪೋಲಿಸ್ ಇಲಾಖೆ ದಕ್ಷತೆಯಿಂದ ಸ್ವತಂತ್ರವಾಗಿ ತಮ್ಮ ಕೆಲಸವನ್ನು ಮಾಡಿಕೊಂಡು ಸಮಾಜದ ಶಾಂತಿಯನ್ನು ಕಾದುಕೊಂಡು ಹೋಗುವ ಸಲುವಾಗಿ ಅವರ ಮೇಲೆ ಯಾವ ನಿರ್ಬಂಧವನ್ನೂ ಹಾಕಬಾರದೆಂದು ಹೇಳಿ ಇಲ್ಲಿಯವರೆಗೂ ಇಷ್ಟು ಮಾತುಗಳನ್ನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಮಳ್ಳೂರು ಆನಂದರಾವ್ (ರಾಜಾಜಿನಗರ).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಯವರು ಸುಮಾರು ೧೭ ಡಿಮ್ಯಾಂಡ್‌ಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಈ ಬೇಡಿಕೆಗಳಿಗೆ ನನ್ನ ಒಪ್ಪಿಗೆಯನ್ನು ಕೊಡುವುದಕ್ಕೆ ಮುಂಚಿತವಾಗಿ ನನ್ನ ಒಂದೇ ಒಂದು ಡಿಮ್ಯಾಂಡನ್ನು ಮಾನ್ಯ ಮುಖ್ಯ ಮಂತ್ರಿಗಳ ಒಪ್ಪಿಗೆಗಾಗಿ ಇಡಬೇಕೆಂದಿದ್ದೇನೆ. ನನ್ನ ಡಿಮ್ಯಾಂಡ್ ಏನೆಂದರೆ, ಮಾನ್ಯ ಮುಖ್ಯ ಮಂತ್ರಿಯವರು ರಾಷ್ಟ್ರದ ನಿರ್ಮಾಣ ಕಾರ್ಯದಲ್ಲಿ ತೊಡಗಿರುವುದರಿಂದ ಅವರ ಕೆಲಸದ ಹೊಣೆಗಾರಿಕೆ ಬಹಳ ಜಾಸ್ತಿಯಾಗಿದೆ. ರಾಷ್ಟ್ರದ ರಾಜಕೀಯದಲ್ಲಿ ಅವರು ಬಹಳ ಮಹತ್ತರವಾದ ಪಾತ್ರವನ್ನು ವಹಿಸುತ್ತಿರುವುದರಿಂದ ರಾಜ್ಯದ ಆಡಳಿತದ ಬಗ್ಗೆ ಸಾಕಷ್ಟು ಗಮನಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಯವರು ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟು ರಾಜಕೀಯ ಪಾತ್ರದಲ್ಲಿ ವಿಲೀನವಾಗಬೇಕೆಂಬುದು ನನ್ನ ಒಂದೇ ಒಂದು ಡಿಮ್ಯಾಂಡ್. ನಾನು ಇದನ್ನು ಹೇಳುವುದಕ್ಕೆ ಕಾರಣವಾದರೂ ಏನೆಂದರೆ ಮಾನ್ಯ ಮುಖ್ಯ ಮಂತ್ರಿಯವರ ಇವತ್ತಿನ ಬೇಡಿಕೆ ೨೬೭ ಕೋಟಿ ರೂಪಾಯಿಗಳಿದ್ದು. ಇಷ್ಟು ಹಣ ರಾಜ್ಯದ ಬೇರೆ ಬೇರೆ ಭಾಗಗಳಿಗೆ ಇವರ ಖಾತೆಯಿಂದ ಹರಿದು ಹೋಗುತ್ತಿದೆ. ಅಂದರೆ ಒಟ್ಟು ನಮ್ಮ ಬಡ್ಜೆಟ್‌ನಲ್ಲಿ ಮೂರನೇ ಒಂದು ಪಾಲು ಬಡ್ಜೆಟ್ ಸಿಂಹಪಾಲು ಅವರ ಮುಖಾಂತರ ಹರಿದು ಹೋಗುತ್ತಿದೆ. ಇಷ್ಟೊಂದು ಹಣವನ್ನು ಖರ್ಚುಮಾಡತಕ್ಕಂಥ ಒಬ್ಬ ಮುಖ್ಯ ಮಂತ್ರಿಯವರು, ಅವರು ಎಷ್ಟು ಸಮಯವನ್ನು ಅವರು ವಹಿಸಿಕೊಂಡಿರುವ ಖಾತೆಗಳಿಗೆ ವಿನಿಯೋಗಿಸಬೇಕು ಎನ್ನುವುದನ್ನು ಬಹಳ ಮುಖ್ಯವಾಗಿ ಯೋಚಿಸಬೇಕಾದ ಪ್ರಶ್ನೆಯಾಗಿರುತ್ತವೆ. ಸ್ವಾಮಿ ಇದರಲ್ಲಿ ಸುಮಾರು ಹದಿನಾಲ್ಕು ಡಿಮ್ಯಾಂಡ್‌ಗಳು ನೇರವಾಗಿ ಅವರಿಗೆ ಸಂಬಂಧಪಟ್ಟಿದ್ದಾಗಿರುತ್ತದೆ. ಅದು ಬಹಳ ಮೇಜರ್ ಡಿಮ್ಯಾಂಡ್‌ಗಳೇ ಆಗಿರುತ್ತದೆ. ಹಿಂದಿನಸಲ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಒಂದು ಆರ್ಟಿಕಲ್ ಬಂದಿತ್ತು. ಅದೇನೆಂದರೆ ಕಳೆದ ವರ್ಷ ಮಾನ್ಯ ಮುಖ್ಯ ಮಂತ್ರಿಗಳು ಕರ್ನಾಟಕ ರಾಜ್ಯದಲ್ಲಿ ಇದ್ದಂಥ ದಿನಗಳು ೪೫ ದಿವಸಗಳು ಮಾತ್ರ ಎಂದು ಕೊಟ್ಟಿದ್ದರು. ಮಾನ್ಯ ಮುಖ್ಯ ಮಂತ್ರಿಗಳು ಕೇವಲ ೪೫ ದಿವಸಗಳನ್ನು ಕರ್ನಾಟಕ ರಾಜ್ಯಕ್ಕೆ ಮೀಸಲಾಗಿಟ್ಟರೆ ರಾಜ್ಯದ ಕೆಲಸವನ್ನು ಹೇಗೆ ಮಾಡಲು ಸಾಧ್ಯವಾಗುತ್ತದೆಂದು ಕೇಳುತ್ತೇನೆ. ಕೇವಲ ಇವರಷ್ಟಕ್ಕೆ ಮಾತ್ರ ಹೇಳುತ್ತಿಲ್ಲ ಇನ್ನೂ ಬೇರೆ ಬೇರೆ ಮಂತ್ರಿಗಳೂ ಕೂಡ ಆಡಳಿತದ ಬಗ್ಗೆ ಎಷ್ಟು ಲಕ್ಷ್ಯವನ್ನು ಕೊಡಬೇಕೋ ಅಷ್ಟು ಲಕ್ಷ್ಯವನ್ನು ಕೊಡುತ್ತಿಲ್ಲ. ಮಂತ್ರಿಗಳು ಹಣದ ಡಿಮ್ಯಾಂಡ್ ಇಡುತ್ತಾರೆ, ನಾವು ಭಾಷಣವನ್ನು ಮಾಡುತ್ತೇವೆ, ಆದರೆ ಆಡಳಿತ ಯಂತ್ರ ಹಾಗೆಯೇ ನಡೆಯುತ್ತಿರುತ್ತದೆ. ಇಷ್ಟೊಂದು ಅಲಕ್ಷ್ಯದಿಂದ ನಡೆದುಕೊಳ್ಳುತ್ತಿರುವ ಮಂತ್ರಿಮಂಡಲ ಹಿಂದೆ ಎಂದೂ ಬಂದಿರಲಿಲ್ಲ, ಅದರಲ್ಲೂ ಮಂತ್ರಿಗಳ ಸ್ಥಾನ ಮುಖ್ಯಮಂತ್ರಿಗಳ ಸ್ಥಾನ ಒಂದು ಮಹತ್ತರವಾದ ಪೀಠವಾಗಿದೆ. ಆಡಳಿತ ದುರುಪಯೋಗಿ ಮಾಡಿಕೊಳ್ಳಲಿಕ್ಕೆ ತಮ್ಮ ರಾಜ್ಯಕೀಯ ವ್ಯಕ್ತಿತ್ವ ತಮ್ಮ ಗುಂಪು, ತಮ್ಮ ಜಾತಿ, ಇವುಗಳನ್ನು ಬೆಳೆಸಿಕೊಳ್ಳುವುದರಲ್ಲಿ ಅನೇಕ ಮಂತ್ರಿಗಳು ತೊಡಗಿದ್ದಾರೆಂದು ಹೇಳಿದರೆ ತಪ್ಪಾಗಲಾರದು, ಇದರ ದುಷ್‌ಪರಿಣಾಮ ಎಲ್ಲಿಯವರೆಗೆ ಹೋಗಿದೆ ಎಂದರೆ ಇಡಿ ಜನರಲ್ ಅಡ್ಮಿನಿಸ್ಟ್ರೇಷನ್ ರಾಜ್ಯದ್ದು ಏನು ಇರುತ್ತದೆ, ಅದರಲ್ಲಿ ಯಾವ ಒಂದು ಉತ್ಸಾಹದಿಂದ ಇರಬೇಕೋ ಆ ಒಂದು ಉತ್ಸಾಹ

ಇಲ್ಲ, ಆ ಒಂದು ಕಳಕಳಿ ಇಲ್ಲ. ಇಷ್ಟೊಂದು ಟೋಟಲ್ ಬಡ್ಜೆಟ್ ಹರಿದು ಹೋಗಬೇಕಾದರೆ ಇದನ್ನು ಸಾಮಾನ್ಯ ಜನರಿಗೆ ತೆಗೆದುಕೊಂಡು ಹೋಗಿ ಮುಟ್ಟಿಸತಕ್ಕಂಥ ಜವಾಬ್ದಾರಿ ಅಧಿಕಾರಿಗಳಿಗಷ್ಟೇ ಅಲ್ಲ ಅಧಿಕಾರಿಗಳಿಗೆ ಹೆಡ್ ಆಗಿ ಇರುವಂಥ ಮಂತ್ರಿಗಳು ಕೂಡ ಸ್ವಲ್ಪ ಕುಳಿತು ಇಲಾಖೆಯ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ನಮ್ಮ ಇಲಾಖೆಗೆ ಸಂಬಂಧಪಟ್ಟ ಹಾಗೆ, ಜನ ಸಾಮಾನ್ಯರಿಗೆ ಏನೇನು ಸಮಸ್ಯೆಗಳು ಇವೆ ಅದನ್ನು ಅರ್ಥಮಾಡಿಕೊಂಡು ಇಡಿ ಇಲಾಖೆಯನ್ನು ಗೇರ್ ಅಪ್ ಮಾಡಿ ಇಲ್ಲಿ ಒಪ್ಪಿಕೊಂಡು ಕೊಟ್ಟಿರತಕ್ಕಂಥ ಹಣ ಸಾಮಾನ್ಯ ವ್ಯಕ್ತಿಗೆ ಮುಟ್ಟಿಸುವಂಥ ರೀತಿಯಲ್ಲಿ ಮಂತ್ರಿಗಳು ಉತ್ತರ ಕೊಡ ತಕ್ಕಂಥ ರೀತಿಯಲ್ಲಿ ಕೆಲಸವನ್ನು ಮಾಡಬೇಕಾಗಿರುತ್ತದೆ, ಆದರೆ ಅನೇಕ ಮಂತ್ರಿಗಳು ಆ ರೀತಿ ಕೆಲಸ ಮಾಡುತ್ತಿಲ್ಲ. ಎಲ್ಲ ಮಂತ್ರಿಗಳ ಮೇಲೂ ನಾನು ಆಪಾದನೆ ಮಾಡುತ್ತಾ ಇಲ್ಲ. ಬಹುತೇಕ ಮಂತ್ರಿಗಳು ಈ ರೀತಿ ಮಾಡುತ್ತಿದ್ದಾರೆ. ತಮ್ಮ ಮಂತ್ರಿ ಸ್ಥಾನವನ್ನು ಉಪಯೋಗಿಸಿಕೊಂಡು ತಮ್ಮ ವ್ಯಕ್ತಿತ್ವವನ್ನು ಬೆಳೆಸಿ ಕೊಂಡಿರತಕ್ಕಂಥ ನೇರವಾದ ಚಾರ್ಜಸ್ ಇರುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಕರ್ನಾಟಕ ರಾಜ್ಯದ ಸಮಸ್ಯೆಗಳನ್ನು ಪರಿಹಾರ ಮಾಡುವುದರ ಬಗ್ಗೆ ಎಷ್ಟು ಆಸಕ್ತಿಯನ್ನು ವಹಿಸಬೇಕೋ, ಎಷ್ಟು ಕಾಳಜಿಯನ್ನು ವಹಿಸಬೇಕೋ ಅಷ್ಟು ವಹಿಸುತ್ತಿಲ್ಲವೆಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಅವರನ್ನು ನೋಡಬೇಕು ಎಂದರೆ ಅವರು ಎಲ್ಲಿ ಸಿಕ್ಕುತ್ತಾರೆ. ಅವರ ವ್ಯಕ್ತಿತ್ವ ಕರ್ನಾಟಕ ರಾಜ್ಯದಲ್ಲಷ್ಟೇ ಅಲ್ಲ ಇಡಿ ಭಾರತ ದೇಶಕ್ಕೆ ವ್ಯಾಪಿಸಿರುತ್ತದೆ. ಖಂಡಿತವಾಗಿಯೂ ಅದಕ್ಕೆ ಸಂತೋಷ ಪಡೋಣ. ಕೇವಲ ಮೂರುವರೆ ಕೋಟಿ ಜನಸಂಖ್ಯೆಗೆ ಅಲ್ಲ. ಇಡಿ ರಾಷ್ಟ್ರಕ್ಕೆ ಅವರು ಬೇಕಾಗಿರುವುದರಿಂದ ದಯವಿಟ್ಟು ಅವರು ರಾಜೀನಾಮೆಯನ್ನು ಕೊಡಬೇಕೆಂದು ಹೇಳುತ್ತೇನೆ. ಅವರ ಪಾರ್ಟಿ ವಿಷಯವಾಗಿ ಮಾತನಾಡುವುದು ಅಷ್ಟು ಚೆನ್ನಾಗಿ ಇರುವುದಿಲ್ಲ. ಸುಮಾರು ಒಂದು ವರ್ಷದಿಂದ ಮಾನ್ಯ ಮುಖ್ಯ ಮಂತ್ರಿಯವರನ್ನು ನೋಡಬೇಕೆಂದು ಪ್ರಯತ್ನ ಮಾಡುತ್ತಿದ್ದೇನೆ. ಅವರು ಎಲ್ಲಿ ಸಿಕ್ಕುತ್ತಾರೆ. ನಮಗೆ ಈ ಎಂಟು ದಿವಸಗಳಿಂದ ಸಿಕ್ಕುತ್ತಿದ್ದಾರೆ. ವಿಶೇಷ ರಾಜಕೀಯ ಪರಿಸ್ಥಿತಿಗೆ ಸಿಕ್ಕಿಕೊಂಡಿರುವುದರಿಂದ. ನಿಮ್ಮ ಪಾರ್ಟಿಮೀಟಿಂಗ್ ವಗೈರೆ ವಗೈರೆ ಇವೆಲ್ಲ ಪತ್ರಿಕೆಗಳಲ್ಲಿ ಬಂದಿರುತ್ತದೆ. I do not want interfer in your party affairs. But as a legislators we have got every right to see the Chief Minister. He should be available to us. ಎಲ್ಲಿಯೂ ಮಾನ್ಯ ಮಂತ್ರಿಗಳು ಸಿಕ್ಕುವುದಿಲ್ಲ. ಫೋನ್ ಮಾಡಿದರೂ ಅವರು ಸಿಕ್ಕುವುದಿಲ್ಲ. ಈವತ್ತು ರಜನಿಪಟೇಲ್‌ರವರ ಜೊತೆಯಲ್ಲಿ ಟೀ ಯನ್ನು ತೆಗೆದುಕೊಳ್ಳುತ್ತಾರೆ. ನಮ್ಮ ಪಾರ್ಟಿ ಚಂದ್ರಶೇಖರ್‌ರವರ ಮನೆಯಲ್ಲಿ ಊಟ ಮಾಡುತ್ತಾರೆ ಇದೇ.........

(ಮೂರು ನಾಲ್ಕು ಜನ ಸದಸ್ಯರು ಒಟ್ಟಿಗೆ ನಿಂತು ಮಾತನಾಡಲು ಎದ್ದು ನಿಲ್ಲುವರು)

ಅಧ್ಯಕ್ಷರು.—ನೀವು ಯಾರು ಉತ್ತರವನ್ನು ಕೊಡಬೇಕಾಗಿಲ್ಲ. ಅವರೇ ಉತ್ತರವನ್ನು ಕೊಡುತ್ತಾರೆ. ಎಲ್ಲರು ಕುಳಿತುಕೊಳ್ಳಿ.

ಮಳ್ಳೂರು ಆನಂದರಾವ್.—ಇಡಿ ಸರ್ಕಾರವನ್ನು ನೋಡಿಕೊಳ್ಳುವ ಯಜಮಾನರೇ ಇಲ್ಲದಿದ್ದರೆ ಮನೆಯ ವ್ಯವಸ್ಥೆ ಹೇಗೆ ನಡೆಯಬೇಕು. Are you happy about this state of affairs ? ನಮಗಷ್ಟೇ ಅಲ್ಲ ನಿಮಗೆ ಎಷ್ಟು ಜನಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸಿಕ್ಕುತ್ತಿದ್ದಾರೆಂದು ಕೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಕ್ಯಾಬಿನೆಟ್ ಡಿಸ್‌ಕಷನ್ ತೆಗೆದುಕೊಳ್ಳುವುದಕ್ಕೆ ಇಲ್ಲದಿದ್ದರೆ ನೀವು ಏನು ತೆಗೆದುಕೊಳ್ಳುವುದು. ಅವರು ತುರ್ತು ಕೆಲಸದಲ್ಲಿ ವಹಿಸಬೇಕಾದ ಕಾಳಜಿ ೧೦ ಪರ್ಸೆಂಟ್ ಇದ್ದರೆ ೯೦ ಪರ್ಸೆಂಟ್ ಪಾರ್ಟಿ ಅಫೇರ್ಸಿಗೆ ವಹಿಸುತ್ತಿದ್ದಾರೆ. ಶ್ರೀಮತಿ ಇಂದಿರಾಗಾಂಧಿ, ಬೀಜು ಪಾಟ್ನಾಯಕ್, ಚಂದ್ರಶೇಖರ್ ಇವರೊಡನೆ ವ್ಯವಹಾರ ನಡೆಸುತ್ತಿರುತ್ತಾರೆ. ಅವರ ಕ್ಯಾಪಿಟಲ್ ಎಲ್ಲಿ ಎಂದು ಕೇಳುತ್ತೇನೆ, ಅವರನ್ನೇ ಕೇಳುತ್ತೇನೆ ಕರ್ನಾಟಕ ರಾಜಧಾನಿಯೋ ಎಂದು. ಅವರು ಎಲ್ಲಿಗೆ ಹೋಗುತ್ತಾರೆ ಏನು ಮಾಡುತ್ತಿರುತ್ತಾರೆ ಎನ್ನುವುದು ನಿಮಗೂ ಗೊತ್ತಿರುತ್ತದೆ, ಅವರಿಗೂ ಗೊತ್ತಿರುತ್ತದೆ. ನನ್ನ ಕಾಳಜಿ ಏನು ಎಂದರೆ ಮಾನ್ಯ ಮುಖ್ಯಮಂತ್ರಿಗಳು ನನಗೆ ಸಿಕ್ಕುತ್ತಿಲ್ಲವೆನ್ನುವುದೇ ಆಗಿರುತ್ತದೆ. He has to play a very historic role. You please shift him to Delhi ಎಂದು ಹೇಳುತ್ತೇನೆ. ಡೆಲ್ಲಿಯಲ್ಲಿ ಕರ್ನಾಟಕ ಭವನದಲ್ಲಿ ಅವರು ಸಿಕ್ಕುತ್ತಾರೆ. ಬೆಂಗಳೂರಿನಲ್ಲಿ ಸಿಕ್ಕುವುದಿಲ್ಲ. ಅವರಷ್ಟೇ ಅಲ್ಲ ಇನ್ನಿತರ ಮಂತ್ರಿಗಳೂ ಡೆಲ್ಲಿಯಲ್ಲೇ ಕುಳಿತುಕೊಂಡಿರುತ್ತಾರೆ 'ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ' ಎಂದು ಹೇಳಿದ ಹಾಗೆ. ನನ್ನ ಕ್ಷೇತ್ರ ಪ್ರಕಾಶನಗರ. ಅಲ್ಲಿ ಸುಮಾರು ೩೦ ಸಾವಿರ ಜನಸಂಖ್ಯೆ ಇರತಕ್ಕಂಥ ಪ್ರದೇಶ

ವಾಗಿರುತ್ತದೆ. ಅದನ್ನು ಗಣಿಗಾರಿಕೆ ಇಲಾಖೆಯಿಂದ ಕಾರ್ಪೋರೇಷನ್‌ರವರೇ ತೆಗೆದುಕೊಳ್ಳಬೇಕೆ ಅಥವಾ ಬಿ.ಡಿ.ಎ. ತೆಗೆದುಕೊಳ್ಳಬೇಕೆ ಎನ್ನುವ ವಿಷಯದ ಬಗ್ಗೆ ರೆಸಲ್ಯೂಷನ್ ಮಾಡಿ ನಾಲ್ಕು ರಿಮೈಂಡರ್ ಹಾಕಿರುತ್ತೇನೆ. ನಾನು ಕಳೆದ ವರ್ಷ ಈ ಸದನದಲ್ಲಿ ೩೦ ಸಾವಿರ ಜನರ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ವೈಯಕ್ತಿಕವಾಗಿ ಲೆಟರ್‌ನ್ನೂ ಕೂಡ ಬರೆದಿರುತ್ತೇನೆ. ಮಿನಿಸ್ಟರ್‌ರವರಿಗೂ ಬರೆದಿದ್ದೇನೆ. ೩೦ನೇ ಜನವರಿ ಪತ್ರಿಕೆಯಲ್ಲೂ ಕೂಡ ಬಂದಿರುತ್ತದೆ. ತೀವ್ರವಾಗಿ ರಸ್ತೆಗಳಲ್ಲಿ ಗಲೀಜು ಆಗುತ್ತಿರುವುದನ್ನು ನೋಡಬೇಕೆಂದು ಮಂತ್ರಿಗಳನ್ನು ಕೂಡ ಕೇಳಿಕೊಂಡಿರುತ್ತೇನೆ. ಬಿ.ಡಿ.ಎ. ಮುಖ್ಯಮಂತ್ರಿಗಳ ಪೋರ್ಟ್ ಪೊಲಿಯೋ ಇರುತ್ತವೆ. ಅವರು ಇದನ್ನೆಲ್ಲ ಎಲ್ಲಿ ನೋಡಲು ಸಾಧ್ಯವಾಗುತ್ತದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕಾದರೆ ವರ್ಷದಲ್ಲಿ ಕರ್ನಾಟಕ ರಾಜಧಾನಿಯಲ್ಲಿ ಎಷ್ಟು ದಿನಗಳು ಇರುತ್ತಾರೆಂಬುದನ್ನು ದಯವಿಟ್ಟು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಒಳ್ಳೆಯ ಸಮಯ ನೋಡಿ ಮಂತ್ರಿಮಂಡಲವನ್ನು ವಿಸ್ತರಿಸುವುದಕ್ಕೆ ಹೊರಟಿದ್ದೀರಿ. ಮತ್ತೆ ಒಬ್ಬೊಬ್ಬರನ್ನೇ ಕರೆದು ಅವರಿಗೆ ಊಟ ಕೊಟ್ಟು ಬೆನ್ನು ಚಪ್ಪರಿಸಿ, ಕಳುಹಿಸುತ್ತಿದ್ದೀರಿ, ಮಂತ್ರಿಯನ್ನಾಗಿ ಯಾರನ್ನು ಮಾಡುವುದು ಎಂಬುದನ್ನು ನಿಶ್ಚಯ ಮಾಡುವುದನ್ನು ನಿಮಗೆ ಬಿಟ್ಟಿದ್ದಾರೆ. ನೀವು ರಾಜಕಾರಣದಲ್ಲಿ ಬಹಳ ಪರಿಣಿತರು. ದಯಮಾಡಿ ನಮ್ಮನ್ನು ಕರೆಸಿಕೊಳ್ಳಿ, ನಮಗೆ ಸಂದರ್ಶನ ಕೊಡಿ ನಿಮ್ಮಿಂದ ಯಾವ ಸಹಾಯವನ್ನು ಕೇಳುವುದಕ್ಕೆ ನಾವು ಬರುವುದಿಲ್ಲ. ಜನಗಳಿಗೆ ಸಂಬಂಧಪಟ್ಟಂತಹ ಸಮಸ್ಯೆಗಳನ್ನು ತೆಗೆದುಕೊಂಡು ಬಂದು ನಿಮ್ಮ ಮುಂದೆ ಇಡುತ್ತೇವೆ. ಕನ್ನಡ ನಾಡಿನ ಜನತೆಯ ಪರವಾಗಿ ನಾನು ಈ ಮಾತನ್ನು ಕೇಳುತ್ತಿದ್ದೇನೆ. ಈ ರಾಜ್ಯದ ಮುಖ್ಯ ಮಂತ್ರಿಗಳಾದ ನೀವು ಶಾಸಕರಾದ ನಮಗೆ ನೀವು ಸಿಗಬೇಕು. ನಾವು ಪ್ರಯತ್ನ ಮಾಡಿದರೂ ನೀವು ಸಿಗುವುದೇ ಇಲ್ಲ.

ಶ್ರೀ ವಿ. ಬಿ. ಭಾವಿ.—ಮಾನ್ಯ ಸದಸ್ಯರಾದ ಶ್ರೀಮಾನ್ ಮಳ್ಳೂರು ಆನಂದರಾಯರು ಯಾವ ಬೇಡಿಕೆಯ ಮೇಲೆ ಮಾತನಾಡುತ್ತಿದ್ದಾರೆ ?

ಶ್ರೀ ಮಳ್ಳೂರು ಆನಂದರಾವ್.—ಜನರಲ್ ಅಡ್ಮಿನಿಸ್ಟ್ರೇಷನ್ ಡಿಪಾರ್ಟ್‌ಮೆಂಟ್‌ನ ಮೇಲೆ ಹಾಗೂ ಡಿಮ್ಯಾಂಡ್ ನಂ. ೧೯ರ ಮೇಲೆ ಮಾತನಾಡುತ್ತಿದ್ದೇನೆ. ಸ್ಪಷ್ಟವಾಗಿ ಹೇಳಬೇಕೆಂದರೆ ಮಾನ್ಯ ಮುಖ್ಯ ಮಂತ್ರಿಗಳು ಕೂಡಲೇ ರಾಜೀನಾಮೆಯನ್ನು ಕೊಡಬೇಕು. ಕರ್ನಾಟಕದಲ್ಲಿ ಜನತೆಯ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ವಿಫಲರಾಗಿದ್ದಾರೆ. ಕಳೆದ ವರ್ಷ ೪೫ ದಿವಸ ಮಾತ್ರ ರಾಜ್ಯದ ರಾಜಧಾನಿಯಲ್ಲಿದ್ದಾರೆಂದರೆ ಇದು ಮುಖ್ಯ ಮಂತ್ರಿಗಳಿಗೆ ಶೋಭೆ ತರತಕ್ಕಂತಹದ್ದಲ್ಲ. ಜನತೆಯ ಪ್ರತಿನಿಧಿಗಳಾಗಿ ಅಧಿಕಾರಕ್ಕೆ ಬಂದ ನೀವು ರಾಜಧಾನಿಯಲ್ಲಿ ಇಲ್ಲದೇ ಇರುವುದರಿಂದ.

ಶ್ರೀ ಡಿ. ಟಿ. ರಾಮು.—೪೫ ದಿವಸ ಇದ್ದಾರೆಂದು ಸುಳ್ಳು ಮಾಹಿತಿಯನ್ನು ಕೊಡುತ್ತಿದ್ದಾರೆ.

ಶ್ರೀ ಮಳ್ಳೂರು ಆನಂದರಾವ್.—ಸತ್ಯಕ್ಕೆ ದೂರವಾದ ಮಾತನ್ನು ನಾನು ಹೇಳುತ್ತಿದ್ದೇನೆಂದು ಮಾನ್ಯ ಸದಸ್ಯರಾದ ಶ್ರೀ ಮಾನ್ ಡಿ. ಟಿ. ರಾಮುರವರು ಹೇಳುತ್ತಿದ್ದಾರೆ. ಮಾನ್ಯ ಸದಸ್ಯರು ಪತ್ರಿಕೆಯನ್ನು ಓದತಕ್ಕಂತಹ ಅಭ್ಯಾಸವನ್ನು ಇಟ್ಟುಕೊಂಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಅವರ ರಾಜಕೀಯ ಚಟುವಟಿಕೆಗಳನ್ನು ನಾವು ನೋಡುತ್ತಿದ್ದೇನೆ. ರಾಜ್ಯದಲ್ಲಿ ಎಲ್ಲಿ ಇರುತ್ತಾರೆ ? ಇರುವುದಕ್ಕೆ ಸಾಧ್ಯವಿಲ್ಲ. ಒಂದು ಗ್ರೋವರ್ ಆಯೋಗದ ವರದಿ ಮತ್ತೊಂದು ಶ್ರೀಮತಿ ಇಂದಿರಾ ಗಾಂಧಿಯವರ ಜೊತೆ ಫೈಟ್ ಮಾಡುತ್ತಿದ್ದಾರೆ. ಅವರು ಫೈಟ್ ಮಾಡಿಕೊಂಡು ಹೊರಗಡೆಗೆ ಹೋಗಲಿ, ಬೇಕಾದರೆ ದೆಹಲಿಯಲ್ಲೇ ಇರಲ್ಲಿ, ನಮ್ಮ ಅಭ್ಯಂತರ ಇಲ್ಲ. ಅವರ ಸ್ಥಾನದಲ್ಲಿ ಬೇರೆ ಯಾರಾದರೊಬ್ಬರನ್ನು ಮುಖ್ಯ ಮಂತ್ರಿಯಾಗಿ ಮಾಡಿ ಬಿಡಲಿ ಅವರು ಕೂಡ ಸಾಲಾಗಿದ್ದಾರೆ. ಅಥವಾ ಒಬ್ಬರೋ ನಾರೆ ಅಥವಾ ಇಬ್ಬರನ್ನಾದರೂ ಡೆಪ್ಯುಟಿ ಚೀಫ್ ಮಿನಿಸ್ಟರ್ ಎಂಬುದಾಗಿಯಾದರೂ ಮಾಡಿ. ನಾವು ಅವರು ನೋಡಿ ಕೊಳ್ಳುತ್ತೇವೆ. ಇದನ್ನು ಮಾಡುವುದಕ್ಕೆ ಮಾತ್ರ ನೀವು ತಯಾರಾಗಿಲ್ಲ. ಮನೆಯ ಯಜಮಾನ ಇಲ್ಲದಿದ್ದರೆ ಮನೆಯ ವ್ಯವಸ್ಥೆ ಹೇಗೆ ನಡೆಯಬೇಕು ?

ಶ್ರೀ ಡಿ. ಟಿ. ರಾಮು.—ನಿಮ್ಮ ಮನೆಗಳಾದ ಬಿಹಾರ್ ಹಾಗೂ ಉತ್ತರ ಪ್ರದೇಶದ ವ್ಯವಸ್ಥೆಗಿಂತ ಚೆನ್ನಾಗಿದೆ.

ಶ್ರೀ ಮಳ್ಳೂರು ಆನಂದರಾವ್.—ರಾಜಕೀಯ ಭಾಷಣ ಮಾಡುವುದಿಲ್ಲ. ರಾಜಕೀಯ ಭಾಷಣ ಮಾಡುವುದಕ್ಕೆ ವೇದಿಕೆ ಇದೆ. ನಾನು ಅನೇಕ ಸಲ ಪ್ರಯತ್ನ ಮಾಡಿದ್ದೇನೆ. ಮುಖ್ಯಮಂತ್ರಿಗಳನ್ನು

ನೋಡುವುದಕ್ಕಾಗಲಿಲ್ಲ. ಕಾರಣ ಅವರು ರಾಜ್ಯದಲ್ಲಿ ಇದ್ದರೆ ತಾನೆ, ಕಮೀಷನರ್ ಫಾರ್ ಚಾರಿಟಬಲ್ ಅಂಡ್ ಎಂಡೋಮೆಂಟ್ ಇಲಾಖೆಯೂ ಕೂಡ ಅವರಲ್ಲಿಯೇ ಇದೆ, ಮತ್ತೆ ಬಿ.ಡಿ.ಎ. ಕೂಡ ಅವರೇ ಇಟ್ಟುಕೊಂಡಿದ್ದಾರೆ. ಈ ಬಗ್ಗೆ ನೋಡಬೇಕೆಂದು ಪ್ರಯತ್ನ ಮಾಡಿದೆ. ಆದರೆ ಅವರು ನನಗೆ ಸಿಗಲೇ ಇಲ್ಲ. ಶಾಸಕರದ ನಮಗೆ ಸಿಗಬೇಕು. ಅಥವಾ ಬದಲಿ ವ್ಯವಸ್ಥೆ ಮಾಡಿ ಅವರು ದೆಹಲಿಗೆ ಬೇಕಾದರೂ ಹೋಗಲಿ, ಲಂಡನ್ನಿಗೆ ಬೇಕಾದರೂ ಹೋಗಲಿ. ಕಳೆದ ಸಾರಿ ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಎಷ್ಟೋ ಸಲಹೆಗಳನ್ನು ಮಾಡಿದ್ದೆ, ಅವುಗಳನ್ನು ಕಾರ್ಯಾಚರಣೆಗೆ ತರುವುದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ? ನನ್ನಲ್ಲಿ ಅಂಕಿ ಅಂಶಗಳು ಬೇಕಾದಷ್ಟು ಇವೆ. ಆದರೆ ಸಮಯದ ಅಭಾವದಿಂದ ಎಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಮನೋ ಭೂಮಿಕೆಯನ್ನು ಹೇಳುವುದರಲ್ಲೇ ಅರ್ಧ ಗಂಟೆಯಾಯಿತು.

ಶ್ರೀ ಮಳ್ಳೂರು ಆನಂದರಾವ್.—೧೦ ನಿಮಿಷವನ್ನು ನೀವೇ ತೆಗೆದುಕೊಂಡಿದ್ದೀರಿ. ರಾಜ್ಯದ ಆಡಳಿತದ ಬಗ್ಗೆ ಹೇಳುವುದಾದರೆ, ಭ್ರಷ್ಟಾಚಾರ ಸರ್ವ ವ್ಯಾಪಕವಾಗಿದೆ ಎಂಬುದಾಗಿ ಹೇಳುತ್ತಿದ್ದೇನೆ. ಲಂಚ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಜಾತೀಯತೆ, ಈ ನಾಲ್ಕು ರೋಗಗಳು ಏನಿವೆ, ಇವು ನಮ್ಮ ರಾಜ್ಯದಲ್ಲಿ ಸಂಪೂರ್ಣವಾಗಿ ಹಾಸು ಹೊಕ್ಕಾಗಿವೆ. ಇದನ್ನು ತೆಗೆದುಹಾಕುವುದರ ಬಗ್ಗೆ ಏನಾದರೂ ಪ್ರಯತ್ನ ಮಾಡಿದ್ದೀರಾ ? ನೀವು ನಾವು ಒಟ್ಟಿಗೆ ಸೇರಿ ಕೊಂಡು ಮಾಡಬೇಕಾಗಿದೆ. ಇವರಲ್ಲಿ ನಾವು ಬೇರೆ ನೀವು ಬೇರೆ ಎಂಬುದಾಗಿ ಹೇಳುವುದಿಲ್ಲ. ಇದರ ಬದಲು ಹೆಚ್ಚು ಹೆಚ್ಚು ಜಾತೀಯತೆಯನ್ನು ಬೆಳೆಸತಕ್ಕಂತಹ ಪ್ರಯತ್ನವನ್ನು ನಿಮ್ಮ ಕಡೆಯಿಂದ, ನಿಮ್ಮ ಮಂತ್ರಿಗಳ ಕಡೆಯಿಂದ ಅದರಲ್ಲೂ ಶ್ರೀಮಾನ್ ಹಾವನೂರುರವರು ಇದರಲ್ಲಿ ಬಹಳ ಪ್ರಭಾವಿತರಾಗಿದ್ದಾರೆ. ಅದರ ಬಗ್ಗೆ ವಿವರಣೆಯನ್ನು ಹೇಳುವ ಅಗತ್ಯ ಇಲ್ಲ. ಕಾರಣ ತಮಗೇ ಗೊತ್ತಿದೆ. ಭ್ರಷ್ಟಾಚಾರ, ಲಂಚ ಇಲ್ಲದೆ ಕೆಲಸವಾಗತಕ್ಕಂತಹ ಇಲಾಖೆ ಯಾವುದಾದರೂ ಇದೆ ಎಂಬುದನ್ನು ತೋರಿಸುತ್ತೀರಾ ? ಯಾವುದೇ ಇಲಾಖೆಯಾಗಲಿ, ಬೆಂಗಳೂರು ನಗರ ಕಾರ್ಪೊರೇಷನ್ ಆಗಲಿ, ಬಿ.ಡಿ.ಎ. ಆಗಲಿ, ವಿದ್ಯಾ ಇಲಾಖೆಯಲ್ಲಾಗಲಿ, ಲಂಚ ಇಲ್ಲದೆ ಕೆಲಸ ಮಾಡುತ್ತದೆ ಎಂಬುದಾಗಿ ತೋರಿಸುತ್ತೀರಾ ? ವಿದ್ಯಾ ಇಲಾಖೆಯ ಬಗ್ಗೆ ಮಾಲ್ಕುಗಳನ್ನೇ ತಮ್ಮ ಮುಂದಿಟ್ಟೆ, ಎಲ್ಲಿ ಭ್ರಷ್ಟಾಚಾರ ಇರಬಾರದು ಅಲ್ಲಿ ಭ್ರಷ್ಟಾಚಾರ ಇದೆ ಎಂಬುದಾಗಿ ಹೇಳಿದೆ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.—ಅದನ್ನೆಲ್ಲಾ ವಿಜಿಲೆನ್ಸ್ ಕಮಿಷನ್‌ಗೆ ಒಪ್ಪಿಸಿಬಿಟ್ಟಿದೆವಲ್ಲಾ ;

ಶ್ರೀ ಮಳ್ಳೂರು ಆನಂದರಾವ್.—ವಿಜಿಲೆನ್ಸ್‌ನಲ್ಲೂ ಭ್ರಷ್ಟಾಚಾರ ನಡೆಯುತ್ತಿದೆ. ಇಡೀ ಆಡಳಿತವನ್ನು ಭ್ರಷ್ಟಾಚಾರದಿಂದ ವಿಮುಕ್ತ ಮಾಡುವುದಕ್ಕೆ ತಾವು ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ? ಸಾಮಾನ್ಯವಾಗಿ ಯಾವ ಆಫೀಸಿಗೆ ಹೋಗಿ ಲಂಚವನ್ನು ಕೊಡದೆ ಕೆಲಸವನ್ನು ಮಾಡಿಕೊಂಡು ಬರತಕ್ಕಂತಹ ವ್ಯವಸ್ಥೆ ಇದೆ ಎಂಬುದಾಗಿ ಹೇಳುತ್ತೀರಾ ? ಉದಾಹರಣೆಗೆ ಕಂದಾಯ ಇಲಾಖೆಯ ಬೆಂಗಳೂರು ಉತ್ತರ ಹಾಗೂ ದಕ್ಷಿಣ ತಾಲ್ಲೂಕಿನ ತಹಸೀಲ್ದಾರ್ ಆಫೀಸಿಗೆ ಬೇಕಾದರೆ ಹೋಗಿ ನೋಡಿ. ಮೀನಿನ ಮಾರ್ಕೆಟ್ ಇದ್ದ ಹಾಗೆ ಇದೆ. ಆದರೆ ನಾನು ಮೀನಿನ ಮಾರ್ಕೆಟ್ ಒಳಗಡೆ ಹೋಗಿಲ್ಲ. ಆದರೆ ಸಿಟಿ ಮಾರ್ಕೆಟ್ ಒಳಗಡೆ ಹೋಗಿದ್ದೇನೆ, ಅಲ್ಲಿಯಾದರೂ ಸ್ವಲ್ಪ ಪರವಾಯಿಲ್ಲ. ಸರ್ಟಿಫಿಕೇಟಿಗೆ ಸಹಿ ಹಾಕಬೇಕಾದರೂ ಲಂಚ. ಒಳಗಡೆ ಬಿಡುವುದೇ ಇಲ್ಲ. ಅಲ್ಲಿ ಹೋಗುವವರು ಯಾರು ಎಂದರೆ ಸಾಮಾನ್ಯ ವರ್ಗದವರು. ದೊಡ್ಡ ದೊಡ್ಡವರು ಫೋನ್ ಮಾಡಿ ನಂತರ ಬಂದು ಕೆಲಸ ಮಾಡಿಸಿಕೊಂಡು ಹೋಗುತ್ತಾರೆ. ಈ ರೀತಿ ರೆವಿನ್ಯೂ ಇಲಾಖೆ ಒಂದರಲ್ಲೇ ಅಲ್ಲ, ಬೇರೆ ಬೇರೆ ಇಲಾಖೆಗಳಲ್ಲೂ ಹೀಗೆ ಇದೆ. ಬಿ.ಡಿ.ಎ. ನಲ್ಲಿ ಲಂಚ ಕೊಡದೆ ಕೆಲಸ ಮಾಡಿಸಿಕೊಂಡು ಬರುವುದಕ್ಕೆ ಸಾಧ್ಯವೇ ಇಲ್ಲ. ಅಷ್ಟೊಂದು ಡೈರೆಕ್ಟಾಗಿ ಲಂಚವನ್ನು ತೆಗೆದುಕೊಳ್ಳುತ್ತಿದ್ದಾರೆ, ಇದು ವಿಧಾನ ಸೌಧದಿಂದ ಹಿಡಿದು, ತಾಲ್ಲೂಕು, ಗ್ರಾಮ ಮಟ್ಟದವರೆಗೂ ಇದೇ ವ್ಯವಸ್ಥೆ ಇದೆ.

ಇನ್ನು ಸರ್ಕಾರಿ ನೌಕರರ ಬಗ್ಗೆ ಹೇಳುವುದಾದರೆ. ಬಡ್ಜೆಟ್ಟನ್ನು ನಾವೂ ನೋಡುತ್ತಿದ್ದೇವೆ. ರಾಜ್ಯದ ಒಟ್ಟು ಬಡ್ಜೆಟ್ಟಿನಲ್ಲಿ ಅರ್ಧ ಭಾಗ ಅವರಿಗಾಗಿಯೇ ಖರ್ಚು ಮಾಡುತ್ತಿದ್ದೇವೆ. ಅವರಿಗೆ ಸಾಕಷ್ಟು ಸಂಬಳ ಸಾಗಿಗೆ ಕೊಡುತ್ತಿದ್ದೇವೆ. ರಕ್ಷಣೆ ಕೊಟ್ಟಿದ್ದೇವೆ. ಅವರ ಅನುಕೂಲಕ್ಕಾಗಿ ನಾವೂ ಕೂಡ ವಾದ ಮಾಡಿದ್ದೇವೆ. ಪ್ರತಿಯೊಂದು ಇಲಾಖೆಯನ್ನೂ ಹೆಚ್ಚು ಹೆಚ್ಚಾಗಿ ಎಕ್ಸ್‌ಪ್ಯಾಂಡ್ ಮಾಡುತ್ತಿದ್ದಾರೆ. ಇದೂ ಅಲ್ಲದೆ ಜೊತೆಯಲ್ಲಿ ನೂರೆಂಟು ಕಾರ್ಪೊರೇಷನ್‌ಗಳನ್ನು ಬೇರೆ ಮಾಡುತ್ತಿದ್ದೀರಿ

ಇದಕ್ಕೆಲ್ಲಾ ಅಧಿಕಾರಿಗಳನ್ನು ನೇಮಿಸಿದ್ದೀರಿ, ಇಷ್ಟೆಲ್ಲಾ ಅನುಕೂಲ ಮಾಡಿಕೊಟ್ಟಿದ್ದರೂ ಒಬ್ಬೊಬ್ಬ ಅಧಿಕಾರಿ ತನ್ನ ತನ್ನ ಕೆಲಸವನ್ನು ಸರಿಯಾಗಿ ಮಾಡಿಕೊಂಡು ಹೋಗುತ್ತಿದ್ದಾರೆಯೋ ಎನ್ನುವುದು ಇವಾಲ್ಯುವೇಟ್ ಮಾಡುವುದಕ್ಕೆ ಏನಾದರೂ ಪ್ರಯತ್ನ ಮಾಡಿದ್ದೀರಾ ? ಬೆಳಗ್ಗೆ ೧೦-೩೦ ಕೂಡ ಎಲ್ಲಾ ಕಛೇರಿಯ ಕುರ್ಚಿಗಳು ಖಾಲಿ ಇರುತ್ತವೆ. ಅಟೆಂಡೆನ್ಸ್‌ಗೆ ಸಹಿ ಮಾಡಿ ಹೊರಗಡೆ ಅಡ್ಡಾಡುತ್ತಿರುತ್ತಾರೆ. ಯಾವ ಕಛೇರಿಯಲ್ಲಾದರೂ ಹೋಗಿ ನೋಡಿ. ೧೦-೩೦ ಆಗಿದ್ದರೂ ಕೂಡ ಕುರ್ಚಿಗಳು ಖಾಲಿಯಾಗಿಯೇ ಇರುತ್ತವೆ. ಕಾರಣ ಮಂತ್ರಿಗಳೇ ಇರುವುದಿಲ್ಲ, ನಾವು ಏಕೆ ಇರಬೇಕು ; ಅವರ ಮೇಲಾಧಿಕಾರಿಯೂ ಕೂಡ ಕುರ್ಚಿಯಲ್ಲಿ ಇರುವುದೇ ಇಲ್ಲ. ಬೆಳಗ್ಗೆ ೧೦ ೩೦ ರಿಂದ ಸಂಜೆ ೫-೩೦ರ ವರೆಗೆ ಇದರಲ್ಲಿ ಮಧ್ಯಾಹ್ನ ೧-೩೦ ರಿಂದ ೨-೪೫ರ ವರೆಗೆ ಲಂಚ ಪಿರಿಯೆಡ್ ಬಿಟ್ಟು ಇನ್ನುಳಿದ ಸಮಯದಲ್ಲಿ ಕುರ್ಚಿಯಲ್ಲಿ ಕುಳಿತು ಕೆಲಸ ಮಾಡುವಂತಹ ವ್ಯವಸ್ಥೆ ಮಾಡುವುದರ ಬಗ್ಗೆ ಏನಾದರೂ ಪ್ರಯತ್ನ ಮಾಡಿದ್ದೀರಾ ? ದಯಮಾಡಿ ಈ ಕೆಲಸವನ್ನು ಮೊದಲು ಮಾಡಬೇಕು. ೮ ಗಂಟೆಗಳ ಕಾಲ ಕುರ್ಚಿಯಲ್ಲಿ ಕುಳಿತು ತನ್ನ ಕೆಲಸವನ್ನು ತಾವು ಮಾಡಬೇಕು. ಹೊರಗಡೆ ಎದ್ದು ಹೋಗಬಾರದು. ಈ ರೀತಿಯ ವ್ಯವಸ್ಥೆ ತಕ್ಷಣ ಆಗಬೇಕು. ಮತ್ತೆ ಆಫೀಸಿನ ಸುತ್ತ ಮುತ್ತ ಇರುವ ಕಾಫಿ, ಟೀ, ಹಾಗೂ ಹೋಟೆಲ್‌ಗಳನ್ನು ಲಂಚ ಪಿರಿಯೆಡ್‌ನಲ್ಲಿ ಮಾತ್ರ ತೆಗೆಯಬೇಕು. ಉಳಿದ ಸಮಯದಲ್ಲಿ ಅವುಗಳನ್ನು ದಯಮಾಡಿ ಮುಚ್ಚಿಸಿಬಿಡಿ. ಮತ್ತೆ ಸಾರ್ವಜನಿಕರು ಮೇಲಿನ ಅಧಿಕಾರಿಯನ್ನು ನೋಡುವುದಕ್ಕೆ, ತನ್ನ ಕಷ್ಟವನ್ನು ಹೇಳಿಕೊಳ್ಳುವುದಕ್ಕೆ ಯಾವುದಾದರೂ ಒಂದು ಸಮಯವನ್ನು ನಿಗದಿ ಮಾಡಿ. ಆ ಸಮಯದಲ್ಲಿ ಸಾರ್ವಜನಿಕರು ಬಂದು ನೋಡಬೇಕು, ತನ್ನ ಕೆಲಸವನ್ನು ಮಾಡಿಸಿಕೊಂಡು ಹೋಗಬೇಕು, ಈ ರೀತಿಯ ವ್ಯವಸ್ಥೆಯನ್ನೂ ಕೂಡ ಮಾಡಬೇಕು. ಇದರಿಂದ ಆಡಳಿತ ಚೆನ್ನಾಗಿ ನಡೆಯುವುದಕ್ಕೆ ಅನುಕೂಲವಾಗುತ್ತದೆ. ಈಗ ಏನಾಗಿದೆ ಎಂದರೆ ಸಂಬಂಧಪಟ್ಟ ಕೇಸ್ ವರ್ಕರ್ ಗಿರಾಕಿ ಬರದ ಹೊರತು, ಆತನು ಲಂಚ ಕೊಡದೆ ಹೊರತು ಫೈಲನ್ನು ಈಚೆಗೆ ತೆಗೆಯುವುದಿಲ್ಲ. ಇದನ್ನು ತಡೆಗಟ್ಟುವ ಕಡೆ ಮಂತ್ರಿಗಳು ಯಾರಾದರೂ ಗಮನಕೊಟ್ಟಿದ್ದೀರಾ ? ಬಿ.ಡಿ.ಎ. ನಲ್ಲಿ ಒಂದು ಖಾತೆಯನ್ನು ಬದಲಾವಣೆ ಮಾಡಿಕೊಳ್ಳಬೇಕಾದರೆ, ಪೊಜಿಷನ್ ಸರ್ಟಿಫಿಕೇಟ್‌ನ್ನು ತೆಗೆದುಕೊಳ್ಳಬೇಕಾದರೂ ಲಂಚ ಕೊಡಬೇಕು, ಲಂಚ ಕೊಡದೆ ಕೆಲಸವೇ ಆಗುವುದಿಲ್ಲ. ಈ ರೀತಿಯ ವ್ಯವಸ್ಥೆ ಎಲ್ಲಾ ಇಲಾಖೆಗಳಲ್ಲೂ ಇದೆ.

೫ ೩೦ ಪಿ ಎಂ.

ಈ ಬಗ್ಗೆ ಅಲ್ಲಿಗೆ ಹೋದರೆ ಓಪನ್ ಆಗೇ ಲಂಚ ಕೇಳುತ್ತಾರೆ. ಲಂಚವನ್ನು ಕೊಟ್ಟರೆ ೨೪ ಗಂಟೆಯೊಳಗೇನೇ ಕೆಲಸವಾಗಿ ಬಿಡುತ್ತದೆ ಇಲ್ಲದಿದ್ದರೆ ಆಗುವುದಿಲ್ಲಾ. ಆದುದರಿಂದ ಇದನ್ನು ನಿರ್ಮೂಲ ಮಾಡುವುದಕ್ಕೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ಅನ್ನುವುದನ್ನು ನಾನು ಕೇಳುತ್ತೇನೆ. ಈ ಒಂದು ಅಡ್ಮಿನಿಸ್ಟ್ರೇಷನ್ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕಾದರೆ ನೀವೇನಾದರೂ ಅಧಿಕಾರಿಗಳ ಸಭೆ ಏನಾದರೂ ಕರೆದಿದ್ದೀರಾ ಅಥವಾ ಶಾಸಕರ ಸಭೆ ಏನಾದರೂ ಕರೆದಿದ್ದೀರಾ ? ತಾವು ಈ ಬಗೆ ಕನ್‌ಸಲ್ಟೇಟೀವ್ ಕಮಿಟಿ ಅಂತ ಮಾಡಿದ್ದೀರಿ, ನಾನೂ ಕೂಡ ಅದಕ್ಕೆ ಸದಸ್ಯ. ಇದುವರೆಗೆ ಆ ಸಭೆ ಒಂದೇ ಒಂದು ಸಾರಿ ಸೇರಿದೆ. ನನಗೆ ಒಂದು ಸಾರಿ ನೋಟೀಸ್ ಆ ಮೀಟಿಂಗ್ ಆದಮೇಲೆ ನೋಟೀಸ್ ಬಂತು. ಇನ್ನೊಂದು ಸಾರಿ ಸಭೆಯನ್ನು ಕರೆಯಲೇ ಇಲ್ಲ. ತಮಗೆ ಹೇಳಬೇಕಾದರೆ ಎಜುಕೇಷನ್ ಡಿಪಾರ್ಟಮೆಂಟ್‌ನಲ್ಲಿ ಎಷ್ಟೋ ಪ್ರಾಬ್ಲೆಮ್‌ಗಳು ಇವೆ. ಈ ಸದನದಲ್ಲಿ ಈ ವಿಷಯವನ್ನು ನಾನು ಏತಕ್ಕೆ ತರುತ್ತಿದ್ದೇನೆ ಎಂದರೆ ನೀವು ಈ ಕೆಲಸವನ್ನು ಮಾಡುವುದಿಲ್ಲ ಎನ್ನುವುದು ನನಗೆ ಗೊತ್ತಿದೆ ನೀವು ಇದನ್ನು ಮಾಡುವುದಕ್ಕೂ ಸಹ ತಯಾರಿಲ್ಲಾ. ನಿಮ್ಮ ದೃಷ್ಟಿಯಲ್ಲಿ ರಾಜಕೀಯದಲ್ಲೇ ಹೆಚ್ಚಿನ ಆಸಕ್ತಿ ಇರುವುದರಿಂದ ಈ ಅಡ್ಮಿನಿಸ್ಟ್ರೇಷನ್ ಕಡೆ ಹೆಚ್ಚು ಗಮನ ಕೊಡುವುದಿಲ್ಲಾ. ಅದಕೋಸ್ಕರವಾಗಿ ಅಡ್ಮಿನಿಸ್ಟ್ರೇಷನ್ ನಾಯಿ ಪಾಲಾಗಿದೆ, ಬೀದಿ ಪಾಲಾಗಿದೆ. ಯಾವ ಕೆಲಸವಾಗ ಬೇಕೋ ಆ ಕೆಲಸ ಆಗುತ್ತಾ ಇಲ್ಲಾ. ಇದು ನನ್ನ ಛಾರ್ಜ್. ಆದುದರಿಂದ ಮಂತ್ರಿಗಳಾದವರು ಸ್ವಲ್ಪ ಮಟ್ಟಿಗೆ ರಾಜಕೀಯ ಬಿಟ್ಟು ಅಡ್ಮಿನಿಸ್ಟ್ರೇಷನ್ ಕಡೆ ಗಮನ ಕೊಟ್ಟರೆ ಒಳ್ಳೆಯದು. ಈವೊತ್ತಿನ ದಿವಸ ಮಂತ್ರಿಗಳಿಗೆ ಬೆಲೆಯೇ ಇಲ್ಲದ ಹಾಗೆ ಇದೆ. ಆದರಿಂದ ಮಂತ್ರಿಗಳು ಮಾಡಿದಂಥಾ ಆರ್ಡರ್ಸ್ ಏನು ಇದೆಯೋ ಅವರ ಪೇಪರ್ಸ್‌ಗೆ ಬೆಲೆಯೇ ಇಲ್ಲದ ಹಾಗೆ ಇದೆ. ಅಷ್ಟೇ ಅಲ್ಲ ಶಾಸಕರಾದವರು ಯಾವುದಾದರೂ ಪತ್ರವನ್ನು

ಮಂತ್ರಿಗಳಿಗೆ ಬರೆದರೆ ಅದಕ್ಕೆ ಉತ್ತರವನ್ನೇ ಬರೆಯುವುದಿಲ್ಲ, ಇನ್ನು ಇವರೇ ಅದಕ್ಕೆ ಉತ್ತರವನ್ನು ಕೊಡದೇ ಇರುವಾಗ ಇನ್ನು ಅಧಿಕಾರಿಗಳಿಗೆ ಬರೆದ ಪತ್ರಕ್ಕೆ ಏನು ಉತ್ತರ ಬರೆದಾರು. ಮಂತ್ರಿಗಳು ಈವೊತ್ತಿನ ದಿವಸ ಯಾವುದಾದರೂ ಒಂದು ಆರ್ಡರ್‌ನ್ನು ಪಾಸ್ ಮಾಡಬಹುದು ಅವರು ಈವೊತ್ತು ಇಲ್ಲಿ ಇರುತ್ತಾರೆ, ನಾಳೆ ದಿವಸ ಹೊರಟು ಹೋಗುತ್ತಾರೆ ನಾವಾದರೆ ಶಾಶ್ವತವಾಗಿ ಇಲ್ಲಿಯೇ ಇರುವುದರಿಂದ ನಾವು ಅದಕ್ಕೆ ಜವಾಬು ಹೇಳಬೇಕಾಗುತ್ತದೆ ಎಂದು ಅಧಿಕಾರಿಗಳು ಉತ್ತರ ಹೇಳುತ್ತಾರೆ. ಇಷ್ಟೇ ಅಲ್ಲನಾವು ಯಾವುದಾದರೂ ಇಂಟರ್‌ವ್ಯೂ ಟೈಂಗೆ ಹೋದರೆ ಅವರು ಇಂಟರ್‌ವ್ಯೂ ಅನ್ನೇ ಕೊಡುವುದಿಲ್ಲಾ. ಇಂಟರ್‌ವ್ಯೂ ಕೊಡಬೇಕು ಅನ್ನುವ ಮನೋಭಾವನೆಯೂ ಕೂಡ ಅವರಲ್ಲಿ ಇಲ್ಲಾ. ಈ ಬಗ್ಗೆ ಮೊದಲೇ ಇಲ್ಲಿಯ ಮಾನ್ಯ ಸದಸ್ಯರಾದ ಶ್ರೀ ರಾಮುರವರು ಅವರು ಹೋದಾಗ ನನಗೆ ಇಂಟರ್‌ವ್ಯೂ ಅನ್ನೇ ಕೊಡಲಿಲ್ಲಾ ಅನ್ನುವ ಮಾತನ್ನು ಹೇಳಿದರು. ಆದುದರಿಂದ ನಾನು ಇದರ ಬಗ್ಗೆ ಹೇಳಬೇಕಾಗಿಲ್ಲಾ. That is my charge against you including the Chief Minis er ನೀವು ಹೆಚ್ಚಾಗಿ ರಾಜಕೀಯದಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಾ ಇರುವುದರಿಂದ ಈ ಅಡ್ಮಿನಿಸ್ಟ್ರೇಷನ್‌ಗೆ ಈವೊತ್ತಿನ ದಿವಸ ಏನು ಹಣ ಖರ್ಚು ಮಾಡುತ್ತಿದ್ದೀರೋ ಅವೆಲ್ಲಾ ಅಕ್ಷಮ್ಯ ದಂಡವಾಗುತ್ತಾ ಇದೆ. ಬೇಕಾದಷ್ಟು ಇಲಾಖೆಗಳನ್ನು ಮಾಡಿ. ಅವಶ್ಯಕತೆ ಇಲ್ಲದೇ ಇರತಕ್ಕಂಥಾ ಕೆಲವು ಸಂಸ್ಥೆಗಳನ್ನು ಮಾಡಿ ಖಾಸಗಿಯವರಿಗೆ ಅದನ್ನೆಲ್ಲಾ ಹಂಚತಕ್ಕಂಥಾ ಒಂದು ವ್ಯವಸ್ಥೆ ಏನು ಇದೆ ಇದು ಸರಿಯಲ್ಲ. ಇದಕ್ಕಾಗಿ ಅಧಿಕಾರಿಗಳನ್ನು ಸಹ ಹೆಚ್ಚು ಮಾಡಿಕೊಂಡಿದ್ದೀರಿ. ಆದರೆ ನೀವು ಸ್ಯಾಂಕ್ಷನ್ ಮಾಡತಕ್ಕಂಥಾ ಯೋಜನೆಗಳಿಗೆ ಬಡ್ಜೆಟ್ಟ‌ನಲ್ಲಿ ಹಣ ಇಲ್ಲ. ಆದುದರಿಂದ ನಾನು ಹೇಳುವುದು ಏನೆಂದರೆ ನೀವು ಈ ಅಡ್ಮಿನಿಸ್ಟ್ರೇಷನ್‌ಗೆ ಏನು ಹಣ ಖರ್ಚು ಮಾಡುತ್ತಿದ್ದೀರಿ ಅವೆಲ್ಲಾ ಕ್ರಿಮಿನಲ್ ವೇಸ್ಟ್ ಎಂದು ಹೇಳುತ್ತೇನೆ. ಕೆಲವು ಕೆಲಸಗಳು ಆಗಬೇಕಾದರೆ ಜಾತೀಯತೆಯ ಹೆಸರುಗಳನ್ನು ಹೇಳಿಕೊಂಡು ಕೆಲಸ ಮಾಡಿಸಿಕೊಳ್ಳುತ್ತಾರೆ ದುಡ್ಡು ಕೊಟ್ಟು ಕೊಂಡು ಕೆಲವರು ಕೆಲಸಗಳನ್ನು ಮಾಡಿಸಿಕೊಳ್ಳುತ್ತಾರೆ. ಇದರಿಂದ ನೀವು ಈ ಅಡ್ಮಿನಿಸ್ಟ್ರೇಷನ್‌ಗೆ ಮಾಡತಕ್ಕಂಥಾ ಖರ್ಚು ಅದಕ್ಷಮ್ಯ ದಂಡ ಎಂದು ಮತ್ತೊಮ್ಮೆ ಹೇಳಬೇಕಾಗುತ್ತದೆ. ಈ ಅಡ್ಮಿನಿಸ್ಟ್ರೇಷನ್ ಬಗ್ಗೆ ನಾನು ಇನ್ನೂ ಒಂದು ಹೆಜ್ಜೆ ಮುಂದೆ ಇಟ್ಟು ಹೇಳುವುದಾದರೆ ಬರುವ ದಿವಸಗಳಲ್ಲಾದರೂ ಕೂಡ ಈ ಒಂದು ಒಳ್ಳೆಯ ಕೆಲಸವನ್ನಾದರೂ ಮಾಡಿಕೊಟ್ಟರೆ ನಾನು ತಮಗೆ ಜಯಕಾರ ಹಾಕುತ್ತೇನೆ ಅಲ್ಲದೆ ಶಹಭಾಸ್‌ಗಿರಿ ಕೊಡುತ್ತೇನೆ. ಅದು ಯಾವ ಕೆಲಸ ಎಂದರೆ ಒಬ್ಬ ಸಾಮಾನ್ಯ ನಾಗರೀಕ ಏನಾದರೂ ಒಂದು ಪತ್ರವನ್ನು ಅಧಿಕಾರಿಗಳಿಗಾಗಲಿ ಅಥವಾ ಮಂತ್ರಿಗಳಿಗಾಗಲಿ ಬರೆದರೆ ಅವನಿಗೆ ೧೦–೧೫ ದಿವಸದೊಳಗ ಅದಕ್ಕೆ ರಿಪ್ಲೈ ಕೊಡುವ ಹಾಗೆ ಮಾಡಿದರೆ ನಿಮಗೆ ನಾನು ಜಯಕಾರ ಹಾಕುತ್ತೇನೆ ಮತ್ತು ಶಹಭಾಸ್ ಗಿರಿಯನ್ನೂ ಸಹ ಕೊಡುತ್ತೇನೆ. ಅಷ್ಟು ಕೆಲಸ ಮಾಡಿಕೊಡಿ.

ಇನ್ನು ಪಬ್ಲಿಕ್ ಸರ್ವಿಸ್ ಕಮೀಷನ್ ಬಗ್ಗೆ ಹೇಳುವುದಾದರೆ ನಾನು ಈ ಬಗ್ಗೆ ಹಿಂದೆಯೇ ಒಂದು ಸಲ ಹೇಳಿದ್ದೇನೆ, ಈಗಲೂ ಹೇಳುತ್ತೇನೆ. ಏನೆಂದರೆ It is not Public Service Commission but it is Public Scandle Commission. ಎಂದು ಅಲ್ಲಿ ಓಪನ್ ಆಗಿಯೇ ಭ್ರಷ್ಟಾಚಾರ ನಡೆಯುತ್ತಾ ಇದೆ ಇಂತಿಂಥಾ ಅಪಾಯಿಂಟ್ ಮೆಂಟ್‌ಗೆ ಇಷ್ಟಿಷ್ಟು ಎಂದು ಓಪನ್ ಆಗಿಯೇ ನಡೆಯುತ್ತಾ ಇದೆ. This is hopeless. ತಾವು ಏನು ಮಾಡುತ್ತೀರಿ ಎಂದರೆ ಯಾರಾದರೂ ಒಬ್ಬರು ರಿಟೈರ್ಡ್ ಆಗಿದ್ದರೆ ಆ ರಿಟೈರ್ಡ್ ಆಫೀಸರ್‌ನ್ನು ಅಲ್ಲಿಗೆ ತೆಗೆದುಕೊಂಡು ಹಾಕಿ ಬಿಡುತ್ತೀರಿ. ಅವರು ಇವರನ್ನೆಲ್ಲಾ ಇಂಟರ್‌ವ್ಯೂ ಮಾಡುತ್ತಾರೆ. ಅಲ್ಲಿ ಸರಿಯಾಗಿ ಅಪಾಯಿಂಟ್‌ಮೆಂಟ್ಸೇ ನಡೆಯುವುದಿಲ್ಲಾ ಅಲ್ಲಿ ಯಾರಿಗೆ ಆಗಲಿ ಇಂಟರ್‌ವ್ಯೂ ಬಂದರೆ ಮೆರಿಟ್ಸ್ ಮೂಲಕ ಅವನು ಆಯ್ಕೆಯಾಗುವುದಿಲ್ಲಾ. ಅಲ್ಲಿ ಒಬ್ಬೊಬ್ಬರು ಇಷ್ಟಿಷ್ಟು ಎಂದು ಹಂಚಿಕೊಂಡುಬಿಡುತ್ತಾರೆ. ಇವಕ್ಕೆಲ್ಲಾ ಅವರ ಕಡೆಯಿಂದಲೇ ಒಬ್ಬೊಬ್ಬ ಏಜೆಂಟರು ಇರುತ್ತಾರೆ. ಒಬ್ಬೊಬ್ಬ ಪಿ.ಎಸ್.ಸಿ. ಮೆಂಬರ್ಸ್‌ಗೂ ಒಬ್ಬೊಬ್ಬ ಏಜೆಂಟರು ಇರುತ್ತಾರೆ. ಅವರನ್ನು ಹಿಡಿದುಬಿಟ್ಟರೆ ಯಾವ ಕೆಲಸಕ್ಕಾದರೂ ಕೂಡ ಇಂಟರ್‌ವ್ಯೂ ಸಿಕ್ಕು ಬಿಡುತ್ತದೆ. ಇಲ್ಲದೇ ಹೋದರೆ ಸಿಗುವುದಿಲ್ಲಾ. ಇಂತಿಂಥಾ ಕೆಲಸಕ್ಕೆ ಇಂತಿಷ್ಟು ಅಂತ ದುಡ್ಡು ಇದೆ. ಆ ದುಡ್ಡು ಕೊಟ್ಟರೆ ಅವನಿಗೆ ಕೆಲಸ ಗ್ಯಾರಂಟಿ. ಆದುದರಿಂದ ನೀವು ಈ ಅಡ್ಮಿನಿಸ್ಟ್ರೇಷನ್‌ಗೆ ಏನು ಖರ್ಚು ಮಾಡುತ್ತೀರೋ ಅವೆಲ್ಲಾ ಕ್ರಿಮಿನಲ್ ವೇಸ್ಟ್ ಎಂದು ಹೇಳುತ್ತೇನೆ. ತಮಗೆ ಒಂದು ಉದಾಹರಣೆ ಹೇಳಬೇಕಾದರೆ ಈವೊತ್ತಿನ ದಿವಸ ಒಬ್ಬನಿಗೆ ಒಂದು ಸಬ್ ಇನ್‌ಸ್ಪೆಕ್ಟರ್ ಪೋಸ್ಟ್‌ಗೆ ಇಂಟರ್‌ವ್ಯೂ ಸಿಗಬೇಕಾದರೆ, ಐ.ಜಿ.ಪಿ. ಅವರ ಆಫೀಸಿನಲ್ಲಿ ಒಬ್ಬರು ಇದ್ದಾರಂತೆ ಅವರ ಹೆಸರನ್ನು ಹೇಳಿ ಬಿಟ್ಟರೆ ನಾಳೆಯೇ ಅವರನ್ನು ಮನೆಗೆ ಕಳುಹಿಸಿ ಬಿಡುತ್ತೀರಿ ಅವರ ಹೆಸರು ಹೇಳುವಹಾಗಿಲ್ಲಾ, ಒಂದು ಸಾವಿರ ರೂಪಾಯಿ ಕೊಟ್ಟರೆ ಅಂಥಾವರಿಗೆ ಸಬ್

ಇನ್ಸ್‌ಪೆಕ್ಟರ್ ಪೋಸ್ಟ್‌ಗೆ ಇಂಟರ್‌ವ್ಯೂ ಸಿಗುತ್ತಂತೆ. ಪಿ.ಎಸ್.ಸಿ. ಯಲ್ಲಿ ಈ ರೀತಿ ನಡೆಯುತ್ತಾ ಇದೆ. ಆದುದರಿಂದ ದಯವಿಟ್ಟು ತಾವು ಇದರ ಬಗ್ಗೆ ತೀವ್ರ ಆಸಕ್ತಿ ವಹಿಸಿ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಎರಡನೆಯದಾಗಿ ಈ ಪಿ.ಎಸ್.ಸಿ. ಬಗ್ಗೆ ಹೇಳಬೇಕಾದರೆ Public Service Commission has absolutely failed visualise. ಈ ಬಗ್ಗೆ ನಾವು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಸಾಮಾನ್ಯವಾಗಿ ಈ ಒಂದು ಪಿ.ಎಸ್.ಸಿ. ಗೂ ಮತ್ತು ಡಿಪಾರ್ಟ್‌ಮೆಂಟ್ಸ್‌ಗಳಿಗೂ ಕೋಆರ್ಡಿನೇಷನ್ ಮುಖ್ಯವಾಗಿ ಇರಬೇಕು. ಈವೊತ್ತಿನ ದಿವಸ ಈ ಇಲಾಖೆಗಳಲ್ಲಿ ಎಂಪ್ಲಾಯ್‌ಮೆಂಟ್ಸ್ ಆಗಬೇಕಾದರೆ ಯಾವ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಪೋಸ್ಟ್ಸ್ ಖಾಲಿ ಇವೆ ಅನ್ನುವುದನ್ನು ಪಿ.ಎಸ್.ಸಿ. ಯವರಿಗೆ ತಿಳಿಸಬೇಕು. ಆ ರೀತಿಯಾದ ಒಂದು ಕೋಆರ್ಡಿನೇಷನ್ ಈವೊತ್ತಿನ ದಿವಸ ಇಲ್ಲ. ಈಗ ಟೆಂಪರರಿ ವೇಕೆನ್ಸಿಗಳು ಏನು ಇವೆ ಅದನ್ನು ಭರ್ತಿ ಮಾಡಬೇಕಾದರೆ ಈ ಒಂದು ಸ್ಟೈಪೆಂಡರಿ ಬೇಸಿಸ್ ಮೇಲೆ ಏನು ಆ ಪೋಸ್ಟ್‌ಗಳನ್ನು ಭರ್ತಿ ಮಾಡುತ್ತಾರೋ ಅವೆಲ್ಲಾ ಒಂದು ಕ್ರಿಮಿನಲ್ ವೇಸ್ಟ್ ಎಂದು ಹೇಳುತ್ತೇನೆ. ಏತಕ್ಕೆಂದರೆ ಒಂದು ಕಮಿಟಿಗೆ ನನ್ನನ್ನೂ ಮತ್ತು ಶ್ರೀ ಪಿ. ರಾಮದೇವ್ ಅವರನ್ನೂ ಹಾಕಿದ್ದರು. ಈ ಸ್ಟೈಪೆಂಡರಿ ಬೇಸಿಸ್ ಮೇಲೆ ಯಾರು ಹೋಗಿ ಸೇರಿದ್ದಾರೋ ಅವರನ್ನು ಅಲ್ಲಿ ಹೋಗಿ ನೋಡಿದರೆ ಅವರು ಅಲ್ಲಿ ಏನೂ ಕೆಲಸ ಮಾಡುವುದೇ ಇಲ್ಲ. ಇಂಥಾ ಒಂದು ಸ್ಕೀಂ ಅನ್ನು ತಾವು ನಿಲ್ಲಿಸಬೇಕು ಎಂದು ಹೇಳುತ್ತೇನೆ, ನೀವು ಅಂಥಾವನಿಗೆ ಸಹಾಯ ಮಾಡಬೇಕೆಂದು ಇದ್ದರೆ ಸ್ವಯಂ ಉದ್ಯೋಗ ಯಾರು ಮಾಡುತ್ತಾರೋ ಅಂಥಾವರಿಗೆ ಇಂಥಾ ಒಂದು ಉದ್ಯೋಗ ಮಾಡಬೇಕು ಅಂತ ಕೊಡಿ. ಅದು ಬಿಟ್ಟು ಈ ಸ್ಟೈಪೆಂಡರಿ ಬೇಸಿಸ್ ಪ್ರಕಾರ ಅವರನ್ನು ತೆಗೆದುಕೊಳ್ಳುವಂಥಾ ಸ್ಕೀಂ ಏನು ಇದೆ ಅದು ಸರಿಯಲ್ಲ ಅದನ್ನು ನಿಲ್ಲಿಸಿ ಎಂದು ಹೇಳುತ್ತೇನೆ.

ಇನ್ನು ಈ ಪಬ್ಲಿಕ್ ಸರ್ವಿಸ್ ಕಮೀಷನ್ನಿನ ಅಪಾಯಿಂಟ್‌ಮೆಂಟ್ಸ್ ಬಗ್ಗೆ ಹೇಳುವುದಾದರೆ ಆಯಾಯ ಇಲಾಖೆಗಳಲ್ಲಿ ಏನೇನು ಕೋಟಾ ಇದೆ ಅದನ್ನು ಆದಷ್ಟು ಬೇಗ ಭರ್ತಿ ಮಾಡಿದರೆ ಒಳ್ಳೆಯದು ಎಂದು ಹೇಳುತ್ತೇನೆ. ಈಗ ಇದರ ಒಂದು ಅಡ್ಮಿನಿಸ್ಟ್ರೇಷನ್ ನೋಡಿದರೆ ಸಂಪೂರ್ಣವಾಗಿ ಸರ್ಕಾರ ಇದರಲ್ಲಿ ಫೈಲ್ಯೂರ್ ಆಗಿದೆ ಎಂದು ಹೇಳುತ್ತೇನೆ. ಈ ಬಗ್ಗೆ ಗಮನ ಹರಿಸಬೇಕು. ಇದಕ್ಕೆ ಸಂಬಂಧಪಟ್ಟಂತೆ ಅತಿ ಮುಖ್ಯವಾದ ಒಂದು ವಿಚಾರವನ್ನು ಹೇಳಬಯಸುತ್ತೇನೆ. ಅದೇನೆಂದರೆ ಕೆಲಸಕ್ಕಾಗಿ ಅವರು ಏನು ಅಪ್ಲಿಕೇಷನ್ ಕಾಲ್‌ಫಾರ್ ಮಾಡುತ್ತಾರೆ, ಅಪ್ಲಿಕೇಷನ್ ಹಾಕಲಿಕ್ಕೆ ಏನು ಒಂದು ಫೀ ಅನ್ನು ಗೊತ್ತು ಮಾಡಿದ್ದಾರೋ ಅದನ್ನು ರದ್ದು ಮಾಡಬೇಕು ಎಂದು ಹೇಳುತ್ತೇನೆ. ಒಂದೊಂದು ಹುದ್ದೆಗೆ ೫ ರೂಪಾಯಿ, ೧೦ ರೂಪಾಯಿ ಈ ತರಹ ಒಂದೊಂದು ವಿಧವಾಗಿ ಫೀಯನ್ನು ಹಾಕಿದ್ದಾರೆ ಇದನ್ನು ರದ್ದು ಮಾಡಬೇಕು ಎಂದು ಹೇಳುತ್ತೇನೆ. ತಮಗೆ ಹೇಳಬೇಕಾದರೆ ಈ ರೀತಿಯಾಗಿ ಪ್ರತಿಯೊಂದು ಅಪ್ಲಿಕೇಷನ್ನಿಗೂ ದುಡ್ಡು ಬರುತ್ತದೆಯಲ್ಲಾ ಅದನ್ನೆಲ್ಲಾ ಲೆಕ್ಕಾಚಾರ ಮಾಡಿದರೆ ಅದರಿಂದ ಎಷ್ಟು ದುಡ್ಡು ಬರುತ್ತದೆ ನೋಡಿದ್ದೀರಾ ? ಇದರಿಂದ ಆ ಹುಡುಗರಿಗೆ ಬಹಳ ತೊಂದರೆಯಾಗುವುದರಿಂದ ಈ ಫೀಯನ್ನು ನಿಲ್ಲಿಸಬೇಕು ಎಂದು ಹೇಳುತ್ತೇನೆ.

ಇನ್ನು ಕೊನೆಯದಾಗಿ ಕ್ಯಾರೆಕ್ಟರ್ ಸರ್ಟಿಫಿಕೇಟ್ ಬಗ್ಗೆ ಒಂದುಮಾತು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಅವನಿಗೆ ಯಾವುದಾದರೂ ಉದ್ಯೋಗ ಸಿಗಬೇಕಾದರೆ ಕ್ಯಾರೆಕ್ಟರ್ ಸರ್ಟಿಫಿಕೇಟ್ ಒಂದನ್ನು ಕೊಡಬೇಕು ಅಂತ ಮಾಡಿದ್ದೀರಿ. ಇದರಂಥ ನೂಸೆನ್ಸ್ ಇನ್ನಾವುದೂ ಇಲ್ಲ. ಏತಕ್ಕೆಂದರೆ ಆ ಕ್ಯಾಂಡಿಡೇಟ್ ತನಗೆ ಒಂದು ಕ್ಯಾರೆಕ್ಟರ್ ಸರ್ಟಿಫಿಕೇಟ್ ಬೇಕಾದರೆ ಅವನೇ ಒಂದು ಕಾಗದದಲ್ಲಿ ಟೈಪ್ ಮಾಡಿಕೊಂಡು ತಂದು ಬಿಟ್ಟು ಇದಕ್ಕೆ ಸೈನ್ ಮಾಡಿಕೊಡಿ ಎಂದು ಎಂ ಎಲ್.ಎ ಹತ್ತಿರ ಬರುತ್ತಾನೆ. ನಾವು ಅವನ ಮುಖವನ್ನೇ ನೋಡಿರುವುದಿಲ್ಲಾ. ಅವನು ಯಾರು ಎಂದು ಗೊತ್ತೇ ಇರುವುದಿಲ್ಲಾ. ಈ ಒಂದು ಸರ್ಟಿಫಿಕೇಟ್ ಕೊಡಬೇಕಾದರೆ ಅವನು ಯಾರು ಎಂದು ಗೊತ್ತಾಗಬೇಕಲ್ಲಾ. ಇದನ್ನು ಹೇಗೆ ಡಿಫೈನ್ ಮಾಡುವುದು What is the character ? Has it been done ? It is farce. ಇದರಿಂದ ಯಾವ ಪರಿಣಾಮಕಾರಿಯಾದ ಕೆಲಸವೂ ಆಗುವುದಿಲ್ಲ. ಆದುದರಿಂದ ದಯವಿಟ್ಟು ಈ ಒಂದು ಕಲಂ ಅನ್ನು ತೆಗೆದು ಹಾಕಬೇಕು ಎಂದು ಹೇಳುತ್ತೇನೆ. ಇದರಲ್ಲಿ ಕ್ಯಾರೆಕ್ಟರ್ ಸರ್ಟಿಫಿಕೇಟ್ ಅಂತ ಏನು ಒಂದು ಕಲಂ ಇದೆ ಅದನ್ನು ತೆಗೆದುಹಾಕಿ ಇಷ್ಟು ಹೇಳಿ ನನಗೆ ಈ ಬಗ್ಗೆ ಹೆಚ್ಚು ಮಾತನಾಡಲು ಸಮಯ ಇಲ್ಲದೇ ಇರುವುದರಿಂದ ಬೇರೆ ಟೈಂನಲ್ಲಿ ಇದನ್ನು ಉಪಯೋಗಿಸಿಕೊಂಡು ಮಾತನಾಡುತ್ತೇನೆ ಈಗ

ನನಗೆ ತಾವು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ನಮಸ್ಕಾರ ಹೇಳಿ ಮಾನ್ಯ ಮುಖ್ಯ ಮಂತ್ರಿಗಳು ನಾಳೆಯ ದಿವಸ ಇದಕ್ಕೆ ಉತ್ತರ ಕೊಡುವಾಗ ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಉತ್ತರ ಕೊಡುತ್ತಾರೋ ಅಥವಾ ದೇಶದ ನಾಯಕರಾಗಿ ಉತ್ತರ ಕೊಡುತ್ತಾರೋ ಎನ್ನುವುದನ್ನು ನಿರೀಕ್ಷಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† SRI M. ABDUL LATHEEF (Kolar).—Mr. Speaker, I rise to support the Demands relating to the Chief Minister and the Minister for Minor Irrigation. There is a strange state of affairs prevailing in the Animal Husbandry Department. I am told that there are 250 vacancies for qualified doctors in this department. On account of paucity of doctors many of the expansion schemes are held up. Why is this dearth for qualified people when we have a college of our own. This year the students who have passed out have migrated to Maharashtra State and they do not want to work here. They have gone because the service conditions here are not satisfactory. There is a difference of about Rs 500 in the pay scale of Karnataka and Maharashtra. When our own boys are opting for the neighbouring States I feel that we must create conditions by which they stay here and work for the State; on whom we have spent sufficient money to educate them.

SRI B. B. SAYANAK.—It is a good thing that your boys are going and getting jobs in Maharashtra, whereas Marathi boys are not getting here.

SRI D. DEVARAJ URS (Chief Minister).—Are you sure there is a difference of Rs. 500?

SRI M. ABDUL LATHEEF.—I hear so. Apart from the pay they are given motor cycles. The Maharashtra State gives them Rs. 1200 whereas we give them Rs. 750. There are so many development schemes and I wish our unfortunate district gets one Cattle Development Scheme. I met the Director a few days back. He said if 500 acres of land is available a scheme is there which can be taken up in Kolar. I have placed 500 acres of Government land at Mulbagal Taluk and if the scheme is taken up I shall be extremely thankful to the department.

Regarding Mines and Geology I want to say something. I have received a copy of a letter addressed to the Hon. Chief Minister by one Sri Siddiqui, who appears to be a Geologist and diamond hunter, who is known in the State of Karnataka. There are areas where there are diamond mines. I also feel that there is possibility of such mines existing in view of fabulous treasures that Nawabs, rulers and Palegars possessed. My friend Sri Siddique says that the Sindhbad Sailors' Treasure land is perhaps somewhere in Karnataka There is a lot of force in what he says. I do not know what the

Department says about this, but feel, as an experiment the Department of Mines and Geology could take up some exploratory work in this behalf.

Sir, almost every hon. member has spoken about the police Department. I shall also speak a few words about this department This profession, I feel is the noblest profession, because it is a profession where one sacrifices and where one comes to the rescue of a fellow citizen. The present day society is a society full of strains full of pressures and full of pulls, and the duty of a policeman is very hard specially in a changing society like ours. In spi e of these drawbacks we have got a very good force of Police in our State and I for one shall pat them on the back for the nice work they have been doing and tell them. "well done, keep it up".

With regard to the Home Guards Auxiliary force, I have a suggestion to make. I fail to understand the wisdom behind the creation of this force, because a Policeman is a policeman all the 24 hours, he has to be vigilant all the 24 hours and he is duty bound round the clock, but the duties of home guards are casual, once in a month or two or three. I do not know how for the scheme is successful about the working of this auxiliary force. They are employed at a time when he has to risk his life to save the life of a citizen. This duty requires a special type of character, special calibre, and these people who are trained only for about a few weeks cannot have this type of calibre and character. It is a long time process. policeman has to be a policeman all through his life. I do not know the experience of the Department about this auxiliary force. I feel that this should be disbanded and the entire amount spent on this force could be utilised for expansion of the present Police force, as it is felt inadequate and this feeling has been expressed by so many hon, members.

Regarding irrigation. I understand that the retired Engineer has prepared a scheme to lift the waters of Netravathi river to an altitude of about 60 ft. at a place by which some taluks in Kolar, Tumkur and Bangalore districts could be irrigated. That seems to be a feasible scheme and the cost comes to about Rs, 2,500/- per acre irrigated. This is the need of the day. and the Hon'ble Chief Minister knows that in Kolar district, Gudibanda, Bagepalli and Gowribidanur taluks are almost like a desert. Water famine is there always. Now, even drinking water is not available in these taluks. If this scheme is going to help these taluks, I wish. even at the cost of heavy amount if this scheme materialises the whole district shall be extremelly thankful to the Hon'ble Chief Minister and the Department.

Coming to Minor irrigation, ours is a district which has the largest number of tanks. We have 3,500 small tanks and these tanks were built some hundreds of years back and most of them are silted up, and the capacity has been reduced to almost 50 per cent. When a tank is being desilted, the earth that is coming up is unimaginable I think half the tanks have been silted up as a result of wh ch our crops fail. If we could ensure supply of water for 15 days or a month during the last part, I think the crops will succeed. Therefore a major scheme of desilting the tanks in Kolar District should be taken up. A few days back when the legislators of our district met the Hon'ble Chief Minister, he was thinking on these lines–I do not know what his findings are but I feel this is required and necessary When the Government is taking up so many big projects for other districts, I request our Hon'ble (hief Minister to do something for this unfortunate district.

Thank you, Sir.

† ಶ್ರೀ ಎಂ. ಚಂದ್ರಶೇಖರ್ (ಜಯನಗರ)—ಮಾನ್ಯ ಅಧ್ಯಕ್ಷರೇ, ನಾನು ಮೊದಲನೆಯದಾಗಿ ಸಣ್ಣ ನೀರಾವರಿ ಯೋಜನೆಗಳ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ನಮ್ಮ ಬೆಂಗಳೂರು ಜಿಲ್ಲೆಯಲ್ಲಿ ಎರಡು ಸಣ್ಣ ನೀರಾವರಿ ಯೋಜನೆಗಳನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮಂಚನಬಲೆ ಪ್ರಾಜೆಕ್ಟ್ ಎಂದು ಮಾಗಡಿ ತಾಲ್ಲೂಕಿನಲ್ಲಿ ಒಂದು ಯೋಜನೆಯನ್ನು ತೆಗೆದುಕೊಂಡು ಹತ್ತು ವರ್ಷಗಳಾದರೂ ಸಹ ಈ ಕೆಲಸವನ್ನು ಸರ್ಕಾರದವರು ಪೂರ್ಣಮಾಡಿಲ್ಲ. ೫೦೦ ಲಕ್ಷ ರೂಪಾಯಿಗಳ ಅಂದಾಜನ್ನು ಇದಕ್ಕೆ ತಯಾರು ಮಾಡಿದ್ದು, ಈಗ ೧೭೭ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಹತ್ತು ವರ್ಷಗಳಾಯಿತು ಇನ್ನೂ ಇದರ ಕೆಲಸವಾಗಿಲ್ಲ. ಆರನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಾವಿದ್ದೇವೆ. ಈ ಅವಧಿಯಲ್ಲಿಯೂ ಇದು ಪೂರ್ಣವಾಗುತ್ತದೆಯೋ ಇಲ್ಲವೋ ಎನ್ನುವುದು ಅನುಮಾನವಾಗಿದೆ. ಇದರಿಂದಾಗಿ, ಮಾಗಡಿ ತಾಲ್ಲೂಕು ಹಾಗೂ ರಾಮನಗರ ತಾಲ್ಲೂಕುಗಳಲ್ಲಿ ಸುಮಾರು ೭೫೦೦ ಎಕರೆ ನೀರಾವರಿಯಾಗುವ ಸೂಚನೆಗಳು ಇವೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಭಾರಿ ನೀರಾವರಿ ಯೋಜನೆಗಳಾವುವೂ ಇಲ್ಲ. ಅರ್ಕಾವತಿ ಬೇಸಿನ್‌ಅನ್ನು ಬಿಟ್ಟರೆ ಬೇರೆ ಯಾವ ಯೋಜನೆಗಳು ಇಲ್ಲ. ಇದೂ ಸಹ ಪ್ರಾರಂಭವಾಗಿ ೧೫ ವರ್ಷಗಳಾದರೂ ಸಹ ಇನ್ನೂ ನಿಧಾನವಾಗಿಯೇ ನಡೆದುಕೊಂಡು ಹೋಗುತ್ತಿದೆ. ಸರ್ಕಾರದವರು ಈ ಯೋಜನೆಯನ್ನು ಆದಷ್ಟು ಜಾಗ್ರತೆಯಾಗಿ ಮಾಡುವುದಕ್ಕೆ ಪ್ರಯತ್ನಮಾಡಬೇಕು ಎಂದು ನಾನು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಎರಡನೆಯದು ಕನಕಪುರದ ಬಳಿ ಇರುವಂತಹ ಹಾರೋಬೆಲೆ ಪ್ರಾಜೆಕ್ಟ್. ಇದರಿಂದ ಸುಮಾರು ೨೦ ಸಾವಿರ ಎಕರೆಗೆ ನೀರಾವರಿಯಾಗುತ್ತದೆ. ಇದು ಕೂಡ ೯೮೩ ಲಕ್ಷ ರೂ.ಗಳ ಪ್ರಾಜೆಕ್ಟ್. ಇದನ್ನು ೫ನೇ ಯೋಜನೆಯಲ್ಲಿಯೇ ತೆಗೆದುಕೊಳ್ಳಲಾಯಿತು. ಈಗ ಆರನೇ ಯೋಜನೆ ಪ್ರಾರಂಭವಾಗಿದ್ದರೂ ಸಹ ಇದಕ್ಕೆ ಖರ್ಚು ಮಾಡಿರುವುದು ಕೇವಲ ೨೪ ಲಕ್ಷ ರೂ.ಗಳು ಮಾತ್ರ. ಎಷ್ಟು ನಿಧಾನವಾಗಿ ಕೆಲಸವಾಗುತ್ತಿದೆ ಎಂಬುದನ್ನು ಇದರಿಂದಲೇ ಅರ್ಥಮಾಡಿಕೊಳ್ಳಬಹುದು. ಈ ಎರಡು ಯೋಜನೆಗಳನ್ನು ಜಾಗ್ರತೆ ಮಾಡಿ ಮುಗಿಸಿದರೆ ಬೆಂಗಳೂರು ಜಿಲ್ಲೆಯ ೩ ತಾಲೂಕ್‌ಗಳಿಗೆ ಅನುಕೂಲವಾಗುತ್ತದೆ. ಆದಕಾರಣ ಹತ್ತಾರು ವರ್ಷಗಳಿಂದ ಮುಗಿಯದೆ ತಡವಾಗಿರುವಂತಹ ಈ ಯೋಜನೆಗಳ ಕೆಲಸವನ್ನು ಜಾಗ್ರತೆ ಪೂರ್ಣಮಾಡಬೇಕೆಂದು ಹೇಳುತ್ತೇನೆ.

ಇನ್ನು ಬೆಂಗಳೂರು ದಕ್ಷಿಣ ತಾಲ್ಲೂಕಿಗೆ ನಮ್ಮ ಬೆಂಗಳೂರು ನಗರದ ಒಳಚರಂಡಿ ನೀರು ಹೋಗುತ್ತದೆ. ಈಗ ಈ ನೀರು ಬೆಳ್ಳಂದೂರು ಕೆರೆಗೆ ಹೋಗುತ್ತದೆ. ಅಲ್ಲಿಂದ ಮುಂದೆ ಅರಳೂರು, ದೊಡ್ಡಕಣ್ಣಳ್ಳಿ ಮತ್ತು ಗುಂಜೂರು ನಾಲೆಗಳ ಮೂಲಕ ಹೋಗಲು ಬಡ್ಜೆಟ್ಟಿನಲ್ಲಿ ಅವಕಾಶ ಮಾಡಿದ್ದಾರೆ ಇದಕ್ಕೆ

ಜಾಗ್ರತೆ ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಕೊಟ್ಟರೆ, ಈ ನೀರಿನಿಂದ ಸುಮಾರು ೪ ಸಾವಿರ ಎಕರೆಗೆ ನೀರಾವರಿ ಯಾಗುತ್ತದೆ. ಆದಕಾರಣ ಈ ಕೆಲಸವನ್ನು ಈ ವರ್ಷವೇ ಮಾಡಿ ಮುಗಿಸಬೇಕೆಂದು ಹೇಳುತ್ತೇನೆ. ಬೆಂಗಳೂರಿಗೆ ಕುಡಿಯಲು ಬರುವ ಅರ್ಕಾವತಿ ಮತ್ತು ಕಾವೇರಿ ನದಿ ನೀರು ಕೊಳಚೆ ನೀರಾದ ಮೇಲೆ ಈ ರೀತಿ ಉಪಯೋಗಿಸಿಕೊಳ್ಳುವುದರಿಂದ ಸೊಳ್ಳೆಗಳ ಕಾಟವನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಈಗ ಎಚ್.ಎ.ಎಲ್. ಏರಿಯಾದಲ್ಲಿರತಕ್ಕಂಥ ಜನರಿಗೆ ಸೊಳ್ಳೆಗಳ ಕಾಟದ ಅನುಭವ ಚೆನ್ನಾಗಿ ಆಗಿದೆ. ಈ ಸೊಳ್ಳೆಗಳ ಕಾಟವನ್ನು ತಪ್ಪಿಸಲು ಈ ೩ ಪ್ರಾಜೆಕ್ಟ್‌ಗಳ ಕೆಲಸವನ್ನು ಬೆಂಗಳೂರು ಜಿಲ್ಲೆಗೆ ಸಂಬಂಧ ಪಟ್ಟಂತೆ ಕೂಡಲೇ ತೆಗೆದುಕೊಂಡು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಲಿಫ್ಟ್ ಇರಿಗೇಷನ್ ಮೂಲಕ ವ್ಯವಸಾಯ ಮಾಡುವ ಪದ್ಧತಿ ಇದೆ. ಬೆಂಗಳೂರಿನಿಂದ ಬಳ್ಳಾರಿಗೆ ಹೋಗತಕ್ಕಂಥ ರಸ್ತೆಯಲ್ಲಿ ನಾವು ಹೋಗಿ ನೋಡಿದ್ದೇ ಆದರೆ ಆ ಭಾಗದಲ್ಲಿ ಸಣ್ಣ ಸಣ್ಣ ಹಿಡುವಳಿದಾರರೇ ಜಾಸ್ತಿ ಇದ್ದಾರೆ. ಒಂದು ಎಕರೆ, ಅರ್ಧ ಎಕರೆ, ಮುಕ್ಕಾಲು ಎಕರೆ ಇರತಕ್ಕಂಥ ರೈತರು ಬಾವಿಗಳನ್ನು ತೆಗೆಸಿ ಅದರ ನೀರಿನಿಂದ ವ್ಯವಸಾಯ ಮಾಡುತ್ತಿದ್ದಾರೆ. ಇವರುಗಳು ಹಲವಾರು ಗಜಗಳ ಅಂತರದಲ್ಲಿಯೇ ಬಾವಿಗಳನ್ನು ತೆಗೆಯುವುದರಿಂದ ಏನಾಗುತ್ತಿದೆ ಎಂದರೆ, ಒಬ್ಬರ ಜಮೀನಿನಲ್ಲಿ ೫೦ ಅಡಿ ಆಳದವರೆಗೆ ಬಾವಿ ತೆಗೆದಾಗ ನೀರು ಬಂದರೆ, ಅದರ ಪಕ್ಕದ ಜಮೀನಿನ ರೈತನು ಬಾವಿಯನ್ನು ೬೦ ಅಡಿ ಆಳದವರೆಗೆ ತೆಗೆಯಬೇಕಾಗುತ್ತದೆ. ಇಲ್ಲದಿದ್ದರೆ ನೀರು ಸಾಕಾದಷ್ಟು ಸಿಗುವುದಿಲ್ಲ. ಕೋಲಾರ ಜಿಲ್ಲೆಯ ಶಿಡ್ಲಘಟ್ಟ ಚಿಕ್ಕಬಳ್ಳಾಪುರ ಬೆಂಗಳೂರು ಜಿಲ್ಲೆಯ ದೇವನಹಳ್ಳಿ ಹಾಗೂ ಹೊಸಕೋಟೆಯಲ್ಲಿ ಈ ರೀತಿ ಸಣ್ಣ ಸಣ್ಣ ರೈತರು ಬಹಳ ಹತ್ತಿರದ ಲ್ಲಿಯೇ ಬಾವಿಗಳನ್ನು ತೆಗೆಯುತ್ತಿರುವುದರಿಂದ, ಆ ಬಾವಿಗಳಲ್ಲಿ ಬಹಳ ಕಾಲ ನೀರು ಇರುತ್ತದೆಂದು ಹೇಳು ವುದಕ್ಕಾಗುವುದಿಲ್ಲ. ಆದಕಾರಣ ಇಂತಹ ಪ್ರದೇಶಗಳಲ್ಲಿ ಸಾಮೂಹಿಕ ಬಾವಿಗಳ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಇದರಿಂದ ಸಣ್ಣ ರೈತರಿಗೆ ಅನುಕೂಲವಾಗುತ್ತದೆ ಮತ್ತು ಹೆಚ್ಚಿನ ದಿವಸ ಗಳ ಕಾಲ ಜಲ ಸಿಗುವ ವ್ಯವಸ್ಥೆಯು ಇರುತ್ತದೆ. ಆದಕಾರಣ ಈ ಭಾಗಗಳಲ್ಲಿ ಸಾಮೂಹಿಕ ಬಾವಿಗಳ ವ್ಯವಸ್ಥೆ ಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನು ಈ ಮೊದಲು ಹೂಳು ಸೇರಿರುವ ಕೆರೆಗಳಿಂದ ಹೂಳನ್ನು ತೆಗೆಸುವುದು ಲಾಭದಾಯಕವಲ್ಲ ವೆಂದು, ಅದನ್ನು ಹಾಗೆಯೇ ಕೈಬಿಡಲಾಗಿತ್ತು. ಆದರೆ ಈಗ ಮತ್ತೆ ಈ ಕೆಲಸವನ್ನು ಕೈಕೊಳ್ಳಲಾಗಿದೆ. ಎಂಪ್ಲಾಯ್‌ಮೆಂಟ್ ಅಫರ್‌ಮೇಷನ್ ಸ್ಕೀಮಿನಿಂದ ಈ ಹೂಳು ತೆಗೆಸುವ ಕೆಲಸ ಮಾಡಿಸುತ್ತಿರುವುದರಿಂದ ಎರಡು ರೀತಿಯಿಂದ ಉಪಯೋಗವಾಗಿದೆ. ಮೊದಲನೆಯದಾಗಿ ಕೆರೆಯ ಮೇಲ್ಭಾಗದ ಮಣ್ಣು ರೈತರಿಗೆ ಗೊಬ್ಬರದ ರೂಪದಲ್ಲಿ ಉಪಯೋಗಕ್ಕೆ ಬರುತ್ತದೆ. ಎರಡನೆಯದಾಗಿ ಗ್ರಾಮಾಂತರ ಪ್ರದೇಶದಲ್ಲಿರ ತಕ್ಕಂಥ ನಿರುದ್ಯೋಗಿಗಳಿಗೆ ಈ ಯೋಜನೆಯಿಂದ ಕೆಲಸ ಸಿಗುತ್ತದೆ. ಈ ಯೋಜನೆಯ ಕೆಳಗೆ ಕೆಲಸ ಮಾಡುವವರಿಗೆ ಆಹಾರ ಧಾನ್ಯ ಕೊಡುವುದರಿಂದ, ರೈತರು ಬೆಳೆಯುವ ಆಹಾರ ಧಾನ್ಯಗಳನ್ನು ಸರ್ಕಾರ ದವರು ಲೆವಿ ಮೂಲಕ ಪಡೆದುಕೊಂಡು ಅವರಿಗೆ ಸಪೋರ್ಟ್ ಪ್ರೈಸ್ ಸಿಗುವಂತಹ ಒಂದು ವ್ಯವಸ್ಥೆ ಮಾಡಿರುವುದರಿಂದ ರೈತರಿಗೂ ಅನುಕೂಲವಾಗಿದೆ. ಮುಕ್ತ ಮಾರುಕಟ್ಟೆಯ ಮೂಲಕ ರೈತರಿಗೆ ಸಪೋರ್ಟ್ ಪ್ರೈಸ್ ಸಿಗುವುದಕ್ಕೆ ಸಾಧ್ಯವಿಲ್ಲ. ಏನಿದ್ದರೂ ಸರ್ಕಾರದವರು ಲೆವಿ ಮೂಲಕ ತೆಗೆದು ಕೊಂಡರೆ ಅವರಿಗೆ ಸಪೋರ್ಟ್ ಪ್ರೈಸ್ ಸಿಗುತ್ತದೆ. ಒಟ್ಟಿನಲ್ಲಿ ಈ ಎಂಪ್ಲಾಯ್‌ಮೆಂಟ್ ಅಫರ್‌ಮೇಷನ್ ಸ್ಕೀಮಿನಿಂದ ನಾನಾ ರೀತಿಯ ಅನುಕೂಲಗಳಾಗುತ್ತಿರುವುದರಿಂದ ಇದಕ್ಕೆ ಇನ್ನೂ ಹೆಚ್ಚಿನ ಗ್ರಾಂಟ್ಸ್ ಕೊಟ್ಟು, ಈ ಕೆಲಸವನ್ನು ತ್ವರಿತಗತಿಯಿಂದ ಹೆಚ್ಚು ಹೆಚ್ಚಾಗಿ ಮಾಡಿಸಬೇಕೆಂದು ಹೇಳುತ್ತೇನೆ. ಈ ಕೆರೆಗಳಲ್ಲಿ ಹೂಳು ತುಂಬಿಕೊಳ್ಳಲು ಕಾರಣ ಕ್ಯಾಚ್‌ಮೆಂಟ್ ಏರಿಯಾದಲ್ಲಿ ಯಾವ ಅಡೆತಡೆಗಳೂ ಇಲ್ಲದ ಕಾರಣ ಮೇಲ್ಭಾಗದ ಮಣ್ಣೆಲ್ಲಾ ಕೊಚ್ಚಿಕೊಂಡು ಕೆರೆಗಳಿಗೆ ಬರುತ್ತವೆ ಆದಕಾರಣ ಮಣ್ಣು ಬರದಂತೆ ಏನಾದರೂ ತಡೆ ಹಾಕಬೇಕು. ಆಗ ಕೆರೆಗಳಿಗೆ ಹೂಳು ಬರುವುದಿಲ್ಲ. ಕೆರೆಗಳಲ್ಲಿ ಹೂಳು ತುಂಬಿಕೊಳ್ಳಲು ಮತ್ತೊಂದು ಕಾರಣವೆಂದರೆ, ಕೆರೆಗಳ ಅಂಗಳಗಳಲ್ಲಿ ರೈತರು ತಮ್ಮ ಜಮೀನನ್ನು ಒತ್ತುವರಿ ಮಾಡಿ ಕೊಂಡು ವ್ಯವಸಾಯ ಮಾಡುವುದು. ಇದು ಎಲ್ಲ ಕಡೆಯೂ ನಡೆಯುತ್ತದೆ. ಈ ಎರಡು ಕಾರಣ ಗಳಿಂದ ಹೂಳು ಜಾಗ್ರತೆ ಕೆರೆಗಳಲ್ಲಿ ತುಂಬಿಬಿಡುತ್ತದೆ. ಇದರಿಂದ ಅಲ್ಲಿ ಜಾಸ್ತಿ ನೀರು ನಿಲ್ಲಲು ಅವಕಾಶ ವಿರುವುದಿಲ್ಲ. ದೊಡ್ಡ ದೊಡ್ಡ ಕೆರೆಗಳಲ್ಲಿಯೂ ಸಹ ವರ್ಷಕ್ಕೆ ಎರಡು ಸಲ ಮಳೆ ನೀರು ತುಂಬಿದರೆ ಮಾತ್ರ ಅದರಿಂದ ವ್ಯವಸಾಯ ಮಾಡಲು ಸಾಧ್ಯ; ಇಲ್ಲದಿದ್ದರೆ ಬೆಳೆಗೆ ನೀರು ಚೆನ್ನಾಗಿ ಆಗುವುದಿಲ್ಲ. ಆದ

ಕಾರಣ ಕೆರೆಯ ಅಂಗಳವನ್ನು ಒತ್ತುವರಿ ಮಾಡಿಕೊಳ್ಳುವುದನ್ನು ತಪ್ಪಿಸಬೇಕೆಂದು, ಇದರ ಕಡೆಗೆ ಗಮನ ಕೊಡಬೇಕೆಂದು ಹೇಳುತ್ತೇನೆ. ಮತ್ತು ಕೆರೆಗಳಿಗೆ ಹೂಳು ಬರುವುದನ್ನು ತಡೆಯಲು ರೇವುಗಳಿಗೆ ಸಿಲ್ಟ್ ಟ್ರಾಪ್ ಹಾಕುವ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಪಶುಸಂಗೋಪನಾ ಇಲಾಖೆಯ ಬಗ್ಗೆ ಹೇಳಬೇಕೆಂದರೆ, ನಮ್ಮ ರಾಜ್ಯದಲ್ಲಿ ಗೋಹತ್ಯೆಯನ್ನು ನಿಷೇಧ ಮಾಡಿದ್ದೇವೆಂದು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಹಸುಗಳು ಹಾಲನ್ನು ಉತ್ಪಾದನೆ ಮಾಡುವುದರಿಂದ, ಎಕನಾಮಿಕ್ ಕನ್ಸಿಡರೇಷನ್ ದೃಷ್ಟಿಯಿಂದಲಾದರೂ ಗೋಹತ್ಯೆಯನ್ನು ನಿಷೇಧ ಮಾಡಿರುವುದು ಒಳ್ಳೆಯದು, ಈ ನಿಷೇಧ ಮಾಡಿದ ರೂ ಸಹ ಬೆಂಗಳೂರು ನಗರದ ಕಡೆ ಬರುವ ರಸ್ತೆಗಳಲ್ಲಿ ಅನೇಕ ಎತ್ತುಗಳನ್ನು ಮತ್ತು ಕರುಗಳನ್ನು ಅದರಲ್ಲಿಯೂ ಮುಖ್ಯವಾಗಿ ವ್ಯವಸಾಯಕ್ಕೆ ಉಪಯೋಗವಾಗುವಂತಹ ಎತ್ತುಗಳನ್ನು ಕಟುಕರು ಸಾಗಿಸುತ್ತಿರುವುದನ್ನು ನಾವು ನೋಡಬಹುದಾಗಿದೆ. ಈ ವಿಚಾರದಲ್ಲಿ ನಾವು ಹೋದ ಸಲವು ಒಂದು ಸಲಹೆಯನ್ನು ಮಾಡಿದ್ದೆವು, ಏನೆಂದರೆ ವ್ಯವಸಾಯಕ್ಕೆ ಉಪಯೋಗವಾಗುವಂತಹ ಹಾಗೂ ಬಲಾಢ್ಯವಾಗಿರುವಂತಹ ಎತ್ತುಗಳನ್ನು ನೋಡಿಕೊಳ್ಳಲು ಪ್ರತಿ ತಾಲ್ಲೂಕ್ ಕೇಂದ್ರದಲ್ಲಿಯೂ ಗೋಶಾಲೆಗಳನ್ನು ತೆರೆಯಬೇಕೆಂದು ಈಗ ಒಂದು ಎಕರೆ, ಎರಡು ಎಕರೆ ಜಮೀನು ಇಟ್ಟುಕೊಂಡಿರುವ ರೈತರಿಗೆ ಒಂದು ಜೊತೆ ಎತ್ತುಗಳನ್ನು ಇಟ್ಟುಕೊಂಡು ಸಾಕಲು ಆರ್ಥಿಕವಾಗಿ ಶಕ್ತಿ ಇರುವುದಿಲ್ಲ. ಆದಕಾರಣ ಅಂತಹವರಿಗೆ ಸರ್ಕಾರದ ವತಿಯಿಂದ ಎತ್ತುಗಳನ್ನು ಬಾಡಿಗೆ ರೂಪದಲ್ಲಿ ಉಳುವುದಕ್ಕೆ ಬೇಕಾದಾಗ ಕೊಡಬಹುದು. ಆದಕಾರಣ ವ್ಯವಸಾಯಕ್ಕೆ ಉಪಯೋಗವಾಗುವಂತಹ ಎತ್ತುಗಳನ್ನು ನೋಡಿಕೊಳ್ಳಲು ಗೋಶಾಲೆಗಳನ್ನು ತೆರೆಯಬೇಕೆಂದು ಹೇಳುತ್ತೇನೆ. ಈಗ ಕೇರಳದಲ್ಲಿ ಹದಿನಾಲ್ಕು ವರ್ಷ ಒಳಗೆ ವಯಸ್ಸುಳ್ಳ ಎತ್ತುಗಳನ್ನು ಹತ್ಯೆ ಮಾಡಲು ಅವಕಾಶ ಮಾಡಿಕೊಡುವುದಿಲ್ಲವೆಂದು ಹೇಳಿದ್ದಾರೆ. ಅದರಂತೆ ಇಲ್ಲಿಯೂ ಮಾಡಬೇಕು. ಈಗ ಟ್ರಾಕ್ಟರ್ ಮೂಲಕ, ಟಿಲ್ಲರ್ ಮೂಲಕ ವ್ಯವಸಾಯ ಮಾಡಲು ದೊಡ್ಡ ಪ್ರಮಾಣದ ಜಮೀನುಗಳು ನಮ್ಮಲ್ಲಿ ಇಲ್ಲ, ಭೂಶಾಸನದ ಕಾರಣ ಸಣ್ಣ ಪ್ರಮಾಣದ ಜಮೀನುಗಳೇ ನಮ್ಮಲ್ಲಿ ಜಾಸ್ತಿ ಇರುವುದು. ಆದಕಾರಣ ರೈತರು ವ್ಯವಸಾಯಕ್ಕೆ ಎತ್ತುಗಳನ್ನೆಲ್ಲ ಅವಲಂಬಿಸಬೇಕಾಗಿದೆ. ಈ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳು ಇದರ ಕಡೆಗೆ ಯೋಚನೆ ಮಾಡಬೇಕೆಂದು ಹೇಳುತ್ತೇನೆ.

೬-೧೦ ಪಿ.ಎಂ.

ಜೈಲು ವಿಚಾರದಲ್ಲಿ ಒಂದು ಮಾಹಿತಿ ಬಂದಿದೆ ಸ್ವಾಮಿ. ೧೯೭೬-೭೭ ; ೧೯೭೭-೭೮ ; ೧೯೭೮-೭೯ ಈ ಸಾಲುಗಳಲ್ಲಿ ಖೈದಿಗಳಿಗೆ ಕೆಲಸ ಮಾಡಿಸಿದ್ದಕ್ಕಾಗಿ ಕೂಲಿ ಏನು ಕೊಟ್ಟಿದ್ದಾರೆಂದರೆ, ೧೯೬೧ನೇ ಇಸವಿಯಲ್ಲಿ ಏನು ದಿನಕ್ಕೆ ೨೫ ಪೈಸೆ ; ೫೦ ಪೈಸೆ ಇತ್ತು ಅದನ್ನು ೧೯೭೩ರಲ್ಲಿ ೧-೫೦ ರೂಪಾಯಿ ೨-೦೦ ರೂಪಾಯಿ ಮಾಡಿದ್ದಾರೆ. ಜೈಲುಗಳ ಉತ್ಪತ್ತಿ ೧೯೭೬-೭೭ರಲ್ಲಿ ೫೩.೬೩ ಲಕ್ಷ ಇದ್ದಿದ್ದು ೧೯೭೭-೭೮ರಲ್ಲಿ ೪೦.೫ ಲಕ್ಷಕ್ಕೆ ಇಳಿದಿದೆ. ಆದರೆ ೧೯೭೬-೧೯೭೭ರಲ್ಲಿ ಕೂಲಿ ಮುಖಾಂತರ ಖೈದಿಗಳಿಗೆ ಏನು ಕೊಡುತ್ತಿದ್ದರು ಎಂದರೆ ಅದು ರೂ. ೫೯.೧೭೮ ಇದ್ದುದು ೧೯೭೭-೭೮ಕ್ಕೆ ೧,೧೦,೫೧೮ ರೂಪಾಯಿಗಳು ಆಯಿತು. ೧೯೬೦ರ ಆಕ್ಟ್ ಪ್ರಕಾರ ಏನು ಕೂಲಿ ಇತ್ತು ಅದರ ಪ್ರಕಾರ ೧೯೭೬-೭೭ರಲ್ಲಿ ರೂ ೫೯, ೧೭೮ ಮತ್ತು ೧೯೭೭-೭೮ಕ್ಕೆ ೧,೧೦,೫೧೮ ರೂ. ಕೊಟ್ಟಿರುತ್ತಾರೆ. ಆದುದರಿಂದ ೧೯೭೭-೭೮ರಲ್ಲಿ ಹೆಚ್ಚು ಈ ಕೆಲಸವಾಗಿದೆಯೆಂದು ಅರ್ಥವಾಗುತ್ತದೆ. ಜೈಲಿನಲ್ಲಿ ಇಷ್ಟೊಂದು ಉತ್ಪತ್ತಿ ಬಂದಿದ್ದರೂ ಅದೆಲ್ಲಾ ಎಲ್ಲಿ ಹೋಯಿತು ? ತಾವು ಇದನ್ನು ಕಂಡುಹಿಡಿಯಬೇಕಾಗುತ್ತದೆ. ೧೯೭೬-೭೭ರಲ್ಲಿ ೫೩ ಲಕ್ಷ ರೂಪಾಯಿ ಉತ್ಪತ್ತಿ ಇತ್ತು ೧೯೭೭-೭೮ರಲ್ಲಿ ೪೦.೫ ಲಕ್ಷಕ್ಕೆ ಇಳಿಯಿತು. ಅಂದರೆ ೧೩ ಲಕ್ಷ ಕಡಿಮೆಯಾಯಿತು. ಕೊಟ್ಟಿರುವ ವೇಜಸ್ ಒಂದಕ್ಕೆ ಎರಡರಷ್ಟು ಆಗಿದೆ. ನಾನೂ ಕೆಲವಾರು ತಿಂಗಳು ಜೈಲಿನಲ್ಲಿ ಇದ್ದೆ. ಅಲ್ಲಿ ಏನು ಅವ್ಯವಸ್ಥೆ ಇದೆ, ಅಲ್ಲಿ ಎಷ್ಟು ಉತ್ಪತ್ತಿಯಾಗುತ್ತದೆ ಏನು ಆಗುತ್ತದೆ ಎಂಬುದನ್ನೆಲ್ಲಾ ನಾನು ಹೋದ ವರ್ಷ ಈ ಸದನದಲ್ಲಿ ಹೇಳಿದ್ದೆ. ಈ ರೀತಿ ಆಗುವುದಾದರೆ ನನಗೆ ಅನುಮಾನ ಇದೆ. ಅದೇನೆಂದರೆ ಇಷ್ಟೊಂದು ಹೆಚ್ಚಿನ ಕೂಲಿ ಕೊಟ್ಟಿದ್ದರೂ ಉತ್ಪತ್ತಿ ಕಡಿಮೆಯಾಗಬೇಕಾದರೆ ಕಾರಣ ಏನೋ ಇದೆ. ಅದನ್ನು ಕಂಡುಹಿಡಿಯಬೇಕು.

ಇನ್ನು ಅಂಡರ್ ಟ್ರಯಲ್ಸ್ ವಿಚಾರದಲ್ಲಿ ಹೇಳುವುದಾದರೆ ೬ ತಿಂಗಳ ಮೇಲೆ ಇರುವಂತಹವರನ್ನು ಕೋರ್ಟಿಗೆ ಹಾಜರು ಮಾಡಿ ವಿಚಾರಣೆ ನಡೆಸಿ ಅವರು ತಪ್ಪಿತಸ್ಥರಲ್ಲ ಎಂದು ಕಂಡಕೂಡಲೇ ಅವರನ್ನು ಬಿಡುಗಡೆ ಮಾಡಬೇಕು. ನಮ್ಮ ರಾಜ್ಯದಲ್ಲಿ ಇರುವಷ್ಟು ಜನ ಅಂಡರ್ ಟ್ರಯಲ್ಸ್ ಬೇರೆ ರಾಜ್ಯದಲ್ಲಿ

ಇಲ್ಲ. ಅವರು ಯಾವುದೇ ತಪ್ಪು ಮಾಡಿದ್ದರೂ ನ್ಯಾಯಾಲಯದಲ್ಲಿ ತೀರ್ಮಾನವಾಗುವವರೆಗೂ ನಿರಪರಾಧಿಗಳಾಗಿರತಕ್ಕಂತಹ ಅಂಡರ್ ಟ್ರಯಲ್ಸ್ ೬ ತಿಂಗಳ ಮೇಲೆ ಇರುವಂತಹವರನ್ನು ತಕ್ಷಣ ಕ್ರಮ ತೆಗೆದುಕೊಂಡು ಬಿಡುಗಡೆ ಮಾಡಬೇಕು. ಅವರ ಮೇಲೆ ಕೇಸನ್ನು ಹಾಕಿ ಅವರು ಶಿಕ್ಷಾರ್ಹರಾಗಿದ್ದರೆ ಅವರಿಗೆ ಶಿಕ್ಷೆಯನ್ನು ಮಾಡಬೇಕು. ಆದುದರಿಂದ ಇದನ್ನು ಕೂಡಲೇ ಗಮನಕ್ಕೆ ತೆಗೆದುಕೊಳ್ಳಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಪೋಲೀಸ್ ವಿಚಾರದಲ್ಲಿ ಒಂದು ಮಾತನ್ನು ಹೇಳುತ್ತೇನೆ, ಇವರ ಬಗ್ಗೆ ಮಾನ್ಯ ಸದಸ್ಯರು ಅನೇಕರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಆದ್ದರಿಂದ ಪೋಲೀಸ್ ಆಡಳಿತದ ಬಗ್ಗೆ ನಾನು ಹೆಚ್ಚು ಕಾಮೆಂಟ್ ಮಾಡುವುದಕ್ಕೆ ಹೋಗುವುದಿಲ್ಲ. ಯಾವುದೇ ಹಣದ ಪ್ರಭಾವದಿಂದಾಗಲಿ, ಯಾವುದೋ ಒಂದು ರಾಜಕೀಯದ ಒತ್ತಡದಿಂದಾಗಲಿ, ಅಥವಾ ಅಧಿಕಾರದ ಪ್ರಭಾವದಿಂದಾಗಲಿ ಪೋಲೀಸಿನವರು ಒಂದು ರೀತಿ ನೋಡಿಕೊಂಡು ಹೋಗುತ್ತಾರೆ. ಆದರೆ ಸಾಮಾನ್ಯ ಪ್ರಜೆ ಪೋಲೀಸ್ ಸ್ಟೇಷನಲ್ಲಿ ಇದ್ದಾಗ ಅವರನ್ನು ನೋಡಿಕೊಳ್ಳುವ ಬಗೆಯೇ ಬೇರೆ ತರನಾದುದು. ಆದ್ದರಿಂದ ಸಬ್‌ಇನ್ಸ್‌ಪೆಕ್ಟರ್ ಕೆಳಗಡೆ ಇರುವ ಅಧಿಕಾರಿಗಳು ಯಾವ ರೀತಿ ನೋಡಿಕೊಳ್ಳುತ್ತಾರೆ ಎನ್ನುವ ಬಗ್ಗೆ ನಾನು ಒಂದು ಉದಾಹರಣೆ ಹೇಳುತ್ತೇನೆ. ನಾನು ಇದರ ಬಗ್ಗೆ ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೇನೆ. ಅದು ಏನೆಂದರೆ ಒಬ್ಬ ವ್ಯಕ್ತಿಯ ತಂದೆಯವರು ಪ್ರಭಾವಯುತ ವ್ಯಕ್ತಿಗಳಾದುದರಿಂದ ಆ ಹುಡುಗ ಅರೆಸ್ಟ್ ಮಾಡುವುದಕ್ಕೆ ಅವರ ಮನೆಗೆ ಹೋದಾಗ, ಅವರು ಹುಡುಗನನ್ನು ಮನೆಯಲ್ಲಿಟ್ಟುಕೊಂಡು ಈ ಬಗ್ಗೆ ಆ ವ್ಯಕ್ತಿಯ ತಂದೆ ಪೋಲೀಸ್ ಕಮಿಷನರ್‌ಗೆ ಪೋನ್ ಮಾಡಿದರು. ಆದ್ದರಿಂದ ಆ ವ್ಯಕ್ತಿಯ ಮೇಲೆ ಯಾವ ಕ್ರಮವನ್ನು ತೆಗೆದುಕೊಳ್ಳಲಿಲ್ಲ, ಹಾಗೆಯೇ ನನ್ನ ಕ್ಷೇತ್ರದಲ್ಲಿ ಒಂದು ಸ್ಲಂ ಏರಿಯಾ ಇದೆ. ಅದು ವಿಲ್ಸನ್ ಗಾರ್ಡನ್ ಪೋಲೀಸ್ ಠಾಣೆಯ ವ್ಯಾಪ್ತಿಗೆ ಸೇರಿದ್ದು, ಅಲ್ಲಿ ಒಂದು ಗಲಾಟೆ ನಡೆದು ಗದ್ದಲವಾಯಿತು. ಆಗ ಈ ಗಲಾಟೆ ಬಿಡಿಸಲು ಮಧ್ಯಪ್ರವೇಶ ಮಾಡಿದವನನ್ನು ಪೋಲೀಸ್ ಸ್ಟೇಷನ್‌ಗೆ ಎಳೆದುಕೊಂಡು ಹೋದರು. ಅವನನ್ನು ಅಲ್ಲಿ ಹೊಡೆದರು. ಆಮೇಲೆ ಅವನನ್ನು ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿ ಅವನಿಗೆ ಒಂದು ದಿವಸ ವೈದ್ಯಕೀಯ ಉಪಚಾರವನ್ನು ಕೊಟ್ಟು ಅವನನ್ನು ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಮಾಡಿದರು. ಕೆಲವು ದಿನಗಳಾದ ಮೇಲೆ ಆಸ್ಪತ್ರೆಗೆ ಹೋಗಿ ಅವನು ಆಟೋರಿಕ್ಷಾದಲ್ಲಿ ವಾಪಸ್ ಬರುವಾಗ ಸತ್ತುಹೋದ. ಈ ರೀತಿ ಪೋಲೀಸಿನವರ ಅತ್ಯಾಚಾರ ನಡೆಯುತ್ತಿದೆ. ಹಣ, ಅಧಿಕಾರ, ರಾಜಕೀಯ ಪ್ರಭಾವ ಇದ್ದವರು ಹೇಗೋ ಬಚಾವಾಗುತ್ತಾರೆ. ಸಾಮಾನ್ಯ ಪ್ರಜೆ ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಈ ವ್ಯತ್ಯಾಸವನ್ನು ಹೋಗಲಾಡಿಸುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಪ್ರಯತ್ನ ಮಾಡಬೇಕು. ಮತ್ತು ಸಬ್‌ಇನ್ಸ್‌ಪೆಕ್ಟರ್ ಕೆಳಗಡೆ ಇರತಕ್ಕಂತಹ ಅಧಿಕಾರಿಯನ್ನು ಸರಿಯಾಗಿ ತಾಕೀತು ಮಾಡಬೇಕಾಗುತ್ತದೆ.

ಇನ್ನು ರ್‍ಯಾಂಕ್ ಪ್ರಮೋಟರ್ಸ್ ಬಗ್ಗೆ ಒಂದು ವಿಚಾರವನ್ನು ಹೇಳಬಯಸುತ್ತೇನೆ. ಕಾನ್‌ಸ್ಟೇಬಲ್ ಅಥವಾ ಹೆಡ್ ಕಾನ್‌ಸ್ಟೇಬಲ್ ಆಗಿ ಸರ್ಕಾರಿ ಸೇವೆಗೆ ಸೇರುತ್ತಾರೆ. ಅವರಿಗೆ ಅನುಭವದ ಮೇಲೆ ಪ್ರಮೋಷನ್ ಸಿಕ್ಕುತ್ತದೆ. ಈಗ ಸಾಮಾನ್ಯವಾಗಿ ಸಬ್‌ಇನ್ಸ್‌ಪೆಕ್ಟರ್ ಹುದ್ದೆಗೆ ನೇರವಾಗಿ ಪದವೀಧರ ಯುವಕರನ್ನು ನೇಮಕ ಮಾಡುತ್ತಿದ್ದಾರೆ. ಇನ್ನು ೧೦–೧೫–೨೦ ವರ್ಷ ಸರ್ವೀಸ್ ಮಾಡಿ ಬಡ್ತಿ ಹೊಂದಿದಂತಹ ಸಬ್‌ಇನ್ಸ್‌ಪೆಕ್ಟರ್‌ಗಳನ್ನು ಸ್ಟೇಷನ್ ಇನ್‌ಚಾರ್ಜ್ ಆಗಿ ಹಾಕುವುದಿಲ್ಲ. ಸಿ.ಓ.ಡಿ.ಗೋ ಅಥವಾ ಟ್ರಾಫಿಕ್‌ಗೋ ಹಾಕುತ್ತಾರೆ. ಆದ್ದರಿಂದ ಜಿಗುಪ್ಸೆ ಮತ್ತು ಬೇಜಾರು ಉಂಟಾಗುತ್ತದೆ. ಆದ್ದರಿಂದಲೇ ಪಂಜಾಬು, ಮಧ್ಯಪ್ರದೇಶ, ರಾಜಸ್ಥಾನ ಈ ರಾಜ್ಯಗಳಲ್ಲಿ ೨೦–೨೫ ವರ್ಷ ಸೇವೆ ಸಲ್ಲಿಸಿರತಕ್ಕ ಕಾನ್‌ಸ್ಟೇಬಲ್‌ಗಳನ್ನು ಇಲಾಖೆಯವರು ಸರಿಯಾಗಿ ನೋಡಿಕೊಳ್ಳದೇ ಇರುವುದರಿಂದ ಸಾವಿರಾರು ಜನರು ಚಳುವಳಿ ಮಾಡುತ್ತಿದ್ದಾರೆ. ಈ ದೃಷ್ಟಿಯಿಂದ ರ್‍ಯಾಂಕ್ ಪ್ರಮೋಟರ್‌ಗಳಿಗೆ ಅನ್ಯಾಯ ಆಗದಂತೆ ನೋಡಿಕೊಂಡು ಈಗ ಆಗಿರತಕ್ಕ ಅನ್ಯಾಯಗಳನ್ನು ಸರಿಪಡಿಸಬೇಕು ಎಂದು ಕೇಳಿಕೊಂಡು ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Business of the House

MR. SPEAKER—The discussion is concluded.

It has been decided in consultation with the usual channels that there may be no question hour or Calling Attention Notices or Notices under rule 312 to-morrow so that more time is available for replies to the debate on the demands that has taken place during the lats 3 days. The discussion on the demands relating to the Minister for Rural Development and Panchayati Raj will also start tomorrow and will conclude on Saturday, the 26th May 1979. The House now stands adjourned and will meet at 12 Noon tomorrow.

The House adjourned at Nine Minutes past Six of the Ctock to meet at Twelve of the clock, on Friday the 25th May 1979.